ಕರ್ನಾಟಕ ಸರ್ಕಾರ



# ಆಯವ್ಯಯ

## ೨೦೦೯-೧೦



ಮಂಡಿಸಿದವರು

**ಡಾ. ಬಿ.ಎಸ್. ಯಡಿಯೂರಪ್ಪ**

ಮಾನ್ಯ ಮುಖ್ಯಮಂತ್ರಿಗಳು

೨೦ನೇ ಫೆಬ್ರವರಿ, ೨೦೦೯

**ಸನ್ಮಾನ್ಯ ಸಭಾಧ್ಯಕ್ಷರೇ,**

1. ಕರ್ನಾಟಕ ಸರ್ಕಾರದ 2009–10ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ನಾನು ಹರ್ಷಿಸುತ್ತೇನೆ. ರಾಜ್ಯದ ಜನತೆಯ ಆಶೀರ್ವಾದದಿಂದ ಸತತ ನಾಲ್ಕು ಬಾರಿ ಮುಂಗಡ ಪತ್ರ ಮಂಡಿಸುವ ಅವಕಾಶ ನನಗೆ ದೊರೆತಿದೆ. ಈ ಅವಕಾಶವಿತ್ತ ಜನತೆಗೆ ನಾನು ಋಣಿಯಾಗಿದ್ದೇನೆ.

2. ಕರ್ನಾಟಕದ ಜನತೆಯ ಆಶಯದಂತೆ 2008ರ ಮೇ 30ರಂದು ಅಸ್ತಿತ್ವಕ್ಕೆ ಬಂದ ಭಾರತೀಯ ಜನತಾ ಪಕ್ಷದ ಸರ್ಕಾರ ತನ್ನ ಅಧಿಕಾರಾವಧಿಯ ಒಂಬತ್ತನೆ ತಿಂಗಳನ್ನು ಪ್ರವೇಶಿಸಿದೆ. ಸ್ಥಿರ ಸರ್ಕಾರವನ್ನು ಬಯಸಿದ ಜನತೆ ಉಪ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲಿಸುವ ಮೂಲಕ ಸರ್ಕಾರಕ್ಕೆ ಸ್ಥಿರತೆ ತಂದುಕೊಟ್ಟಿದ್ದಾರೆ. ನಮ್ಮ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆ ಒಪ್ಪಿಕೊಂಡಿದ್ದಾರೆ ಎಂಬುದು ಇದರಿಂದ ದೃಢಪಟ್ಟಿದೆ. ಸ್ಥಿರತೆ ಮತ್ತು ಅಭಿವೃದ್ಧಿಗಾಗಿ ಜನಾದೇಶ ದೊರೆತಿದೆ. ಇದರಿಂದ ಸರ್ಕಾರಕ್ಕೆ ಆನೆಬಲ ಬಂದಿದೆ. ಈ ಜನಾದೇಶವನ್ನು ಅಭಿವೃದ್ಧಿಯ ವೇಗ ಮತ್ತು ವಿಸ್ತಾರವನ್ನು ಹೆಚ್ಚಿಸಲು ಬಳಕೆ ಮಾಡಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ನಾಡಿನ ಜನತೆಗೆ ಭರವಸೆ ನೀಡುತ್ತೇನೆ.

**"ನನ್ನ ಕನಸಿನ ರಾಮರಾಜ್ಯದಲ್ಲಿ ಭಿಕ್ಷುಕನಿಗೂ, ಭೂಪತಿಗೂ ಸರಿಸಮಾನವಾದ ಹಕ್ಕುಗಳು ದೊರೆಯುವವು".**

3. ಮಹಾತ್ಮ ಗಾಂಧೀಜಿಯವರು ಅಮೃತ ಬಜಾರ್ ಪತ್ರಿಕೆಯ 1934ರ ಆಗಸ್ಟ್ 2ರ ಸಂಚಿಕೆಯಲ್ಲಿ ಬರೆದ ತಮ್ಮ ಲೇಖನದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಈ ಮಾತು ನಮಗೆ ದಾರಿದೀಪ. ಸರ್ವರನ್ನೂ ಸಮಾನವಾಗಿ ಪರಿಭಾವಿಸಿ ಎಲ್ಲರ ಅಭ್ಯುದಯಕ್ಕೆ ಶ್ರಮಿಸುವ ಸಂಕಲ್ಪ ತೊಡಲು ಸ್ಫೂರ್ತಿ. ಈ ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನಿರಿಸಿದ್ದೇವೆ.

4. ಅಧಿಕಾರಕ್ಕೆ ಬಂದ ದಿನದಿಂದ ಇಲ್ಲಿಯವರೆಗೆ ನಮ್ಮ ಸರ್ಕಾರಕ್ಕೆ ಹಲವು ಕಠಿಣ ಸವಾಲುಗಳು ಎದುರಾಗಿವೆ. ಅವುಗಳನ್ನು ಪರಿಹರಿಸಿಕೊಂಡು ಯಶಸ್ವಿಯಾಗಿ ಮುನ್ನಡೆದಿದ್ದೇವೆ. ರಾಜ್ಯದಲ್ಲಿ ರಸಾಯನಿಕ ಗೊಬ್ಬರಗಳ ತೀವ್ರ ಅಭಾವ ನಾವು ಎದುರಿಸಿದ ಮೊದಲ ಸವಾಲು. ಈ ಕೊರತೆಗೆ ನಾವು ಕಾರಣರಲ್ಲವಾದರೂ ಸಮಸ್ಯೆ ಬಗೆಹರಿಸುವ ಜವಾಬ್ದಾರಿಯಿಂದ ನುಣುಚಿಕೊಳ್ಳದೆ, ಪರ್ಯಾಯ ವ್ಯವಸ್ಥೆಗೆ ವಿಶೇಷ ಕ್ರಮಗಳನ್ನು ಕೈಗೊಂಡ ತೃಪ್ತಿ ನಮ್ಮದು. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನಾನು ರೈತರ ಹಿತರಕ್ಷಣೆಗೆ ಎಂದೂ ಹಿಂದೆ-ಮುಂದೆ ನೋಡಿಲ್ಲ. ಮುಂಗಾರು ವೈಫಲ್ಯ ಸೃಷ್ಟಿಸಿದ ಅಭಾವ ಪರಿಸ್ಥಿತಿ ನಾವು ಎದುರಿಸಿದ ಮತ್ತೊಂದು ದೊಡ್ಡ ಸವಾಲು. ಸೂಕ್ತ ಪರಿಹಾರ ಕಾಮಗಾರಿಗಳ ಮೂಲಕ ಈ ಸವಾಲಿಗೆ ಸಮರ್ಥ ಉತ್ತರ ಕಂಡುಕೊಂಡೆವು. ತಡವಾಗಿಯಾದರೂ ವರುಣದೇವ ಕೃಪೆ ತೋರಿದ್ದರಿಂದ, ರೈತರು ಈ ವರ್ಷ ಸಮೃದ್ಧ ಎನ್ನದಿದ್ದರೂ ಸಾಧಾರಣವಾದ ಫಸಲನ್ನು ಬೆಳೆಯಲು ಸಾಧ್ಯವಾಗಿದೆ.

5. ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಮಳೆಯ ತೀವ್ರ ಕೊರತೆಯಿಂದಾಗಿ ಜಲಾಶಯಗಳಲ್ಲಿ ಸಾಕಷ್ಟು ನೀರು ಸಂಗ್ರಹವಾಗದೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಕೊರತೆ ಉಂಟಾಗಿದೆ. ಈ ಕೊರತೆಯನ್ನು ನೀಗಿಸಲು ರಾಜ್ಯ ಸರ್ಕಾರ ಹೊರ ರಾಜ್ಯಗಳಿಂದ ಮತ್ತು ಖಾಸಗಿ ಮೂಲಗಳಿಂದ ವಿದ್ಯುತ್‌ಚ್ಛಕ್ತಿ ಖರೀದಿಸುವ ಅನಿವಾರ್ಯ ಒತ್ತಡಕ್ಕೆ ಒಳಗಾಯಿತು. ಈ ಉದ್ದೇಶಕ್ಕೆ ಅಗತ್ಯ ಹೆಚ್ಚುವರಿ ಹಣಕಾಸನ್ನು ಒದಗಿಸಿಕೊಂಡು ವಿದ್ಯುತ್ ಸರಬರಾಜು ಏರುಪೇರಾಗದಂತೆ ನೋಡಿಕೊಳ್ಳಲಾಗಿದೆ. ಇಂತಹ ಸಮಸ್ಯೆಗಳ ನಡುವೆಯೂ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲದ ಕೊರತೆಯಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸುವ ಮೂಲಕ ಸರ್ಕಾರ ಜನತೆಯ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ಹೇಳಲು ಅಭಿಮಾನ ಪಡುತ್ತೇನೆ.

6. ಪ್ರತಿ ನೂರು ದಿನಗಳಿಗೊಮ್ಮೆ ಜನತೆಯ ಮುಂದೆ ಯೋಜನೆ ಮತ್ತು ಸಾಧನೆ ಬಗ್ಗೆ ವಿವರವಾದ ವರದಿಯನ್ನು ಮಂಡಿಸುವ ವಿಶಿಷ್ಠ ಪದ್ಧತಿಯನ್ನು ನಾವು ಪ್ರಾರಂಭಿಸಿದ್ದೇವೆ. ಎರಡನೇ ಶನಿವಾರ ಹೊರತುಪಡಿಸಿ ಪ್ರತಿ ಶನಿವಾರದಂದು ಹೋಬಳಿ ಮಟ್ಟದಲ್ಲಿ **"ಜನಸ್ಪಂದನ"** ಕಾರ್ಯಕ್ರಮ ಆಯೋಜಿಸುವ ಮೂಲಕ ಆಡಳಿತ ಯಂತ್ರವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ದು ಸಮಸ್ಯೆಗಳ ನಿವಾರಣೆಗೆ

ಸ್ಪಂದಿಸಿದ್ದೇವೆ. ಈ ಕಾರ್ಯಕ್ರಮವನ್ನು ಮತ್ತಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮತ್ತು ಜನರ ಸಮಸ್ಯೆಗಳ ನಿವಾರಣೆಯ ದಿಕ್ಕಿನಲ್ಲಿ ಆಡಳಿತ ಯಂತ್ರವನ್ನು ಮುನ್ನಡೆಸಿದ್ದು ಈ ಪ್ರಯತ್ನದಲ್ಲಿ ಮತ್ತಷ್ಟು ಸುಧಾರಣೆ ಹಾಗೂ ದಕ್ಷತೆ ತರಲು ಸರ್ಕಾರ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

7. ಕಳೆದ ಆರು ತಿಂಗಳುಗಳಲ್ಲಿ ರಾಜ್ಯದಾದ್ಯಂತ ನಡೆಸಿದ ಜನಸ್ಪಂದನ ಕಾರ್ಯಕ್ರಮಗಳಲ್ಲಿ ಜನರ ಕುಂದುಕೊರತೆಗಳ ಬಗ್ಗೆ 6.20 ಲಕ್ಷ ಮನವಿಗಳನ್ನು ಸ್ವೀಕರಿಸಿ 5.08 ಲಕ್ಷ (ಶೇ.82) ಮನವಿಗಳನ್ನು ಇತ್ಯರ್ಥಮಾಡಿರುವುದು ಒಂದು ಅಪೂರ್ವ ದಾಖಲೆಯೆಂದು ತಿಳಿಸಲು ಸಂತೋಷಿಸುತ್ತೇನೆ. ಮುಂದಿನ ದಿನಗಳಲ್ಲಿ ಈ ಜನಪ್ರಿಯ ಕಾರ್ಯಕ್ರಮವನ್ನು ವಿಸ್ತರಿಸಿ ಗ್ರಾಮ ಮಟ್ಟದ ಯೋಜನೆಗಳ ಅನುಷ್ಠಾನ, ಕಾಮಗಾರಿಗಳ ತಪಾಸಣೆ, ಹಾಗೂ ಅಂಗನವಾಡಿ ಆಸ್ಪತ್ರೆಗಳಂತಹ ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗೂ ಸಹಾಯಕವಾಗುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

## ಆರ್ಥಿಕ ಪರಿಸ್ಥಿತಿಯ ಹಿನ್ನೆಲೆ

8. 2009-10ನೇ ಸಾಲಿನ ಮುಂಗಡ ಪತ್ರದ ವಿವರಗಳನ್ನು ಸಾದರಪಡಿಸುವ ಮುನ್ನ ಸದ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯನ್ನು ಸ್ಥೂಲವಾಗಿ ವಿವರಿಸಲು ಇಚ್ಛಿಸುತ್ತೇನೆ. 2008-09ನೇ ಸಾಲಿನ ಮಧ್ಯದ ವರೆಗೆ ಅಂದರೆ ಸೆಪ್ಟಂಬರ್ 2008ರವರೆಗೆ ಜಗತ್ತಿನ ಅತ್ಯಂತ ದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುವ ಅಮೆರಿಕ ಮತ್ತು ಇತರ ಹಲವು ದೇಶಗಳಲ್ಲಿ ತಲೆದೋರಿದ ಜಾಗತಿಕ ಹಣಕಾಸಿನ ಮಾರುಕಟ್ಟೆಯ ಬಿಕ್ಕಟ್ಟಿನ ಬಿರುಗಾಳಿಯು ಆ ದೇಶಗಳ ಅರ್ಥ ವ್ಯವಸ್ಥೆಯ ಹಲವಾರು ಬೃಹತ್ ಸಂಸ್ಥೆಗಳನ್ನು ತೀವ್ರ ಕ್ಷೋಭೆಗೊಳಪಡಿಸಿ ನಾಶಪಡಿಸಿದೆ. ಹಣಕಾಸಿನ ಮಾರುಕಟ್ಟೆಗಳ ಅನಿರೀಕ್ಷಿತ ಕುಸಿತದಿಂದ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯೂ ಸಹ ಗಣನೀಯ ಪ್ರಮಾಣದ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಿದೆ. ನಮ್ಮ ದೇಶದ ಹಣಕಾಸಿನ ಮಾರುಕಟ್ಟೆಗಳಲ್ಲಿ ತೊಡಗಿಸಿದ್ದ ವಿದೇಶಿ ಹೂಡಿಕೆಗಳನ್ನು ಗಣನೀಯ ಪ್ರಮಾಣದಲ್ಲಿ ಹಿಂತೆಗೆದುಕೊಂಡ ಪರಿಣಾಮವಾಗಿ ನಮ್ಮ ಹಣಕಾಸಿನ ಮಾರುಕಟ್ಟೆಯಲ್ಲಿ ತೀವ್ರ ಕುಸಿತ ಉಂಟಾಗಿದೆ. 2008ರ ಸೆಪ್ಟಂಬರ್ ಅಂತ್ಯದವರೆಗೆ

ಹಣದುಬ್ಬರದ ಪರಿಸ್ಥಿತಿಯನ್ನು ನಿಯಂತ್ರಿಸಲು ಅನುಸರಿಸಿದ್ದ ಬಿಗಿ ಹಣಕಾಸಿನ ನೀತಿಯನ್ನು ಬದಲಾಯಿಸಿ ಹಣಕಾಸಿನ ಮಾರುಕಟ್ಟೆಯಲ್ಲಿ ಹೆಚ್ಚಿನ ಹಣಕಾಸಿನ ಲಭ್ಯತೆಗೆ ಅನುವು ಮಾಡಿಕೊಡಬೇಕಾಗಿ ಬಂದಿದೆ. ಇದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿ ದರಗಳನ್ನು ಶೇ. 9 ರಿಂದ ಶೇ.5.5ಕ್ಕೆ ಇಳಿಸಿರುವುದಲ್ಲದೆ, ಹಣಕಾಸಿನ ಸಂಸ್ಥೆಗಳು ಹೊಂದಿರಬೇಕಾದ ಕಡ್ಡಾಯ ನಗದು ಇಡುಗಂಟಿನ ಪ್ರಮಾಣವನ್ನು ಸಹ ಗಣನೀಯವಾಗಿ ಸಡಿಲಿಸಿದೆ.

9. ನಮ್ಮ ದೇಶದ ಹಣಕಾಸಿನ ಮಾರುಕಟ್ಟೆಯಲ್ಲಿ ಉದ್ಭವಿಸಿದ ಬಿಕ್ಕಟ್ಟಿನ ದೆಸೆಯಿಂದ ದೇಶದ ಕೈಗಾರಿಕೆಗಳಿಗೆ ಅಗತ್ಯವಿರುವ ಬಂಡವಾಳದ ಲಭ್ಯತೆಯಲ್ಲಿ ವ್ಯತ್ಯಯ ಉಂಟಾಗಿದೆ. ಇದೇ ಸಂದರ್ಭದಲ್ಲಿ ಹೊರ ದೇಶಗಳಲ್ಲಿ ಉಂಟಾಗಿರುವ ವ್ಯಾಪಕವಾದ ಆರ್ಥಿಕ ಹಿಂಜರಿತದ ಪರಿಣಾಮವಾಗಿ ನಮ್ಮ ರಫ್ತು ಸಾಮಗ್ರಿಗಳಿಗೆ ಬೇಡಿಕೆ ಕಡಿಮೆಯಾಗಿದ್ದು ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ ಉತ್ಪಾದನೆಗೆ ಅಡಚಣೆ ಉಂಟಾಗಿದೆ.

10. ಮೇಲ್ಕಂಡ ಜಾಗತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮ ದೇಶದ ಅರ್ಥ ವ್ಯವಸ್ಥೆಯು ಹಿಂದೆ ನಿರೀಕ್ಷಿಸಿದ್ದಂತೆ ವಾರ್ಷಿಕ ಶೇ.9ರ ಪ್ರಮಾಣದಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಸಾಧ್ಯವಾಗದೆ, 2008-09ನೆಯ ಸಾಲಿನ ಬೆಳವಣಿಗೆಯನ್ನು ಶೇ.7ರ ದರದಲ್ಲಿ ಸಾಧಿಸಬಹುದೆಂದು ಕೇಂದ್ರ ಸರ್ಕಾರದ ಮೂಲಗಳಿಂದ ಅಂದಾಜು ಮಾಡಲಾಗಿದೆ. ರಾಷ್ಟ್ರಮಟ್ಟದಲ್ಲಿ ಕೈಗಾರಿಕಾ ಉತ್ಪನ್ನದ ಬೆಳವಣಿಗೆಯು ಕಳೆದ ವರ್ಷದ ಶೇ.8.2ರ ಬೆಳವಣಿಗೆಗೆ ಬದಲಾಗಿ ಈ ಸಾಲಿನಲ್ಲಿ ಶೇ.4.1ಕ್ಕೆ ಇಳಿಯುವ ಸಂಭವವಿರುತ್ತದೆ. ಅದರಂತೆಯೇ ಸೇವಾ ಕ್ಷೇತ್ರದ ಬೆಳವಣಿಗೆಯೂ ಸಹ ಕಳೆದ ವರ್ಷದ ಶೇ.10.8ರ ಬದಲಾಗಿ ಶೇ.9.3ಕ್ಕೆ ಇಳಿಮುಖವಾಗುವುದೆಂದು ಹೇಳಲಾಗಿದೆ. ಕೃಷಿ ಕ್ಷೇತ್ರದ ಉತ್ಪನ್ನದ ಬೆಳವಣಿಗೆಯು 2007-08ರಲ್ಲಿ ಶೇ.4.9 ರಿಂದ ಈ ವರ್ಷ ಶೇ.2.6ಕ್ಕೆ ಇಳಿಯುವುದೆಂದು ಅಂದಾಜು ಮಾಡಲಾಗಿದೆ. ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದ ಮೇಲೆಯೂ ಸಹ ಪ್ರತಿಕೂಲ ಪರಿಣಾಮ ಉಂಟಾಗಿದ್ದು ತೆರಿಗೆ ಸಂಗ್ರಹವು ಆಯವ್ಯಯದ ಅಂದಾಜು ರೂ.6.88 ಲಕ್ಷ ಕೋಟಿಗೆ ಬದಲಾಗಿ ರೂ.6.28 ಲಕ್ಷ ಕೋಟಿ ಆಗುವುದೆಂದು ಅಂದಾಜು ಮಾಡಲಾಗಿದೆ. ಇದರ ಪರಿಣಾಮವಾಗಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 2008-09ರಲ್ಲಿ ರಾಷ್ಟ್ರೀಯ ಆಂತರಿಕ ಉತ್ಪನ್ನದ ಶೇ.6ಕ್ಕೆ ಏರಬಹುದೆಂದು ಅಂದಾಜು ಮಾಡಲಾಗಿದೆ.

11. ಮೇಲ್ಕಂಡ ಪರಿಸ್ಥಿತಿಯಲ್ಲಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ತೀವ್ರ ಬೆಳವಣಿಗೆಯ ಮಾರ್ಗದಲ್ಲಿ ಪುನ:ಸ್ಥಾಪನೆ ಮಾಡಲು ಕೇಂದ್ರ ಸರ್ಕಾರವು ಈವರೆಗೆ ಎರಡು ಬಾರಿ ಆರ್ಥಿಕ ಉತ್ತೇಜನ ಕ್ರಮಗಳನ್ನು ಪ್ರಕಟಿಸಿದ್ದರೂ ಸಹ ಇದರಿಂದ ಗಮನಾರ್ಹ ಬದಲಾವಣೆ ಕಂಡುಬಂದಿರುವುದಿಲ್ಲ. ದಿನಾಂಕ 16.2.2009ರಂದು ಮಂಡಿಸಲಾದ ಕೇಂದ್ರ ಸರ್ಕಾರದ ತಾತ್ಕಾಲಿಕ ಮುಂಗಡ ಪತ್ರದಲ್ಲಿಯೂ ಮೇಲ್ಕಂಡ ಆರ್ಥಿಕ ಹಾಗೂ ವಿತ್ತೀಯ ಪರಿಸ್ಥಿತಿಯ ಸುಧಾರಣೆಗೆ ಯಾವುದೇ ನಿರ್ದಿಷ್ಟ ಮಾರ್ಗಸೂಚಿಯನ್ನು ನಮೂದಿಸಿಲ್ಲವೆಂಬುದು ಅತ್ಯಂತ ನಿರಾಶಾದಾಯಕ ಅಂಶವೆಂದು ತಿಳಿಸಲು ವಿಷಾದಿಸುತ್ತೇನೆ.

12. ಪ್ರಸ್ತುತ ಪರಿಸ್ಥಿತಿಯನ್ನು ಸುಧಾರಿಸಲು ರಾಜ್ಯ ಸರ್ಕಾರಗಳು ಬಂಡವಾಳ ವೆಚ್ಚವನ್ನು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರವು ಸಲಹೆ ಮಾಡಿದ್ದು ಇದಕ್ಕಾಗಿ ಈ ಸಾಲಿನ ಪ್ರತಿ ರಾಜ್ಯದ ವಿತ್ತೀಯ ಕೊರತೆಯ ಶಾಸನಬದ್ಧ ಮಿತಿಯನ್ನು ರಾಜ್ಯದ ಆಂತರಿಕ ಉತ್ಪನ್ನದ ಶೇ.3 ರಿಂದ ಶೇ.3.5ಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡಿದೆ. ಕೇಂದ್ರ ಸರ್ಕಾರವು ಪ್ರಕಟಿಸಿರುವಂತೆ ಯೋಜನಾ ವೆಚ್ಚದಲ್ಲಿ ಸುಮಾರು ರೂ.20,000 ಕೋಟಿ ಹೆಚ್ಚಳವನ್ನು ಸಾಧಿಸಲು ಉದ್ದೇಶಿಸಿದ್ದು ಇದರ ಅಂಗವಾಗಿ ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ.

## ರಾಜ್ಯದ ಆರ್ಥಿಕ ಬೆಳವಣಿಗೆ

13. ಜಾಗತಿಕ ಮಟ್ಟದ ಹಾಗೂ ರಾಷ್ಟ್ರಮಟ್ಟದ ಮೇಲ್ಕಂಡ ವಿದ್ಯಮಾನಗಳು ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ತಮ್ಮದೇ ಪರಿಣಾಮವನ್ನು ಉಂಟು ಮಾಡಿರುತ್ತವೆ. ಈಗಾಗಲೇ ಮಧ್ಯಮಾವಧಿ ವಿತ್ತೀಯ ಪರಿಶೀಲನೆಯ ಮೂಲಕ ಸರ್ಕಾರವು ವಿಧಾನ ಮಂಡಲದ ಬೆಳಗಾವಿ ಅಧಿವೇಶನದಲ್ಲಿ ಪ್ರಕಟಿಸಿರುವಂತೆ ರಾಜ್ಯದ ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ಬೆಳವಣಿಗೆಯು ಸ್ವಲ್ಪ ಮಟ್ಟಿಗೆ ಕುಂಠಿತಗೊಂಡಿರುವುದು ಕಂಡುಬರುತ್ತದೆ. ವಿಶೇಷವಾಗಿ ವಿದೇಶದ ಬೇಡಿಕೆಯನ್ನು ಅವಲಂಬಿಸಿರುವ ಮಾಹಿತಿ ತಂತ್ರಜ್ಞಾನ, ಸಿದ್ಧ ಉಡುಪುಗಳ ಉದ್ಯಮ, ಯಂತ್ರೋಪಕರಣಗಳ ತಯಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಬೇಡಿಕೆಯ ಅಭಾವದಿಂದ ಬಿಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗಿದೆ. ಇದರಿಂದಾಗಿ ರಾಜ್ಯದಲ್ಲಿ ಉದ್ಯೋಗಾವಕಾಶಗಳ

ಬೆಳವಣಿಗೆಗೆ ಅಡ್ಡಿಯುಂಟಾಗಿದೆ. ಬೆಂಗಳೂರು ಮತ್ತಿತರ ನಗರ ಪ್ರದೇಶಗಳಲ್ಲಿ ಸ್ಥಿರ ಆಸ್ತಿಗಳ ವಹಿವಾಟಿನಲ್ಲಿ ಗಣನೀಯ ಹಿಂಜರಿತ ಉಂಟಾಗಿದೆ. ಇದರ ಪರಿಣಾಮವಾಗಿ ರಾಜ್ಯದ ತೆರಿಗೆ ಸಂಗ್ರಹವೂ ಸಹ ನಿರೀಕ್ಷಿತ ಮಟ್ಟವನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಹ ರಾಜ್ಯ ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸಲು ಮತ್ತು ವಿಶೇಷವಾಗಿ 2008-09ರ ಆಯವ್ಯಯದಲ್ಲಿ ಉದ್ದೇಶಿಸಿದಂತೆ ಬಂಡವಾಳ ವೆಚ್ಚವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ.

14. 2009-10ನೆಯ ಸಾಲಿನಲ್ಲಿ ರಾಜ್ಯದ ಕೈಗಾರಿಕಾ ಕ್ಷೇತ್ರವು ಶೇ.5.8ರಷ್ಟು, ಮತ್ತು ಸೇವಾ ವಲಯದ ಚಟುವಟಿಕೆಗಳು ಶೇ.9.2ರಷ್ಟು ಬೆಳವಣಿಗೆ ತೋರಿಸುವುದೆಂದು ಅಂದಾಜು ಮಾಡಲಾಗಿದೆ. ಕೃಷಿ ಕ್ಷೇತ್ರದಲ್ಲಿ ಅಸಮರ್ಪಕವಾದ ಮಳೆಯಿಂದಾಗಿ 2007-08ಕ್ಕೆ ಹೋಲಿಸಿದರೆ ಶೇ.5.7ರಷ್ಟು ಉತ್ಪಾದನೆ ಕಡಿಮೆಯಾಗುವುದೆಂದು ಅಂದಾಜು ಮಾಡಲಾಗಿದೆ. ಈ ಸಾಲಿನಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನವು ಪ್ರಸ್ತುತ ಬೆಲೆಗಳಲ್ಲಿ 2007-08ರ ರೂ.2,33,802 ಕೋಟಿಯಿಂದ 2008-09ರ ಅಂತ್ಯಕ್ಕೆ ಸುಮಾರು ರೂ.2,68,138 ಕೋಟಿ ಆಗುವುದೆಂದು ಅಂದಾಜು ಮಾಡಲಾಗಿದ್ದು, ಒಟ್ಟಾರೆ ಬೆಳವಣಿಗೆಯು ಪ್ರಸ್ತುತ ಸಾಲಿನಲ್ಲಿ 1999-2000ದ ಸ್ಥಿರ ಬೆಲೆಗಳಲ್ಲಿ ಶೇ.5.5ರಷ್ಟು ಮತ್ತು ಪ್ರಸ್ತುತ ಬೆಲೆಗಳಲ್ಲಿ ಶೇ.14.7 ಆಗುವುದೆಂದು ನಿರೀಕ್ಷಿಸಲಾಗಿದೆ. ರಾಜ್ಯದ ಜನರ ತಲಾ ಆದಾಯವು 2007-08ರಲ್ಲಿ (ಪ್ರಸ್ತುತ ಬೆಲೆಗಳಲ್ಲಿ) ರೂ.40809 ಇದ್ದದ್ದು 2008-09ರಲ್ಲಿ ರೂ.46289ಕ್ಕೆ ಏರುವುದೆಂದು ಅಂದಾಜು ಮಾಡಲಾಗಿದೆ.

15. ಜಗತ್ತಿನ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿಯೂ, ಭಾರತದಂತೆ ಕರ್ನಾಟಕ ರಾಜ್ಯವೂ ಸಹ ಗಣನೀಯ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿರುವುದು ನಮ್ಮ ಆರ್ಥಿಕ ವ್ಯವಸ್ಥೆಯ ಸದೃಢತೆಗೆ ಸಾಕ್ಷಿಯಾಗಿದೆ.

## ರಾಜ್ಯದ ವಿತ್ತೀಯ ಪರಿಸ್ಥಿತಿ

16. 2008-09ರ ಮುಂಗಡ ಪತ್ರವನ್ನು ಮಂಡಿಸುವ ಸಂದರ್ಭದಲ್ಲಿ ರಾಜ್ಯದ ವಿತ್ತೀಯ ಸುಧಾರಣೆಗಳ ಚಿತ್ರಣವನ್ನು ನಾನು ಮಾನ್ಯ ಸದನಕ್ಕೆ ನೀಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲು ಇಚ್ಛಿಸುತ್ತೇನೆ. 2004-05ನೇ ಸಾಲಿನಿಂದ ರಾಜ್ಯ

ಸರ್ಕಾರವು ಸತತವಾಗಿ ರಾಜಸ್ವ ವೆಚ್ಚದ ಮೇಲೆ ರಾಜಸ್ವ ಸ್ವೀಕೃತಿಗಳ ಹೆಚ್ಚಳವನ್ನು (Revenue Surplus) ಸಾಧಿಸುತ್ತಾ ಬಂದಿರುವುದಲ್ಲದೆ ವಿತ್ತೀಯ ಕೊರತೆಯನ್ನು (Fiscal Deficit) ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3ರ ಮಿತಿಯಲ್ಲಿ ನಿಯಂತ್ರಿಸಿಕೊಂಡು ಬಂದಿರುತ್ತದೆ. 2008-09ನೆಯ ಸಾಲಿನಲ್ಲಿಯೂ ಸಹ ಇದೇ ಪರಿಸ್ಥಿತಿಯನ್ನು ಮುಂದುವರೆಸುವ ರಾಜ್ಯ ಸರ್ಕಾರದ ಉದ್ದೇಶವನ್ನು ಮುಂಗಡ ಪತ್ರದಲ್ಲಿ ಸೂಚಿಸಲಾಗಿತ್ತು. 2008-09ನೆಯ ಸಾಲಿನ ಪರಿಷ್ಕೃತ ಅಂದಾಜುಗಳ ಪ್ರಕಾರ ರಾಜ್ಯದ ರಾಜಸ್ವ ಸ್ವೀಕೃತಿಗಳು ರೂ.42,818 ಕೋಟಿ ಮತ್ತು ಸಾಲದ ಹೊರತಾಗಿ ಬಂಡವಾಳ ಸ್ವೀಕೃತಿಗಳು ರೂ.271 ಕೋಟಿ ಆಗುವ ನಿರೀಕ್ಷೆಯಿದ್ದು, ಇದು ಆಯವ್ಯಯ ಅಂದಾಜುಗಳಿಗೆ ಹೋಲಿಸಿದರೆ ಶೇ.9.4 ಕಡಿಮೆಯಾಗಿರುತ್ತದೆ. ರಾಷ್ಟ್ರದ ಒಟ್ಟಾರೆ ಆರ್ಥಿಕ ವ್ಯವಸ್ಥೆಯ ಸದ್ಯದ ಪರಿಸ್ಥಿತಿಯನ್ನು ಗಮನಿಸಿ ಕೇಂದ್ರ ಸರ್ಕಾರವು ರಾಜ್ಯದ ವಿತ್ತೀಯ ಕೊರತೆಯ ಮಿತಿಯನ್ನು ಶೇ.3.5ಕ್ಕೆ ಹೆಚ್ಚಿಸಲು ಸಲಹೆ ಮಾಡಿದ್ದು ಅದರಂತೆ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಲು ಉದ್ದೇಶಿಸಿದೆ. ಈ ತಿದ್ದುಪಡಿಯಿಂದ ಒದಗುವ ಹೆಚ್ಚಿನ ವಿತ್ತೀಯ ಅವಕಾಶವನ್ನು ರಾಜ್ಯದ ಅಭಿವೃದ್ಧಿಗಾಗಿ ಬಂಡವಾಳ ವೆಚ್ಚಗಳಲ್ಲಿ ತೊಡಗಿಸಲಾಗುವುದು. ನಿರ್ದಿಷ್ಟವಾಗಿ ಸುಮಾರು ರೂ. 1000 ಕೋಟಿ ಬಂಡವಾಳವನ್ನು ಈ ಮೂಲಕ ರಾಜ್ಯದ ಆದ್ಯತೆಗಳಾದ ವಿದ್ಯುತ್ ಉತ್ಪಾದನೆ, ಉತ್ತಮ ರಸ್ತೆಗಳ ನಿರ್ಮಾಣ, ರೈಲ್ವೆ ಮಾರ್ಗಗಳ ನಿರ್ಮಾಣ ಮತ್ತು ಬಂದರುಗಳ ಅಭಿವೃದ್ಧಿಯಂತಹ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾಗುವುದು. ಇದರಿಂದ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಕೈಗಾರಿಕೆ ಹಾಗೂ ಸೇವಾ ವಲಯಗಳ ಅಭಿವೃದ್ಧಿಯನ್ನು ತೀವ್ರಗೊಳಿಸಲು ಬುನಾದಿಯನ್ನು ಬಲಪಡಿಸಿದಂತಾಗುವುದು.

17. ರಾಜ್ಯ ಸರ್ಕಾರದ ಒಟ್ಟು ಋಣಭಾರವು ಈ ವರ್ಷದ ಅಂತ್ಯದ ವೇಳೆಗೆ ರೂ.71,814 ಕೋಟಿ ಆಗಲಿದ್ದು ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಅಂದಾಜು ರೂ.2,68,138 ಕೋಟಿಯ ಶೇ.27ಕ್ಕಿಂತಲೂ ಕಡಿಮೆ ಇರುತ್ತದೆ. ಸರ್ಕಾರವು ತನ್ನ ಋಣಭಾರದ ಮೇಲೆ ಭರಿಸಬೇಕಾದ ಬಡ್ಡಿಯ ಮೊತ್ತವು ರಾಜ್ಯದ ರಾಜಸ್ವ ಸ್ವೀಕೃತಿಗಳಿಗೆ ಹೋಲಿಸಿದರೆ ಸುಮಾರು ಶೇ.11ರಷ್ಟಿದ್ದು ಇದು 2002-03ರಲ್ಲಿದ್ದ ಶೇ.21 ಪ್ರಮಾಣಕ್ಕಿಂತ ಗಣನೀಯವಾಗಿ ಕಡಿಮೆಯಾಗಿರುತ್ತದೆ.

## ಕೇಂದ್ರದ ತೆರಿಗೆ ಭಾಗಾಂಶ ಹೆಚ್ಚಿಸಲು ಬೇಡಿಕೆ

18. ಕರ್ನಾಟಕವು ಸಾಧಿಸಿರುವ ಉತ್ತಮ ವಿತ್ತೀಯ ಸುಧಾರಣೆಗಳ ವಿವರಗಳನ್ನು ರಾಜ್ಯಸರ್ಕಾರವು ಇತ್ತೀಚೆಗೆ ಕೇಂದ್ರದ 13ನೇ ಹಣಕಾಸಿನ ಆಯೋಗದ ಮುಂದೆ ಸಾದರಪಡಿಸಿದೆ. ಕರ್ನಾಟಕದ ಅಭಿವೃದ್ಧಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ರಾಜ್ಯಕ್ಕೆ ಹೆಚ್ಚಿನ ಸಂಪನ್ಮೂಲಗಳ ಅವಶ್ಯಕತೆಯಿದ್ದು ಕೇಂದ್ರ ಸರ್ಕಾರದ ತೆರಿಗೆ ಆದಾಯದಲ್ಲಿ ರಾಜ್ಯದ ಭಾಗಾಂಶವನ್ನು ಹೆಚ್ಚಿಸಬೇಕೆಂದು ಹಣಕಾಸಿನ ಆಯೋಗದ ಮುಂದೆ ಸರ್ಕಾರವು ಮನವಿ ಸಲ್ಲಿಸಿದೆ. 6ನೆಯ ಹಣಕಾಸಿನ ಆಯೋಗದ ಶಿಫಾರಸ್ಸಿನಂತೆ 1975 ರಿಂದ 1979 ರವರೆಗೆ ಕೇಂದ್ರದ ತೆರಿಗೆಗಳಲ್ಲಿ ಶೇ. 5.40 ಭಾಗಾಂಶವನ್ನು ಕರ್ನಾಟಕವು ಪಡೆಯುತ್ತಿದ್ದು ಈ ಭಾಗಾಂಶವು ಕ್ರಮೇಣ ಶೇ. 4.46ಕ್ಕೆ ಇಳಿದಿರುವುದರಿಂದ ರಾಜ್ಯಕ್ಕೆ ಈ ವಿಷಯದಲ್ಲಿ ಅನಾನುಕೂಲವಾಗಿದೆಯೆಂದು ಆಯೋಗಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಇದರ ಪರಿಣಾಮವಾಗಿ ಪ್ರತಿ ವರ್ಷವೂ ರಾಜ್ಯ ಸರ್ಕಾರವು ತನ್ನ ತೆರಿಗೆ ಆದಾಯವನ್ನು ಹೆಚ್ಚಿಸಲು ವಿಶೇಷ ಶ್ರಮವಹಿಸಬೇಕಾಗಿದ್ದು 2007–08ರಲ್ಲಿದ್ದಂತೆ ಕರ್ನಾಟಕದ ತೆರಿಗೆ ಸಂಗ್ರಹಣೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ. 11.1ರಷ್ಟಿದ್ದು ರಾಷ್ಟ್ರದ ಇತರ ಎಲ್ಲ ರಾಜ್ಯಗಳಿಗೆ ಹೋಲಿಸಿದರೆ ಇದು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಮೇಲ್ಕಂಡ ಪರಿಸ್ಥಿತಿಯನ್ನು ಗಮನಿಸಿ ಕೇಂದ್ರದ ತೆರಿಗೆಯಲ್ಲಿ ರಾಜ್ಯಕ್ಕೆ ನ್ಯಾಯಯುತವಾದ ಭಾಗಾಂಶವನ್ನು ಹಣಕಾಸಿನ ಆಯೋಗವು ಒದಗಿಸುವುದೆಂದು ನಿರೀಕ್ಷಿಸಲಾಗಿದೆ.

**ಸುಖಸ್ಯ ಮೂಲಂ ಧರ್ಮ:**

**ಧರ್ಮಸ್ಯ ಮೂಲಂ ಅರ್ಥ:**

**ಅರ್ಥಸ್ಯ ಮೂಲಂ ರಾಜ್ಯಂ**

19. ಜನತೆಯ ನೆಮ್ಮದಿಯ ಜೀವನಕ್ಕೆ ಆಡಳಿತವು ಅನುಸರಿಸುವ ನೀತಿಯೇ ಬುನಾದಿಯೆಂಬುದನ್ನು ಕೌಟಿಲ್ಯನ ಅರ್ಥಶಾಸ್ತ್ರದ ಮೇಲಿನ ಸೂತ್ರವಾಕ್ಯವು ಸೂಚಿಸುತ್ತದೆ. ಪ್ರಸ್ತುತ ಆರ್ಥಿಕ ಹಿನ್ನಡೆಯ ಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸಿ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು 11ನೆಯ ಪಂಚವಾರ್ಷಿಕ ಯೋಜನೆಯ

ಅವಧಿಯಲ್ಲಿ ಉದ್ದೇಶಿಸಿದಂತೆ ವಾರ್ಷಿಕ ಶೇ.9ರ ಪ್ರಮಾಣಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರವು ಸೂಕ್ತ ನೀತಿಯನ್ನು ಅನುಸರಿಸಬೇಕಾಗಿದೆ. ಇದಕ್ಕಾಗಿ ಸರ್ಕಾರವು ರಾಜ್ಯದ ಯೋಜನಾ ಮಂಡಳಿಯ ನೇತೃತ್ವದಲ್ಲಿ ತಜ್ಞರ ಕಾರ್ಯಪಡೆಯ ಮೂಲಕ 'ಕರ್ನಾಟಕ – ಅಭಿವೃದ್ಧಿಯ ಮುನ್ನೋಟ' ಎಂಬ ನೀಲನಕ್ಷೆಯನ್ನು ಸಿದ್ದಪಡಿಸಿದೆ.

20. ಮೇಲ್ಕಂಡ ಅಭಿವೃದ್ಧಿಯ ಮುನ್ನೋಟದಲ್ಲಿ ಹಿಂದಿನ ರಾಷ್ಟ್ರಪತಿಗಳಾಗಿದ್ದ ಡಾ:ಎ.ಪಿ.ಜೆ. ಅಬ್ದುಲ್‌ಕಲಾಂ ಅವರು ರಾಜ್ಯದ ವಿಧಾನ ಮಂಡಲವನ್ನು ಉದ್ದೇಶಿಸಿ 2005ರಲ್ಲಿ ನೀಡಿದ ಭಾಷಣದ ಮುಖ್ಯಾಂಶಗಳು ಅಡಕವಾಗಿವೆಯೆಂದು ತಿಳಿಸಲು ಸಂತೋಷಿಸುತ್ತೇನೆ. 2008–09ನೆಯ ಸಾಲಿನ ಮುಂಗಡ ಪತ್ರದಲ್ಲಿ ನಾನು ಚಿತ್ರಿಸಿದ 10 ಅಂಶಗಳ ಕಾರ್ಯತಂತ್ರವು ಮೇಲ್ಕಂಡ ಮುನ್ನೋಟದ ಭಾಗವಾಗಿದ್ದು ಅದರ ಅನುಷ್ಠಾನವನ್ನು ಮುಂದುವರಿಸಲು ರಾಜ್ಯ ಸರ್ಕಾರವು ಬದ್ಧವಾಗಿದೆ.

## ನಡೆದುಬಂದ ದಾರಿ

21. ಮೇಲ್ಕಂಡ ಮುನ್ನೋಟದ ಚೌಕಟ್ಟಿನಲ್ಲಿ ಸರ್ಕಾರವು ಕಳೆದ ವರ್ಷ ಹಲವು ಪ್ರಗತಿಪರ ಯೋಜನೆಗಳಲ್ಲಿ ಗಣನೀಯ ಸಾಧನೆಯನ್ನು ಮಾಡಿರುವ ಬಗ್ಗೆ ತಮ್ಮ ಮುಂದೆ ಈ ಕೆಳಗಿನ ಕೆಲವು ಅಂಶಗಳನ್ನು ಸಾದರಪಡಿಸಲು ಇಚ್ಛಿಸುತ್ತೇನೆ.

- **ಭಾಗ್ಯಲಕ್ಷ್ಮಿ ಯೋಜನೆ :** ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಇಲ್ಲಿಯವರೆಗೂ 5,29,111 ಫಲಾನುಭವಿಗಳನ್ನು ಗುರುತಿಸಿದ್ದು ರೂ.548.86 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

- **ಸಂಧ್ಯಾಸುರಕ್ಷಾ ಯೋಜನೆ** : ಸಂಧ್ಯಾ ಸುರಕ್ಷಾ ಯೋಜನೆಯಡಿ 4,16,927 ಫಲಾನುಭವಿಗಳಿಗೆ ಜನವರಿ 2009ರ ಅಂತ್ಯದ ವರೆವಿಗೆ ರೂ.58.65 ಕೋಟಿ ಹಣ ಬಿಡುಗಡೆ ಮಾಡಲಾಗಿದೆ.

- **ಜನಸ್ಪಂದನ** : ಗ್ರಾಮೀಣ ಜನರ ಸಮಸ್ಯೆ ನಿವಾರಣೆಯ ಜನಸ್ಪಂದನ ಕಾರ್ಯಕ್ರಮ ಕೋರಿ 6,20,331 ಅರ್ಜಿಗಳು ಬಂದಿದ್ದು 5,08,472 ಅರ್ಜಿಗಳನ್ನು (ಶೇ.82) ಡಿಸೆಂಬರ್ ಅಂತ್ಯದ ವರೆಗೆ ವಿಲೇವಾರಿ ಮಾಡಲಾಗಿದೆ.

- **ರೈತರಿಗೆ ಶೇಕಡ 3ರ ಬಡ್ಡಿ ದರದಲ್ಲಿ ಸಾಲ** : 2008-09ನೇ ಸಾಲಿನಲ್ಲಿ ದಿನಾಂಕ 31.01.2009ರವರೆವಿಗೆ 10,40,717 ಮಂದಿ ರೈತರಿಗೆ ರೂ.2657.78 ಕೋಟಿ ಮೊತ್ತದ ಕೃಷಿ ಸಾಲವನ್ನು ಶೇಕಡ 3ರ ಬಡ್ಡಿ ದರದಲ್ಲಿ ವಿತರಿಸಲಾಗಿದೆ.

- **22 ಲಕ್ಷ ಒಣಭೂಮಿ ರೈತರಿಗೆ ನಗದು ನೆರವು:** ಈ ವರೆಗೆ 22 ಲಕ್ಷ ಒಣಭೂಮಿ ಬೇಸಾಯವನ್ನು ಅವಲಂಬಿಸಿರುವ ರೈತ ಕುಟುಂಬಗಳಿಗೆ ತಲಾ ರೂ.1000ದಂತೆ ರೂ.220 ಕೋಟಿ ನಗದು ಸಹಾಯಧನ ನೀಡಿಕೆ.

- **ಸುವರ್ಣ ಗ್ರಾಮೋದಯ** : ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ದಿನಾಂಕ 13.1.2009ರವರೆಗೆ ಈ ವರ್ಷ ರೂ.288.89 ಕೋಟಿ ವೆಚ್ಚ ಮಾಡಲಾಗಿದೆ. 1204 ಗ್ರಾಮಗಳಲ್ಲಿ ಯೋಜನೆ ಅನುಷ್ಠಾನದಲ್ಲಿದೆ.

- **ಗ್ರಾಮೀಣ ನೀರು ಸರಬರಾಜು** : ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗಾಗಿ ಈ ವರ್ಷದ ಆಯವ್ಯಯದಲ್ಲಿ ರೂ.950 ಕೋಟಿಯಲ್ಲಿ ಈ ವರೆವಿಗೆ 650 ಕೋಟಿ ರೂಪಾಯಿ ಬಿಡುಗಡೆಯಾಗಿದ್ದು ಈಗಾಗಲೇ ರೂ.633.79 ಕೋಟಿ ವೆಚ್ಚವಾಗಿದೆ.

- **ಬಂಡವಾಳ ಹೂಡಿಕೆ:** ಏಕ ಗವಾಕ್ಷಿಯಲ್ಲಿ 222 ಕೈಗಾರಿಕೆಗಳಿಗೆ ಅನುಮೋದನೆ ನೀಡಲಾಗಿದ್ದು 3559 ಕೋಟಿ ಬಂಡವಾಳ ಹೂಡಿಕೆಯಾಗಿದ್ದು 94 ಸಾವಿರ ಉದ್ಯೋಗ ಸೃಷ್ಟಿ ನಿರೀಕ್ಷಿಸಲಾಗಿದೆ. ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ 45 ಬೃಹತ್ ಉದ್ದಿಮೆಗಳಿಗೆ ಅನುಮೋದನೆ ದೊರೆತಿದ್ದು ರೂ.1,08,,926.20 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆಯಾಗಿದ್ದು 4,90,842 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.

- **ಉದ್ಯೋಗ ಮೇಳ** : ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಗಳಲ್ಲಿ ಉದ್ಯೋಗ ಮೇಳ ನಡೆಸಲಾಗಿದ್ದು, ಇದರಲ್ಲಿ 297 ಉದ್ಯೋಗ ಪತಿಗಳು ಪಾಲ್ಗೊಂಡಿರುತ್ತಾರೆ. 62811 ಉದ್ಯೋಗಾಕಾಂಕ್ಷಿಗಳು ಪಾಲ್ಗೊಂಡಿದ್ದು, 13612 ಉದ್ಯೋಗಗಳನ್ನು ಉದ್ಯೋಗ ಮೇಳದಿಂದಾಗಿ ಸೃಜಿಸಲಾಗಿದೆ. Apprentiship training ಕಾರ್ಯಕ್ರಮದಿಂದ 20669 ಉದ್ಯೋಗಗಳು ಸೃಷ್ಠಿಯಾಗಿವೆ.

- **ಆರೋಗ್ಯ ಕವಚ** : ಹೊಸ ತುರ್ತು ಸೇವಾ ಯೋಜನೆಗೆ (ಇ.ಎಂ.ಆರ್.ಐ.) ನವೆಂಬರ್ 1, 2008ರಂದು ಚಾಲನೆ ನೀಡಲಾಯಿತು. ಇದಕ್ಕೆ ತುರ್ತು ಕರೆ ಮಾಡುವವರು 108ಕ್ಕೆ ಯಾವುದೇ ಶುಲ್ಕವಿಲ್ಲದೇ ಕರೆ ಮಾಡಬಹುದು. ಇದುವರೆವಿಗೆ ಈ ದೂರವಾಣಿಗೆ 9,41,666 ಸಹಾಯಕ್ಕಾಗಿ ಕರೆಗಳು ಬಂದಿವೆ. 150 ಆಂಬುಲೆನ್ಸ್‌ಗಳನ್ನು 24 ಘಂಟೆಗಳ ನಿರಂತರ ಸೇವೆಗೆ ಒಳಪಡಿಸಲಾಗಿದ್ದು, 11,468 ಜೀವಗಳನ್ನು ಉಳಿಸಲಾಗಿದೆ. 1667 ಪೊಲೀಸ್ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

- **ಬೀಜ ವಿತರಣೆ** : ಭತ್ತ, ರಾಗಿ, ಸೂರ್ಯಕಾಂತಿ, ಮೆಕ್ಕೆಜೋಳ, ಜೋಳ, ತೊಗರಿ, ಹೆಸರು, ಉದ್ದು ಮುಂತಾದ ಒಟ್ಟು 3,58,958 ಕ್ವಿಂಟಲ್ ಬಿತ್ತನೆ ಬೀಜವನ್ನು 16.87 ಲಕ್ಷ ರೈತರಿಗೆ 2008-09ನೇ ಸಾಲಿನ ಹಿಂಗಾರು ಹಾಗೂ ಮುಂಗಾರಿನಲ್ಲಿ ವಿತರಿಸಲಾಗಿದೆ.

- **ಸಮಾಜ ಕಲ್ಯಾಣ** : ಪ.ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗಗಳ 293 ವಿದ್ಯಾರ್ಥಿ ನಿಲಯಗಳನ್ನು ಮತ್ತು 45 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿನ ಬಾಲಕಿಯರ ಸಂಖ್ಯೆಯನ್ನು ಶೇ.22 ರಿಂದ ಶೇ.30ಕ್ಕೆ ಏರಿಸಿ ಲಿಂಗ ತಾರತಮ್ಯವನ್ನು ಕಡಿಮೆಗೊಳಿಸಿದೆ.

22. ಇನ್ನೂ ಹಲವು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ತೀವ್ರ ಪ್ರಗತಿಯನ್ನು ಸಾಧಿಸಲು ನಮ್ಮ ಅವಿರತ ಪ್ರಯತ್ನ ನಡೆದಿದ್ದು ಮುಂಬರುವ

ದಿನಗಳಲ್ಲಿ ರಾಜ್ಯದ ಸರ್ವತೋಮುಖ ಪ್ರಗತಿಗೆ ಸರ್ಕಾರವು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

## ಅಭಿವೃದ್ಧಿಯ ಕಾರ್ಯತಂತ್ರ

23. ರಾಜ್ಯದ ಗ್ರಾಮೀಣ ಜನತೆಯು ಬಹುತೇಕ ಕೃಷಿ ಮತ್ತು ಸಂಬಂಧಿತ ಉದ್ಯೋಗಗಳಲ್ಲಿ ನಿರತವಾಗಿದ್ದು ಕೃಷಿ ಅಭಿವೃದ್ಧಿಯು ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ಅನಿವಾರ್ಯವಾಗಿದೆ. ಆದ್ದರಿಂದ ರಾಜ್ಯ ಸರ್ಕಾರದ ಅಭಿವೃದ್ಧಿ ನೀತಿಯಲ್ಲಿ ಕೃಷಿ ಅಭಿವೃದ್ಧಿಗೆ ಸದಾ ಅಗ್ರ ಸ್ಥಾನವೇ ಸಲ್ಲಬೇಕಾಗಿದೆ. ಇದಲ್ಲದೆ, ರಾಜ್ಯದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಯುವಪೀಳಿಗೆಗೆ ಹೆಚ್ಚು ಹೆಚ್ಚು ಲಾಭದಾಯಕವಾದ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಪ್ರಮುಖ ಅವಶ್ಯಕತೆಯಾಗಿದೆ. ಈಗಾಗಲೇ ಸುಮಾರು ಶೇ.58ರಷ್ಟು ಜನರಿಗೆ ಉದ್ಯೋಗ ಒದಗಿಸುತ್ತಿರುವ ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು ವಿಸ್ತರಿಸಲು ಸೀಮಿತ ಅವಕಾಶವಿರುವುದರಿಂದ ಮುಂಬರುವ ವರ್ಷಗಳಲ್ಲಿ ರಾಜ್ಯದ ಆರ್ಥಿಕ ವಿಕಾಸವು ಕೈಗಾರಿಕೆ ಹಾಗೂ ಸೇವಾ ಕ್ಷೇತ್ರಗಳ ಅಭಿವೃದ್ಧಿಯ ಮೇಲೆ ಅವಲಂಬಿಸಿರುವುದನ್ನು ನಾವು ಗಮನಿಸಬೇಕಾಗಿದೆ. 'Industrialise or perish' ಎಂಬ ಸೂತ್ರ ವಾಕ್ಯವನ್ನು ನೀಡಿದ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರು ತೋರಿದ ಮಾರ್ಗದಲ್ಲಿ ನಾವು ದೃಢನಿರ್ಧಾರದಿಂದ ಮುಂದುವರಿಯಬೇಕಾಗಿದೆ. **ಆದ್ದರಿಂದ ಕೃಷಿ ಮತ್ತು ನೀರಾವರಿಯ ಅಭಿವೃದ್ಧಿಯ ಜೊತೆಗೆ ರಾಜ್ಯದ ಔದ್ಯೋಗೀಕರಣದ ಹಾದಿಯನ್ನು ಸುಗಮಗೊಳಿಸಲು ವಿದ್ಯುಚ್ಛಕ್ತಿಯ ಉತ್ಪಾದನೆ, ರಸ್ತೆ ಮತ್ತು ಸಂಪರ್ಕ ಜಾಲಗಳ ಅಭಿವೃದ್ಧಿ, ರೈಲ್ವೆ ಮಾರ್ಗಗಳ ಅಭಿವೃದ್ಧಿ, ಬಂದರುಗಳ ಹಾಗೂ ವಿಮಾನ ನಿಲ್ದಾಣಗಳ ನಿರ್ಮಾಣ, ಕೈಗಾರಿಕಾ ಕ್ಷೇತ್ರಗಳ ನಿರ್ಮಾಣ ಮುಂತಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರವು ವಿಶೇಷ ಗಮನ ಹರಿಸಬೇಕಾದ ಅವಶ್ಯಕತೆ ಇದೆ. ಇದಲ್ಲದೆ, ಮಾನವ ಶಕ್ತಿ ಸಂಪನ್ಮೂಲಗಳ ಅಭಿವೃದ್ಧಿ ನಗರಗಳ ವ್ಯವಸ್ಥಿತ ಬೆಳವಣಿಗೆ, ಸಾಮಾಜಿಕ ನ್ಯಾಯ ಮತ್ತು ಕನ್ನಡ ನುಡಿ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗಿದೆ. ಆರ್ಥಿಕ ಹಿಂಜರಿತದ ಇಂದಿನ ಪ್ರತಿಕೂಲ ಪರಿಸ್ಥಿತಿಯಲ್ಲಿ ರಾಜ್ಯದ ಜನತೆಯ ಜೀವನ ಮಟ್ಟವನ್ನು ಕಾಯ್ದುಕೊಳ್ಳಲು ಮತ್ತು ಭವಿಷ್ಯದ ಬೆಳವಣಿಗೆಗಾಗಿ ಅಗತ್ಯವಿರುವ ತಳಹದಿಯನ್ನು ನಿರ್ಮಿಸಲು 2009-10ನೆಯ ಸಾಲಿನ ಮುಂಗಡ ಪತ್ರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.**

## ಡಾ॥ ನಂಜುಂಡಪ್ಪ ವರದಿಯ ಅನುಷ್ಠಾನದಲ್ಲಿ ಹೊಸ ಹೆಜ್ಜೆ

24. ಡಾ॥ ನಂಜುಂಡಪ್ಪ ಅವರ ವರದಿಯ ಅನುಸಾರ ಗುರುತಿಸಲಾದ ರಾಜ್ಯದ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಕಳೆದ ಎರಡು ವರ್ಷಗಳಿಂದ ವಿಶೇಷ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗುತ್ತಿದೆ. ಈ ಯೋಜನೆಗೆ 2007–08ರಲ್ಲಿ ರೂ.1,572 ಕೋಟಿ ಮತ್ತು 2008–09ರಲ್ಲಿ ರೂ.2,547 ಕೋಟಿ ಅನುದಾನವನ್ನು ಒದಗಿಸಲಾಗಿತ್ತು. ಈ ಸಾಲಿನ ವಿಶೇಷ ಅಭಿವೃದ್ಧಿಗಾಗಿ ಮುಂಗಡ ಪತ್ರದಲ್ಲಿ ರೂ.2,574 ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರತ್ಯೇಕ ಅನುದಾನದ ಶೀರ್ಷಿಕೆಯನ್ನು ಒದಗಿಸಬೇಕೆಂಬ ಬೇಡಿಕೆಯನ್ನು ಪರಿಗಣಿಸಿ ಆಯವ್ಯಯದ ಪ್ರತಿಯೊಂದು ಮುಖ್ಯ ಬೇಡಿಕೆಯಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗಾಗಿ ಪ್ರತ್ಯೇಕ ಶೀರ್ಷಿಕೆಯನ್ನು ಪ್ರಸ್ತುತ ಮುಂಗಡ ಪತ್ರದಲ್ಲಿ ನೀಡಲಾಗುತ್ತಿದೆ.

25. ಪ್ರಾದೇಶಿಕ ಸಮತೋಲನವನ್ನು ಸಾಧಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರ ಮುಂತಾದ ಪ್ರಾದೇಶಿಕ ಮಂಡಳಿಗಳಿಗೆ ಅಗತ್ಯ ಅನುದಾನವನ್ನು ಒದಗಿಸಲಾಗುವುದು.

## ರಾಜ್ಯದ ಅಭಿವೃದ್ಧಿಗೆ ತಜ್ಞರ ಮಾರ್ಗದರ್ಶನ

26. ರಾಜ್ಯದ ಅಭಿವೃದ್ಧಿ ನೀತಿಯ ಅನುಷ್ಠಾನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಖ್ಯಾತ ತಜ್ಞರ ಮಾರ್ಗದರ್ಶನವನ್ನು ಪಡೆಯಲು ಸರ್ಕಾರವು ವಿಶೇಷ ಕಾರ್ಯಪಡೆಗಳನ್ನು ರಚಿಸಿದೆ.

27. ಕರ್ನಾಟಕ ಅಭಿವೃದ್ಧಿ ಮುನ್ನೋಟ 2020 (Karnataka Vision 2020) ತಂಡವು ರಾಜ್ಯದ ಸಮಗ್ರ ಮತ್ತು ಸಮತೋಲಿತ ಅಭಿವೃದ್ಧಿಯ ಬಗ್ಗೆ ಮುಂದಿನ ಎರಡು ದಶಕಗಳಲ್ಲಿ ಅನುಸರಿಸಬೇಕಾದ ಸ್ಥೂಲ ಅಭಿವೃದ್ಧಿ ಮಾರ್ಗದ ಬಗ್ಗೆ ಚಿಂತನೆ ನಡೆಸಿದೆ.

28. ಕರ್ನಾಟಕ ಜ್ಞಾನ ಆಯೋಗವು ರಾಜ್ಯವನ್ನು ಜ್ಞಾನಾಧಾರಿತ ಸಮಾಜವಾಗಿ ರೂಪಿಸುವಲ್ಲಿ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯತಂತ್ರದ ಬಗ್ಗೆ ಸಲಹೆ ನೀಡುತ್ತಿದೆ.

29. ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹವು ರಾಜ್ಯದಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಶಿಕ್ಷಣವನ್ನು ಅಭಿವೃದ್ಧಿಪಡಿಸಲು ಮತ್ತು ನೂತನ ತಂತ್ರಜ್ಞಾನಗಳನ್ನು ಬೆಳೆಸಲು ಅಗತ್ಯ ಸಲಹೆಯನ್ನು ನೀಡುತ್ತಿದೆ.

30. ಕೌಶಲ್ಯ ವೃದ್ಧಿ ಆಯೋಗವು ರಾಜ್ಯದ ಯುವಕ ಯುವತಿಯರಿಗೆ ಸೂಕ್ತ ತಾಂತ್ರಿಕ ಹಾಗೂ ವೃತ್ತಿ ಕೌಶಲ್ಯಗಳಲ್ಲಿ ಪರಿಣತಿ ನೀಡಿ ಲಕ್ಷಾಂತರ ನೂತನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

31. ಕೈಗಾರಿಕೀಕರಣದ ಸಮಗ್ರ ಯೋಜನೆಯ ರೂಪು ರೇಷೆಗಳನ್ನು ತಯಾರಿಸಲು ಕೈಗಾರಿಕಾ ಅಭಿವೃದ್ಧಿ ಮುನ್ನೋಟದ ಕಾರ್ಯಪಡೆ ರಚಿಸಿದ್ದು ನೂತನ ಕೈಗಾರಿಕಾ ನೀತಿಯನ್ನು ರೂಪಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ.

32. ಕರ್ನಾಟಕ ಕೃಷಿ ಮಿಷನ್ ಅಡಿಯಲ್ಲಿ ರಾಜ್ಯದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಅಳವಡಿಸಿಕೊಂಡಿರುವ ಕಾರ್ಯಕ್ರಮಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ.

33. ಸಾವಯವ ಕೃಷಿ ಮಿಷನ್ ತಂಡವು ಇಡೀ ರಾಜ್ಯದಲ್ಲಿ ಸಹಸ್ರಾರು ರೈತ ಕುಟುಂಬಗಳನ್ನು ಸಂಘಟಿಸಿ ಸಾವಯವ ಕೃಷಿಯನ್ನು ಅಳವಡಿಸುವಲ್ಲಿ ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ನೀಡುತ್ತಿದೆ.

34. ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆಯು ಸರ್ಕಾರದ ಕಾಮಗಾರಿಗಳಲ್ಲಿ ಸೂಕ್ತ ಮಾನಕಗಳಿಗೆ ಅನುಸಾರವಾಗಿ ಗುಣ ನಿಯಂತ್ರಣ ಮಾಡಿ ದಕ್ಷತೆಯನ್ನು ಹೆಚ್ಚಿಸಲು ಶ್ರಮಿಸುತ್ತಿದೆ.

35. ಬೆಂಗಳೂರು ಮೂಲಸೌಲಭ್ಯ ಮತ್ತು ಅಭಿವೃದ್ಧಿ ಕಾರ್ಯಗಳ ಕಾರ್ಯಪಡೆ (ABIDE)ಯು ಬೆಂಗಳೂರಿನ ವ್ಯವಸ್ಥಿತ ಅಭಿವೃದ್ಧಿಗಾಗಿ ನೀಲ ನಕ್ಷೆಯನ್ನು ರೂಪಿಸುತ್ತಿದೆ.

36. ಜೈವಿಕ ಇಂಧನ ಕಾರ್ಯಪಡೆಯು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಪರಿಸರ ಸ್ನೇಹಿ ಮಾರ್ಗದಲ್ಲಿ ಇಂಧನದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿದೆ.

37. ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆಯು ಮಲೆನಾಡು ಪ್ರದೇಶದಲ್ಲಿ ಜೈವಿಕ ವೈವಿಧ್ಯತೆ ಮತ್ತು ಪರಿಸರದ ಸಂರಕ್ಷಣೆಗೆ ಕಾರ್ಯತಂತ್ರವನ್ನು ರೂಪಿಸುತ್ತಿದೆ.

38. ಈ–ಆಡಳಿತದ ಬಗ್ಗೆ ಸಮಗ್ರ ಯೋಜನೆ ತಯಾರಿಸಲು ತಜ್ಞರ ತಂಡವನ್ನು ರಚಿಸಲಾಗಿದೆ.

39. ಇದಲ್ಲದೆ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಜಲ ಸಂಪನ್ಮೂಲ ಪ್ರಾಧಿಕಾರ, ಅನಿವಾಸಿ ಕನ್ನಡಿಗರ ಕೋಶ, ಮುಜರಾಯಿ ಆಸ್ತಿಗಳ ಸಮೀಕ್ಷೆಯ ಕಾರ್ಯಪಡೆ, ಹಾಗೂ ವಕ್ಫ್ ಆಸ್ತಿಗಳ ಸಮೀಕ್ಷಾ ಸಮಿತಿಗಳನ್ನು ರಚಿಸಲಾಗಿದೆ. ಈ ಎಲ್ಲಾ ಕಾರ್ಯಪಡೆಗಳ ಸಲಹೆಗಳು ವಿಶೇಷ ರೀತಿಯಲ್ಲಿ ಸಂಬಂಧಪಟ್ಟ ಇಲಾಖೆಗಳ ಕಾರ್ಯತಂತ್ರವನ್ನು ರೂಪಿಸುವಲ್ಲಿ ಮತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಮೂಲ್ಯ ಸಲಹೆಯನ್ನು ನೀಡುತ್ತಿವೆ ಮತ್ತು ಪ್ರಸ್ತುತ ಆಯವ್ಯಯದಲ್ಲಿ ಅವರ ಸಲಹೆಗಳನ್ನು ಪರಿಗಣಿಸಲಾಗಿದೆ.

40. ಸರ್ಕಾರದ ಅಭಿವೃದ್ಧಿ ನೀತಿಯನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ಆಡಳಿತ ಯಂತ್ರವನ್ನು ಹೆಚ್ಚು ದಕ್ಷತೆಯಿಂದ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸುಧಾರಣೆಗಳನ್ನು ಜಾರಿಗೊಳಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಆಡಳಿತದಲ್ಲಿ ಒಂದು ಹೊಸ 'ಅನುಷ್ಠಾನ ಪರ್ವ'ವನ್ನು ಪ್ರಾರಂಭಿಸಬೇಕಾಗಿದೆ. ಇದಕ್ಕಾಗಿ ರೂಪಿಸಲಾದ ಅನುಷ್ಠಾನ ಸಂಹಿತೆಯ ವಿವರಗಳನ್ನು ಪ್ರತ್ಯೇಕವಾಗಿ ನೀಡಿದ್ದೇನೆ. ಈ ಮುಂಗಡ ಪತ್ರದ ಮೂಲಕ 2009–10ನೇ ಸಾಲಿನ ಸರ್ಕಾರದ ಅಭಿವೃದ್ಧಿ ಯೋಜನೆಗಳ ಮುಖ್ಯಾಂಶಗಳನ್ನು ಮತ್ತು ಅವುಗಳ ಅನುಷ್ಠಾನಕ್ಕಾಗಿ ಒದಗಿಸಿಕೊಳ್ಳಲಿರುವ ಸಂಪನ್ಮೂಲಗಳ ಚಿತ್ರಣವನ್ನು ತಮ್ಮ ಮುಂದೆ ಪ್ರಸ್ತುತಪಡಿಸುತ್ತೇನೆ.

## ಪ್ರಮುಖ ಅಭಿವೃದ್ಧಿ ಕ್ಷೇತ್ರಗಳಿಗೆ ಆದ್ಯತೆ

41. 2009–10ನೇ ಸಾಲಿಗೆ 29,500 ಕೋಟಿ ರೂ.ಗಳ ಯೋಜನಾ ಗಾತ್ರವು 2007–08ನೇ ಸಾಲಿನಲ್ಲಿ ರಾಜ್ಯ ಯೋಜನೆಗೆ ಖರ್ಚಾಗಿರುವ 17,227 ಕೋಟಿ ರೂ.ಗಳಿಗಿಂತ ಶೇ.71ರಷ್ಟು ಹೆಚ್ಚಾಗಿದೆ. ಮುಂದಿನ ವರ್ಷದಲ್ಲಿ ಸರ್ಕಾರದ ಆದ್ಯತೆಗಳಲ್ಲಿ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳು, ಗ್ರಾಮೀಣಾಭಿವೃದ್ಧಿ, ನೀರಾವರಿ, ವಿದ್ಯುಚ್ಛಕ್ತಿ, ರಸ್ತೆಗಳು, ನಗರಾಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರಗಳು ಒಳಗೊಂಡಿವೆ.

- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ 2,440 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

- ಗ್ರಾಮೀಣಾಭಿವೃದ್ಧಿಗೆ 3,063 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ನೀರಾವರಿ ಕಾಮಗಾರಿಗಳಿಗೆ 4,714 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ವಿದ್ಯುಚ್ಛಕ್ತಿ ವಲಯದ ಯೋಜನೆ ಮತ್ತು ಯೋಜನೇತರ ವೆಚ್ಚವನ್ನು 6,107 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.
- ಸಾರಿಗೆ ವಲಯದಲ್ಲಿ 1,327 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.
- ಬೆಂಗಳೂರು ನಗರವೂ ಸೇರಿದಂತೆ ನಗರಾಭಿವೃದ್ಧಿ ವಲಯದಲ್ಲಿ 7,376 ಕೋಟಿ ರೂ.ಗಳನ್ನು ಖರ್ಚು ಮಾಡಲು ಅಂದಾಜಿಸಲಾಗಿದೆ.
- ಶಿಕ್ಷಣ ಕ್ಷೇತ್ರಕ್ಕಾಗಿ 8,888 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು.

## ಹಸಿರು ಮಾರ್ಗದಲ್ಲಿ ಕೃಷಿ ಅಭಿವೃದ್ಧಿ

**"ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ,**
**ಮಾನವ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವಾಸೆ"**

– *ಕೆ.ಎಸ್. ನರಸಿಂಹಸ್ವಾಮಿ.*

42. ಅನ್ನದಾತನ ನೋವು–ನಲಿವಿಗೆ ಮಲ್ಲಿಗೆ ಕವಿ ನರಸಿಂಹಸ್ವಾಮಿಯವರು ಮನ ಮಿಡಿದು ನುಡಿದ ಕಾವ್ಯದ ಸಾಲುಗಳಿವು. ರೈತರ ಸಮಸ್ಯೆಗಳಿಗೆ ಸ್ಪಂದಿಸುವ ವಿಚಾರದಲ್ಲಿ ಸರ್ಕಾರ ಎಂದಿಗೂ ಹಿಂದೆ ಬೀಳದು.

43. ಕಳೆದ ಆರು ವರ್ಷಗಳಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಯು ಶೇ.2ಕ್ಕಿಂತಲೂ ಕಡಿಮೆಯಿದ್ದು 2007–08ರಲ್ಲಿ ಶೇ.4.4ಕ್ಕೆ ಏರಿತ್ತು. ಆದರೆ 2008–09ರಲ್ಲಿ ಅಸಮರ್ಪಕ ಮಳೆಯಿಂದಾಗಿ ರಾಜ್ಯದಾದ್ಯಂತ ನಿರೀಕ್ಷಿಸಿದಂತೆ ಕೃಷಿ ಕ್ಷೇತ್ರದ ಬೆಳವಣಿಗೆ ಆಗಿರುವುದಿಲ್ಲ. ವಿಶೇಷವಾಗಿ ಆಹಾರ ಧಾನ್ಯಗಳ ಉತ್ಪಾದನೆಯು 2007–08ರ ಸಾಲಿನ 121 ಲಕ್ಷ ಟನ್‌ಗಳಿಗೆ ಹೋಲಿಸಿದರೆ 2008–09ರಲ್ಲಿ 109 ಲಕ್ಷ ಟನ್ ಆಗುವುದೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ ರಾಜ್ಯದ ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸಲು ಮುಂಬರುವ ವರ್ಷಗಳಲ್ಲಿ ಉತ್ತಮ ತಂತ್ರಜ್ಞಾನವನ್ನು

ಒಳಗೊಂಡಂತೆ ಕೃಷಿಗೆ ಬೆಂಬಲ ನೀಡುವ ಯೋಜನೆಗಳ ಅನುಷ್ಠಾನವನ್ನು ತೀವ್ರಗೊಳಿಸಬೇಕಾಗಿದೆ. ಇದಕ್ಕಾಗಿ ಸರ್ಕಾರವು ಹಲವು ವಿಶೇಷ ಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದು ಅವುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವಾಗಿದೆ.

**ಶೇ. 3ರ ಬಡ್ಡಿ ದರದಲ್ಲಿ ರೈತರಿಗೆ ಬ್ಯಾಂಕ್ ಸಾಲ**

44. ರಾಜ್ಯ ಸರ್ಕಾರವು ರೈತರಿಗೆ ಶೇ.3ರ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ಸಾಲ ವಿತರಿಸುವ ಕ್ರಮದಿಂದ ಲಕ್ಷಾಂತರ ರೈತರು ಪ್ರಯೋಜನವನ್ನು ಪಡೆದಿದ್ದು 2008-09ನೇ ಸಾಲಿನಲ್ಲಿ ಈವರೆಗೆ ಒಟ್ಟು 2,650 ಕೋಟಿ ರೂ. ಸಾಲ ಒದಗಿಸಲಾಗಿದೆ. ಈ ಯೋಜನೆಯನ್ನು 2009-10ನೇ ಸಾಲಿನಲ್ಲಿ ಮುಂದುವರೆಸಲು ರೂ.150 ಕೋಟಿ ಸಹಾಯಧನವನ್ನು ಒದಗಿಸಲಾಗುವುದು.

45. ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆಯುವ ರೈತರಿಗೂ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕೆಂಬ ರೈತಬಾಂಧವರ ಬಹುದಿನಗಳ ಬೇಡಿಕೆಯನ್ನು ನಮ್ಮ ಸರ್ಕಾರವರು ಈಡೇರಿಸಲು ಸಿದ್ಧವಾಗಿದೆ. 2009-10ರ ಸಾಲಿನಿಂದ ವಾಣಿಜ್ಯ ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವ ಎಲ್ಲ ರೈತರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸಲು ರೂ.250 ಕೋಟಿ ಸಹಾಯಧನವನ್ನು ಆಯವ್ಯಯದಲ್ಲಿ ಒದಗಿಸುತ್ತಿದ್ದೇನೆ. ಈ ಸೌಲಭ್ಯವು ರೂ.50,000ವರೆಗೆ ಬ್ಯಾಂಕುಗಳಿಂದ ಬೆಳೆ ಸಾಲ ಪಡೆಯುವ ರೈತರಿಗೆ ಅನ್ವಯಿಸುತ್ತದೆ. ರಾಜ್ಯದ ನೇಗಿಲಯೋಗಿಗಳ ಆಶೋತ್ತರಗಳಿಗೆ ಸ್ಪಂದಿಸುವ ಈ ಚರಿತ್ರಾರ್ಹ ನಿರ್ಧಾರದಿಂದ ರಾಜ್ಯದ ಲಕ್ಷಾಂತರ ರೈತರು ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬಹುದಾಗಿದೆ.

46. ಕೃಷಿ ವಿಷಯಗಳ ಅಧ್ಯಯನ ಹಾಗೂ ಸಂಶೋಧನೆಗೆ ಒತ್ತು ನೀಡಲು ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಈಗಾಗಲೇ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು, ಈ ಸಂಸ್ಥೆಗಳಿಗೆ ಮುಂದಿನ ಸಾಲಿನಲ್ಲಿ ತಲಾ ರೂ.20 ಕೋಟಿ ಹಣಕಾಸಿನ ಸೌಲಭ್ಯವನ್ನು ಒದಗಿಸಲಾಗುವುದು.

## ಸಾವಯವ ಕೃಷಿಗಾಗಿ ಸಂಘಟನೆ

47. ಒಂದು ಸಾವಿರ ಗ್ರಾಮಗಳಲ್ಲಿ ಸಾವಯವ ಕೃಷಿಯನ್ನು ಉತ್ತೇಜಿಸುವ ಸರ್ಕಾರದ ನೀತಿಗೆ ರೈತಬಾಂಧವರಿಂದ ಅಭೂತಪೂರ್ವ ಬೆಂಬಲ ದೊರೆತಿದೆ. ಸುಮಾರು 50 ಸಾವಿರ ರೈತರು ಸ್ವಯಂ ಪ್ರೇರಣೆಯಿಂದ ಸಾವಯವ ಸಂಘಟನೆಗಳ ಸದಸ್ಯರಾಗಿ ನೊಂದಾಯಿಸಿಕೊಂಡಿದ್ದಾರೆ. ದಿನಾಂಕ 26.1.2009ರ ಗಣರಾಜ್ಯೋತ್ಸವ ದಿನದಂದು ನಡೆದ ಸಾವಯವ ಕೃಷಿ ರೈತರ ಸಮಾವೇಶದಲ್ಲಿ ಮಾಜಿ ರಾಷ್ಟ್ರಪತಿ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಸಮಕ್ಷಮ ಸಹಸ್ರಾರು ರೈತರು ಸಾವಯವ ಕೃಷಿಯನ್ನು ಅನುಸರಿಸಲು ಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ. 2009-10ನೇ ಸಾಲಿನಲ್ಲಿ ಸಾವಯವ ಕೃಷಿಯ ಅಭಿವೃದ್ಧಿಗಾಗಿ ಸರ್ಕಾರವು ರೂ.100 ಕೋಟಿ ಸಹಾಯಧನವನ್ನು ವಿನಿಯೋಗಿಸುವುದು.

48. 2008-09ನೇ ಸಾಲಿನಲ್ಲಿ ಇಡೀ ರಾಷ್ಟ್ರದಲ್ಲಿ ಮೊದಲಬಾರಿಗೆ ರಾಜ್ಯ ಸರ್ಕಾರವು ರೈತರಿಗೆ ವಿದೇಶಗಳಲ್ಲಿ ಅಧ್ಯಯನ ಪ್ರವಾಸಕ್ಕಾಗಿ ವ್ಯವಸ್ಥೆ ಮಾಡಿದೆ. ರೈತರು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುವ ಸಲುವಾಗಿ ಈ ಯೋಜನೆಯನ್ನು 2009-10ರಲ್ಲಿಯೂ ಮುಂದುವರಿಸಿ 1000 ಜನರಿಗೆ ಪ್ರವಾಸದ ಅವಕಾಶವನ್ನು ಕಲ್ಪಿಸಿಕೊಡಲಾಗುವುದು.

49. ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಬೆಳಗಾವಿಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿಯಲ್ಲಿ ಬೃಹತ್ ಪ್ರಮಾಣದ ತೋಟಗಾರಿಕಾ ಉತ್ಪನ್ನ ಮಾರುಕಟ್ಟೆಯನ್ನು ಖಾಸಗಿ ಸಹಭಾಗಿತ್ವದೊಡನೆ ರೂ.100 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಚಾಮರಾಜನಗರದಲ್ಲಿ ಅರಿಶಿನ ಮಾರುಕಟ್ಟೆ ಕೃಷಿ ಉತ್ಪನ್ನಗಳ ಸಂಸ್ಕರಣ ಘಟಕ ಹಾಗೂ ಶೈತ್ಯಾಗಾರಗಳ ನಿರ್ಮಾಣಕ್ಕಾಗಿ ರೂ.10 ಕೋಟಿ ಒದಗಿಸಲಾಗುವುದು.

## ಕೋಲಾರಕ್ಕೆ ತೋಟಗಾರಿಕೆ ಕಾಲೇಜು

50. ಹಣ್ಣು ಮತ್ತು ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾದ ಕೋಲಾರ ಜಿಲ್ಲೆಯಲ್ಲಿ ನೂತನ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ರೂ.5 ಕೋಟಿ ನೀಡಲಾಗುವುದು.

51. ಕಳೆದ ಮುಂಗಾರಿನಲ್ಲಿ ಮಳೆಯ ವೈಫಲ್ಯದಿಂದಾಗಿ ಸಂಕಷ್ಟದಲ್ಲಿದ್ದ ಖುಷ್ಕಿ ಕೃಷಿಯನ್ನು ಅವಲಂಬಿಸಿರುವ ಸಣ್ಣ ರೈತರಿಗೆ ಸಹಾಯಧನವನ್ನು ಪ್ರತಿ ಕುಟುಂಬಕ್ಕೆ ರೂ.1000ದಂತೆ ವಿತರಿಸಲಾಗಿದೆ. ಸುಮಾರು 22 ಲಕ್ಷ ರೈತರು ಇದರ ಪ್ರಯೋಜನವನ್ನು ಪಡೆದಿದ್ದು, ಇದಕ್ಕಾಗಿ ಈವರೆಗೆ ರೂ.220 ಕೋಟಿ ವೆಚ್ಚವಾಗಿದೆ.

**ರೈತರಿಗೆ ವಿದ್ಯುತ್ ಸರಬರಾಜಿಗಾಗಿ 2100 ಕೋಟಿ**

52. 2008-09ರಲ್ಲಿ ಪ್ರಥಮಬಾರಿಗೆ 10 ಅಶ್ವಶಕ್ತಿಯವರೆಗೆ ನೀರಾವರಿ ಪಂಪ್‌ಗಳನ್ನು ಹೊಂದಿರುವ ರೈತರಿಗೆ ಉಚಿತ ವಿದ್ಯುತ್ ಒದಗಿಸುವ ಕ್ರಮವನ್ನು ಜಾರಿಗೆ ತರಲಾಯಿತು. 2009-10ರಲ್ಲಿ ಇದಕ್ಕಾಗಿ ರೂ.2100 ಕೋಟಿ ಸಹಾಯಧನವನ್ನು ನೀಡಲು ಉದ್ದೇಶಿಸಿದೆ. ಇದರಿಂದ ಒಟ್ಟಾರೆ 17 ಲಕ್ಷ ರೈತ ಕುಟುಂಬಗಳಿಗೆ ಸಹಾಯವಾಗುವುದು.

**ರೇಷ್ಮೆ ವ್ಯವಸಾಯಕ್ಕೆ ಪ್ರೋತ್ಸಾಹ**

53. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಸಂಸ್ಥೆ ತಲಘಟ್ಟಪುರ ಕೇಂದ್ರದ ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿಗಾಗಿ ರೂ.2 ಕೋಟಿ ಒದಗಿಸಲಾಗುವುದು.

54. ರೇಷ್ಮೆ ಗೂಡಿನ ನೂಲು ಬಿಚ್ಚಾಣಿಕೆಯನ್ನು ಯಾಂತ್ರೀಕರಣಗೊಳಿಸಲು ರೂ.2 ಕೋಟಿ ಅನುದಾನ ನೀಡಲಾಗುವುದು.

**ಪಶುಸಂಗೋಪನೆ ಮತ್ತು ಹೈನುಗಾರಿಕೆ**

55. ರಾಜ್ಯದ ಸಹಸ್ರಾರು ಕುಟುಂಬಗಳು ಕುರಿ ಹಾಗೂ ಮೇಕೆ ಸಾಕಾಣಿಕೆಯಲ್ಲಿ ನಿರತರಾಗಿದ್ದು ವೈಜ್ಞಾನಿಕ ರೀತಿಯ ಪಶುಪಾಲನಾ ಕ್ರಮಗಳನ್ನು ಅನುಸರಿಸಲು ಅವರಿಗೆ ಸಹಾಯ ಮಾಡಲಾಗುವುದು. ಇದಕ್ಕಾಗಿ ಕುರಿ/ಮೇಕೆ ಸಾಕಾಣಿಕೆದಾರರ ಗುಂಪುಗಳನ್ನು ರಚಿಸಿ ಅವರ ಪಶುಸಂಪತ್ತಿಗೆ ವಿಮೆ ಸೌಲಭ್ಯವನ್ನು ಒದಗಿಸಲು ರೂ.5 ಕೋಟಿ ನೀಡಲಾಗುವುದು.

56. ಪ್ರತಿ ತಾಲ್ಲೂಕಿನಲ್ಲಿ ಗೋಸಂರಕ್ಷಣೆಗಾಗಿ ಗೋಶಾಲೆಗಳನ್ನು ಸ್ಥಾಪಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ರೂ.10 ಲಕ್ಷದ ವರೆಗೆ ಅನುದಾನವನ್ನು ನೀಡಲಾಗುವುದು.

57. ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ರೈತ ಕುಟುಂಬಗಳಿಗೆ ಪ್ರತಿಲೀಟರ್ ಹಾಲಿಗೆ ರೂ.2ರಂತೆ ಸಹಾಯಧನ ನೀಡುವ ವಿನೂತನ ಕ್ರಮವನ್ನು ಸರ್ಕಾರವು 2008–09ರಲ್ಲಿ ಜಾರಿ ಮಾಡಿದೆ. ಇದಕ್ಕಾಗಿ ರೂ.65 ಕೋಟಿ ವೆಚ್ಚ ಮಾಡಲಾಗಿದ್ದು, ಇದರಿಂದ 5.03 ಲಕ್ಷ ಹಾಲು ಉತ್ಪಾದಕರು ವಿಶೇಷವಾಗಿ ಮಹಿಳೆಯರು, ಹೆಚ್ಚಿನ ಆದಾಯವನ್ನು ಗಳಿಸುತ್ತಿದ್ದಾರೆ. ಮುಂದಿನ ವರ್ಷದಲ್ಲಿ ಈ ಯೋಜನೆಗಾಗಿ ರೂ.200 ಕೋಟಿ ಒದಗಿಸಲಾಗಿದೆ.

58. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೈನುಗಾರಿಕೆಯ ಅಭಿವೃದ್ಧಿ ಆಂದೋಲನವನ್ನು ತೀವ್ರಗೊಳಿಸಲು 2009–10ರಲ್ಲಿ 1000 ನೂತನ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ಸರ್ಕಾರದಿಂದ ರೂ.5 ಕೋಟಿ ಸಹಾಯಧನ ನೀಡಲು ಉದ್ದೇಶಿಸಿದೆ. ಗುಲ್ಬರ್ಗ ಹಾಗೂ ಬೆಳಗಾವಿ ವಿಭಾಗಗಳಲ್ಲಿ ಹಾಲಿನ ಶೀತಲೀಕರಣ ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ ನೀಡಲಾಗುವುದು.

59. ಗದಗದಲ್ಲಿ ನೂತನ ಪಶುವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಈಗಾಗಲೇ ತೀರ್ಮಾನಿಸಲಾಗಿದ್ದು, ಅದಕ್ಕಾಗಿ ಈ ಮುಂಗಡ ಪತ್ರದಲ್ಲಿ ರೂ.5 ಕೋಟಿ ಒದಗಿಸಲಾಗಿದೆ.

60. ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲು ಜಮೀನುಗಳನ್ನು ಅಭಿವೃದ್ಧಿಪಡಿಸಿ, ಪಶುಸಂಗೋಪನೆ ಹಾಗೂ ಸಂಶೋಧನೆಗೆ ಉಪಯೋಗಿಸಲು ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾನಿಲಯಕ್ಕೆ ರೂ.10 ಕೋಟಿ ನೀಡಲಾಗುವುದು.

**ಮೀನುಗಾರಿಕೆ**

61. 2008–09ರಲ್ಲಿ ಮೀನುಗಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲ ಒದಗಿಸುವ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು, ಸದರಿ ಯೋಜನೆಯನ್ನು ಮುಂದುವರೆಸಲಾಗುವುದು. ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸಲು ಈ ವರ್ಷ ಒದಗಿಸಿದ್ದ ರೂ.5 ಕೋಟಿ ಅನುದಾನವನ್ನು ಮುಂದಿನ ಸಾಲಿನಲ್ಲಿ ರೂ.20 ಕೋಟಿಗೆ ಹೆಚ್ಚಿಸಿ 5000 ಮನೆಗಳನ್ನು ನಿರ್ಮಿಸಲಾಗುವುದು. ಮೀನುಗಾರರು ಬಳಸುವ ಮಂಜುಗಡ್ಡೆಯ ತಯಾರಿಕೆಗೆ ಪ್ರೋತ್ಸಾಹ ನೀಡಲು ಕಳೆದ ವರ್ಷ ನೀಡಿರುವ ವ್ಯಾಟ್ ತೆರಿಗೆ ವಿನಾಯಿತಿಯನ್ನು ಮುಂದುವರೆಸಲಾಗುವುದು.

62. ಮೀನುಗಾರರ 2000 ಸ್ವಸಹಾಯ ಗುಂಪುಗಳನ್ನು ರಚಿಸಿ ಅವರಿಗೆ ಆರ್ಥಿಕ ಬೆಂಬಲ ಒದಗಿಸಲು ರೂ.10 ಕೋಟಿ ನೀಡಲಾಗುವುದು.

63. ಅಲಂಕಾರಿಕ ಮೀನಿನ ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಆಕ್ವಾ ಪಾರ್ಕ್‌ಗಳನ್ನು ಸ್ಥಾಪಿಸಲು ರೂ.2 ಕೋಟಿ ನೀಡಲಾಗುವುದು.

64. ಮಂಗಳೂರಿನಲ್ಲಿ ಸಿಂಗಪೂರ್‌ನಲ್ಲಿರುವ ಆಕ್ವಮೆರಿನ್ ಪಾರ್ಕ್ ಮಾದರಿಯ ಸೌಲಭ್ಯವನ್ನು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

**ಸಹಕಾರ**

65. 2008-09ನೆಯ ಸಾಲಿನಲ್ಲಿ ಕರ್ನಾಟಕ ಸಹಕಾರಿ ಮಾರುಕಟ್ಟೆ ಮಂಡಳಿಯ ಮೂಲಕ ರೈತರಿಗೆ ರಸಗೊಬ್ಬರಗಳನ್ನು ಮಾರಾಟ ಮಾಡಲು ರೂ.250 ಕೋಟಿ ದುಡಿಯುವ ಬಂಡವಾಳದ ವ್ಯವಸ್ಥೆ ಮಾಡಲಾಗಿದೆ. 2009-10ರಲ್ಲಿಯೂ ಸಹ ಅಗತ್ಯವಿರುವ ರಸಾಯನಿಕ ಗೊಬ್ಬರಗಳನ್ನು ಮುಂಗಡವಾಗಿ ದಾಸ್ತಾನು ಮಾಡಲು ಈ ಸಂಸ್ಥೆಗೆ ಅಗತ್ಯವಿರವ ಹಣಕಾಸಿನ ಸೌಲಭ್ಯವನ್ನು ಕಲ್ಪಿಸಲಾಗುವುದು.

66. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ವ್ಯಾಪಕವಾದ ಆಂದೋಲನವನ್ನು ಕೈಗೊಳ್ಳಬೇಕಾಗಿದೆ. ಇದರಿಂದ ಈ ಹಿಂದುಳಿದ ಕುಟುಂಬಗಳಿಗೆ ರಿಯಾಯಿತಿ ಬಡ್ಡಿಯ ಸಾಲಗಳನ್ನು ಪಡೆಯಲು ಮತ್ತು ಸಹಕಾರ ಸಂಸ್ಥೆಗಳಿಂದ ಇತರ ಸವಲತ್ತುಗಳನ್ನು ಪಡೆಯಲು ಅನುಕೂಲವಾಗುತ್ತದೆ. ಇದಕ್ಕಾಗಿ ಆಯವ್ಯಯದಲ್ಲಿ ರೂ.5 ಕೋಟಿ ಒದಗಿಸಲಾಗಿದೆ.

67. ಸಹಕಾರ ಸಂಘಗಳ ಸದಸ್ಯರ ಆರೋಗ್ಯ ರಕ್ಷಣೆಗಾಗಿ ರೂಪಿಸಿರುವ ಯಶಸ್ವಿನಿ ಯೋಜನೆಗೆ 2008-09ರಲ್ಲಿ ರೂ. 40 ಕೋಟಿ ಒದಗಿಸಿದ್ದು, ಈ ವರೆಗೆ 8.14 ಲಕ್ಷ ಸದಸ್ಯರು ಈ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ. ಈ ಪೈಕಿ 1.85 ಲಕ್ಷ ಸದಸ್ಯರು ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಪಡೆದಿದ್ದು, 6.29 ಲಕ್ಷ ಸದಸ್ಯರು ಹೊರರೋಗಿಗಳಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಕೇವಲ ರೂ. 130ರ ವಂತಿಗೆಯಿಂದ ಸದಸ್ಯರು ಬೆಲೆಬಾಳುವ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುತ್ತಿದ್ದು ಈ ಯೋಜನೆಗಾಗಿ 2009-10ರಲ್ಲಿ ರೂ.40 ಕೋಟಿ ಒದಗಿಸಲಾಗುತ್ತಿದೆ.

## ಕೃಷಿ ಮಾರುಕಟ್ಟೆ : ಬೆಂಬಲ ಬೆಲೆ ಒದಗಿಸಲು ರೂ.750 ಕೋಟಿ

68. ರೈತರು ಉತ್ತಮವಾದ ಬೆಳೆಯನ್ನು ಪಡೆದ ಅಪರೂಪದ ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಧಾರಣೆಯ ಕುಸಿತದಿಂದ ಅಪಾರ ನಷ್ಟವನ್ನು ಅನುಭವಿಸುವುದನ್ನು ತಪ್ಪಿಸಲು ಮಾರುಕಟ್ಟೆಯ ಮಧ್ಯ ಪ್ರವೇಶಕ್ಕಾಗಿ ಸರ್ಕಾರವು ಅಗತ್ಯ ನಿಧಿಯನ್ನು ಒದಗಿಸಿದೆ. ಈ ವರ್ಷ ರಾಜ್ಯದಲ್ಲಿ ಮೆಕ್ಕೆ ಜೋಳವನ್ನು ಬೆಂಬಲ ಬೆಲೆಯ ಆಧಾರದ ಮೇಲೆ ಖರೀದಿಸಲು ಸರ್ಕಾರವು ರೂ.400 ಕೋಟಿ ದುಡಿಯುವ ಬಂಡವಾಳವನ್ನು ವ್ಯವಸ್ಥೆ ಮಾಡಿದ್ದು, ಮುಂದಿನ ವರ್ಷ ರೂ.750 ಕೋಟಿಯವರೆಗೆ ವಿವಿಧ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯ ಲಾಭವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದು.

69. 2009-10ನೇ ಸಾಲಿನಲ್ಲಿ ಕೃಷಿ ಮಾರುಕಟ್ಟೆಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಇ-ಟೆಂಡರಿಂಗ್ ಪದ್ಧತಿಯನ್ನು ಅನುಷ್ಠಾನಗೊಳಿಸಲಾಗುವುದು. ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯಲ್ಲಿ ಈರುಳ್ಳಿ, ಆಲೂಗಡ್ಡೆ ಮುಂತಾದ ಉತ್ಪನ್ನಗಳಿಗಾಗಿ ರೂ.100 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಸಗಟು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು. ಬೆಂಗಳೂರು ಬಳ್ಳಾರಿ ರಸ್ತೆಯಲ್ಲಿರುವ ಬ್ಯಾಟರಾಯನಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸುಸಜ್ಜಿತ ತರಕಾರಿ ಸಗಟು ಮಾರುಕಟ್ಟೆಯನ್ನು ಸ್ಥಾಪಿಸಲಾಗುವುದು.

## ಜಲಸಂಪನ್ಮೂಲ ಮತ್ತು ನೀರಾವರಿ

70. ಕರ್ನಾಟಕದ ಜಲಸಂಪತ್ತಿನ ಸಾರ್ಥಕ ಬಳಕೆಗೆ ಪೂರಕವಾದ ನೀರಾವರಿ ಯೋಜನೆಗಳನ್ನು ನಾವು ಅತ್ಯಂತ ಆದ್ಯತೆಯ ಮೇರೆಗೆ ಅನುಷ್ಠಾನ ಮಾಡಬೇಕಾಗಿದೆ. ರಾಜ್ಯದ ಒಟ್ಟು ಕೃಷಿ ಪ್ರದೇಶವಾದ 106 ಲಕ್ಷ ಹೆಕ್ಟೇರ್ ಪೈಕಿ ಈ ವರೆಗೆ 36.03 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗಿದೆ. ಮುಂಬರುವ ವರ್ಷಗಳಲ್ಲಿ ರಾಜ್ಯದ ನೀರಾವರಿ ಪ್ರದೇಶವನ್ನು ವಿಸ್ತರಿಸಲು ಭಾರಿ, ಮಧ್ಯಮ ಹಾಗೂ ಸಣ್ಣನೀರಾವರಿ ಯೋಜನೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸಲು ಅಗತ್ಯ ಅನುದಾನವನ್ನು ತೊಡಗಿಸಬೇಕಾಗಿದೆ. ಈ ದೃಷ್ಟಿಯಿಂದ 2009-10ನೆಯ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ರೂ.3,096 ಕೋಟಿ

ಅನುದಾನವನ್ನು ಒದಗಿಸಲಿದ್ದು ಇದು 2008-09ರ ಆಯವ್ಯಯದ ಅಂದಾಜಿಗಿಂತ ಇದು ಶೇ.20ರಷ್ಟು ಹೆಚ್ಚಾಗಿದೆ.

## ಕೃಷ್ಣಾ ಮೇಲ್ದಂಡೆ ಯೋಜನೆಗಳ ತ್ವರಿತ ಅನುಷ್ಠಾನ

71. ಜಲಸಂಪನ್ಮೂಲ ಇಲಾಖೆಯ ವತಿಯಿಂದ ಬಿಜಾಪುರ ಜಿಲ್ಲೆಯ ಚಿಮ್ಮಲಗಿ ಏತನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಮುದ್ದೇಬಿಹಾಳ್, ಬಸವನಬಾಗೇವಾಡಿ, ಸಿಂಧಗಿ, ಇಂಡಿ ಮತ್ತು ಬಿಜಾಪುರ ತಾಲ್ಲೂಕುಗಳ ಒಟ್ಟು 87,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಿದೆ. ಈ ಯೋಜನೆಯ ಒಟ್ಟು ವೆಚ್ಚ ರೂ.2,193 ಕೋಟಿ ಎಂದು ಅಂದಾಜು ಮಾಡಿದ್ದು ಈ ಬೃಹತ್ ಯೋಜನೆಯ ಅನುಷ್ಠಾನವನ್ನು ಕೂಡಲೇ ಪ್ರಾರಂಭಿಸಲಾಗುವುದು.

72. ಬಿಜಾಪುರ ಜಿಲ್ಲೆಯ ಗುತ್ತಿಬಸವಣ್ಣ ಏತನೀರಾವರಿ ಯೋಜನೆಯ 2ನೇ ಹಂತದಲ್ಲಿ ರೂ.120 ಕೋಟಿ ವೆಚ್ಚದಲ್ಲಿ ಒಟ್ಟು 20,600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ನಿರ್ಮಾಣ ಹಂತದಲ್ಲಿರುವ ಪ್ರಮುಖ ಯೋಜನೆಗಳಾದ ಕಾರಂಜಾ ಯೋಜನೆ, ತಿಮ್ಮಾಪುರ ಮತ್ತು ಸೊಣ್ಣ ಏತನೀರಾವರಿ ಯೋಜನೆಗಳು ಮತ್ತು ಹಲವು ಜಲಾಶಯಗಳ ನಿರ್ಮಾಣವನ್ನು ಈ ಸಾಲಿನಲ್ಲಿ ಕೈಗೊಳ್ಳಲಾಗುವುದು. ಇದಲ್ಲದೆ ಈಗಾಗಲೇ ಅನುಮೋದಿಸಲಾಗಿರುವ ಹಿಪ್ಪರಗಿ ನೀರಾವರಿ ಯೋಜನೆಯ ಐನಾಪುರ ಪಶ್ಚಿಮ ನಾಲೆ ಹಾಗೂ ಕರಿಮಸೂತಿ ಪೂರ್ವ ನಾಲೆ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು.

73. ಬಹು ವರ್ಷಗಳ ಬೇಡಿಕೆಯಾಗಿದ್ದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸಿ ನೀರಾವರಿ ವ್ಯವಸ್ಥೆಯನ್ನು ಹಸ್ತಾಂತರಿಸಲು ಪ್ರಾಯೋಗಿಕವಾಗಿ ತಲಾ ಒಂದೊಂದು ಮುಖ್ಯ ಕಾಲುವೆ ಅಚ್ಚುಕಟ್ಟು ಒಳಗೊಂಡಂತೆ KBJNL, KNNL, CNNL ಮೂಲಕ 3 ಅಚ್ಚುಕಟ್ಟು ಪ್ರದೇಶಗಳಲ್ಲಿ ಈ ಹಸ್ತಾಂತರ ಕಾರ್ಯಕ್ರಮಕ್ಕೆ ಅಗತ್ಯವಿರುವ ದುರಸ್ತಿ ಕಾಮಗಾರಿಗಳನ್ನು ಹಾಗೂ ಇತರೆ ಕ್ರಮಗಳನ್ನು ಕೈಗೊಳ್ಳಲಾಗುವುದು. ಮುಂದಿನ ವರ್ಷದಲ್ಲಿ 63,000 ಹೆಕ್ಟೇರ್‌ಗೆ ಮೀರಿ ಹೊಸ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ರಾಜ್ಯದ ಜಲಸಂಪನ್ಮೂಲ ಇಲಾಖೆಯು ಕ್ರಮ ಕೈಗೊಳ್ಳುವುದು.

## ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆ

74. ಈಗಾಗಲೇ ಸರ್ಕಾರದಿಂದ ಅನುಮೋದಿತವಾಗಿರುವ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸಲು ಮುಂದಿನ ವರ್ಷದಲ್ಲಿ ರೂ.500 ಕೋಟಿ ವೆಚ್ಚ ಮಾಡಲಾಗುವುದು.

## ಕೆರೆಗಳ ಅಭಿವೃದ್ಧಿಗೆ ವ್ಯವಸ್ಥಿತ ಯೋಜನೆ

75. ನೀರಾವರಿ ಕಾಮಗಾರಿಗಳಿಗಾಗಿ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ರೂ.764 ಕೋಟಿ ಅನುದಾನವನ್ನು ಒದಗಿಸಿ ನೀರಾವರಿ ಕೆರೆಗಳ ಹಾಗೂ ಏತನೀರಾವರಿ ಯೋಜನೆಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನವನ್ನು ಮಾಡಲಾಗುವುದು. ರಾಜ್ಯದ ಎಲ್ಲಾ ಕೆರೆಗಳ ಸಮಗ್ರ ಸಮೀಕ್ಷೆಯನ್ನು ನಡೆಸಿ ಅವುಗಳ ಪುನರುಜ್ಜೀವನಕ್ಕೆ ವ್ಯವಸ್ಥಿತವಾದ ಯೋಜನೆಗಳನ್ನು ಇಸ್ರೋ (ISRO) ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ದೂರಸಂವೇದನೆ ಅಳವಡಿಕೆ ಕೇಂದ್ರ (KSRAC) ದ ಮೂಲಕ ರೂಪಿಸಲು ಉದ್ದೇಶಿಸಿದೆ.

76. ಕಾವೇರಿ ನದಿಯ ಉಪನದಿಯಾದ ಅರ್ಕಾವತಿಯ ಪುನಶ್ಚೇತನಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಲು ರೂ.2 ಕೋಟಿ ಒದಗಿಸಲಾಗುವುದು.

## ಗ್ರಾಮೀಣ ಅಭಿವೃದ್ಧಿ

77. ರಾಜ್ಯದ ಗ್ರಾಮಗಳಿಗೆ ಹಂತ ಹಂತವಾಗಿ ಉತ್ತಮ ದರ್ಜೆಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಮಹತ್ವಾಕಾಂಕ್ಷೆಯ ಸುವರ್ಣ ಗ್ರಾಮೋದಯ ಯೋಜನೆಯನ್ನು ಮುಂದುವರೆಸಿದೆ. ಮೊದಲ ಹಂತದ 1,200 ಗ್ರಾಮಗಳ ಅಭಿವೃದ್ಧಿಗಾಗಿ ಈಗಾಗಲೇ ರೂ.625 ಕೋಟಿ ಒದಗಿಸಲಾಗಿದೆ. 2009-10ರಲ್ಲಿ 2ನೇ ಸುತ್ತಿನ 1,200 ಗ್ರಾಮಗಳ ಅಭಿವೃದ್ಧಿಗಾಗಿ ರೂ.300 ಕೋಟಿ ಮೊದಲನೇ ಕಂತಿನ ಅನುದಾನವನ್ನು ಒದಗಿಸಲಾಗುತ್ತಿದೆ. ಗ್ರಾಮಗಳ ಆಂತರಿಕ ರಸ್ತೆಗಳ ಅಭಿವೃದ್ಧಿ, ಚರಂಡಿಗಳ ನಿರ್ಮಾಣ, ವಿದ್ಯುದ್ದೀಕರಣ, ಶೌಚಾಲಯಗಳ ನಿರ್ಮಾಣ ಮುಂತಾದ ಅತ್ಯವಶ್ಯಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಈ ಯೋಜನೆಯಲ್ಲಿ ಗ್ರಾಮೀಣ ಸಮುದಾಯಗಳನ್ನು ತೊಡಗಿಸಲಾಗುತ್ತಿದೆ.

78. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮೀಣ ಕಾರ್ಮಿಕರ ಜೀವನ ನಿರ್ವಹಣೆಗೆ ಅತ್ಯುತ್ತಮ ಆಧಾರವನ್ನು ಒದಗಿಸುತ್ತದೆ. 2009–10ರಲ್ಲಿ ಕನಿಷ್ಠ ರೂ.1200 ಕೋಟಿ ಅನುದಾನವನ್ನು ಈ ಯೋಜನೆಯಲ್ಲಿ ಉಪಯೋಗಿಸಲು ರಾಜ್ಯ ಸರ್ಕಾರವು ಸಂಕಲ್ಪಿಸಿದ್ದು ಇದಕ್ಕಾಗಿ ತನ್ನ ಪಾಲಿನ ಅನುದಾನವನ್ನು ರೂ.144 ಕೋಟಿ ಒದಗಿಸಲಾಗುವುದು. ಪ್ರತಿ ಗ್ರಾಮಪಂಚಾಯತಿಯ ಆಶ್ರಯದಲ್ಲಿ ಕನಿಷ್ಠ 100 ಸಣ್ಣ ರೈತರ ಹಿಡುವಳಿಗಳ ಅಭಿವೃದ್ಧಿ ಮಾಡಲು ಈ ಯೋಜನೆಯ ಅನುದಾನವನ್ನು ಬಳಸಲು ಅಗತ್ಯ ಉತ್ತೇಜನವನ್ನು ನೀಡಲಾಗುವುದು. ಇದರಿಂದ ಸಣ್ಣ ರೈತರಿಗೆ ಶಾಶ್ವತವಾಗಿ ತಮ್ಮ ಹಿಡುವಳಿಗಳ ಉತ್ಪಾದಕತೆಯನ್ನು ಹೆಚ್ಚಿಸಲು ಸಾಧ್ಯವಾಗುವುದು.

## ಗ್ರಾಮೀಣ ರಸ್ತೆಗಳ ಅಭಿವೃದ್ಧಿಯಲ್ಲಿ ಸಾಧನೆ

79. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ 2008–09ರಲ್ಲಿ ಸರ್ಕಾರವು ರೂ.325 ಕೋಟಿ ವಿನಿಯೋಗಿಸಿದ್ದು 1,124 ಕಿಲೋಮೀಟರ್ ರಸ್ತೆಯನ್ನು ಉತ್ತಮಪಡಿಸಲಾಗಿದೆ. ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅನುಷ್ಠಾನದಲ್ಲಿ ರಾಜ್ಯವು ರಾಷ್ಟ್ರ ಮಟ್ಟದಲ್ಲಿಯೇ ಉನ್ನತ ಪ್ರಶಂಸೆಯನ್ನು ಗಳಿಸಿ ಈವರೆಗೆ 7,880 ಕಿಲೋಮೀಟರ್‌ಗಳ ರಸ್ತೆಯನ್ನು ನಿರ್ಮಿಸಿದೆ. ಮುಂದಿನ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರೂ.800 ಕೋಟಿ ಅನುದಾನವನ್ನು ವಿನಿಯೋಗಿಸಿ 2,500 ಕಿಲೋಮೀಟರ್ ರಸ್ತೆಗಳನ್ನು ಉತ್ತಮಪಡಿಸಲಾಗುವುದು.

80. ಖಾಸಗಿ ಸಹಭಾಗಿತ್ವದೊಡನೆ ವಾರ್ಷಿಕ ಪಾವತಿ (Annuity) ಆಧಾರದ ಮೇಲೆ ರೂ.5,000 ಕೋಟಿ ವೆಚ್ಚದಲ್ಲಿ ಗ್ರಾಮೀಣ ರಸ್ತೆಗಳನ್ನು ಉತ್ತಮಪಡಿಸಲು ಬೃಹತ್ ಯೋಜನೆಯನ್ನು ಮುಂದಿನ ವರ್ಷ ಪ್ರಾರಂಭಿಸಲಾಗುವುದು. ಈ ವಿಷಯದಲ್ಲಿ ಪೂರ್ವಭಾವಿ ವೆಚ್ಚಕ್ಕಾಗಿ ರೂ.10 ಕೋಟಿ ವಿನಿಯೋಗಿಸಲಾಗುವುದು.

81. ಮಲೆನಾಡು ಪ್ರದೇಶದಲ್ಲಿ ಹೆಚ್ಚು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಿದ್ದು ಈ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ 500 ಕಾಲು ಸಂಕಗಳ ಹಾಗೂ ತೂಗು ಸೇತುವೆಗಳ ನಿರ್ಮಾಣಕ್ಕೆ ರೂ.25 ಕೋಟಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

## ಶಾಶ್ವತ ನೀರು ಸರಬರಾಜು ಯೋಜನೆಗಳ ಪರಿಕಲ್ಪನೆ

82. ನದಿ ಹಾಗೂ ಜಲಾಶಯಗಳಿಂದ ಗ್ರಾಮೀಣ ಜನವಸತಿಗಳಿಗೆ ಮತ್ತು ನಗರ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ವಿಶೇಷ ಯೋಜನೆಯೊಂದನ್ನು ರೂಪಿಸಲಾಗುತ್ತಿದ್ದು ಪ್ರಾರಂಭಿಕವಾಗಿ ಬಿಜಾಪುರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಯೋಜನೆಯನ್ನು 2009-10ರಲ್ಲಿ ಅನುಷ್ಠಾನಗೊಳಿಸಲು ರೂ.100 ಕೋಟಿಯನ್ನು ವಿನಿಯೋಗಿಸಲಾಗುವುದು. ಇದಲ್ಲದೆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ನಿರ್ಮಾಣಕ್ಕಾಗಿ ಒಟ್ಟಾರೆ ರೂ.800 ಕೋಟಿ ಅನುದಾನವನ್ನು ಒದಗಿಸಲಾಗುವುದು.

83. ರಾಜ್ಯದ ಹಳ್ಳಿಗಳಲ್ಲಿ ಗ್ರಾಮನೈರ್ಮಲ್ಯದ ವ್ಯವಸ್ಥೆಯನ್ನು ಕಲ್ಪಿಸುವುದು ಜನರ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿದೆ. 2009-10ನೇ ವರ್ಷದಲ್ಲಿ ಗ್ರಾಮೀಣ ನೈರ್ಮಲ್ಯದ ಆಂದೋಲನದಲ್ಲಿ ಉತ್ತಮ ಸಾಧನೆಯನ್ನು ತೋರುವ ಗ್ರಾಮ, ತಾಲ್ಲೂಕು, ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲು ರೂ.5 ಕೋಟಿ ವಿನಿಯೋಗಿಸಲಾಗುವುದು. ಈ ವಿಷಯದಲ್ಲಿ ಸಾಕಷ್ಟು ಪ್ರಗತಿ ಸಾಧಿಸಲು ವಿಫಲವಾಗುವ ಪಂಚಾಯತಿಗಳ ವಿರುದ್ಧ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

84. ಅಲ್ಲದೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮುಂದುವರೆದ ಯೋಜನೆಗಳ ಜೊತೆಯಲ್ಲಿ 2009-10ನೇ ಸಾಲಿನಲ್ಲಿ ಈ ಕೆಳಕಂಡ ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

- ತುರ್ತು ನೀರು ಸರಬರಾಜು ಯೋಜನೆಗಳ ಅನುಷ್ಠಾನಕ್ಕಾಗಿ ತಾಲ್ಲೂಕು ಮಟ್ಟದ ಕಾರ್ಯಪಡೆಗಳಿಗೆ ರೂ. 35.00 ಕೋಟಿಗಳನ್ನು ಒದಗಿಸಲಾಗಿದೆ.
- ಸಬ್-ಮಿಷನ್ ಕಾರ್ಯಕ್ರಮ / ಬಹುಗ್ರಾಮಗಳ ನೀರು ಸರಬರಾಜು ಕಾರ್ಯಕ್ರಮಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳ ನಿರ್ವಹಣೆಗಾಗಿ ರೂ. 25.00 ಕೋಟಿಗಳನ್ನು ಒದಗಿಸಲಾಗುವುದು.
- "ಸೌರ ಬೆಳಕು" - ಗ್ರಾಮಗಳಲ್ಲಿ ಸೌರ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸಲು ರೂ.5 ಕೋಟಿ ನೀಡಲಾಗುವುದು.

- ಗ್ರಾಮ ಪಂಚಾಯತಿ ಕಟ್ಟಡಗಳ ನಿರ್ಮಾಣಕ್ಕಾಗಿ **'ಗ್ರಾಮ ಸೌಧ'** ಯೋಜನೆಯನ್ನು ರೂಪಿಸಿ, ಪ್ರಸ್ತುತ ವರ್ಷದಲ್ಲಿ ರೂ.50.00 ಕೋಟಿಗಳನ್ನು ಒದಗಿಸಲಾಗಿದೆ. ರೂ.10 ಲಕ್ಷದ ಅಂದಾಜಿನಲ್ಲಿ ಪಂಚಾಯುತಿ ಕಾರ್ಯಾಲಯುದ ನಿರ್ವಾಣಕ್ಕಾಗಿ ಗ್ರಾವು ಪಂಚಾಯತಿಗಳಿಗೆ ಶೇ.50 ರಷ್ಟು ಅನುದಾನ ನೀಡಲಾಗುವುದು.

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

85. ರಾಜ್ಯದಲ್ಲಿ ಜನರ ಸಾಕ್ಷರತಾ ಪ್ರಮಾಣವು ಈಗ ಶೇ.67 ರಷ್ಟಿದ್ದು ಇದನ್ನು ತೀವ್ರಗತಿಯಲ್ಲಿ ಹೆಚ್ಚಿಸಲು ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸಬೇಕಾಗಿದೆ. ಇದಲ್ಲದೆ, ರಾಜ್ಯದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟವನ್ನು ಗಣನೀಯವಾಗಿ ಹೆಚ್ಚಿಸಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಉತ್ತಮ ತಳಹದಿಯನ್ನು ನಿರ್ಮಿಸಬೇಕಾಗಿದೆ. ಈ ದೃಷ್ಟಿಯಿಂದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಆಯವ್ಯಯವನ್ನು 2008–09ರಲ್ಲಿ ಗಣನೀಯವಾಗಿ ಹೆಚ್ಚಿಸಿದ್ದು, ಮುಂದಿನ ವರ್ಷಗಳಲ್ಲಿ ಈ ಕ್ಷೇತ್ರದ ಪ್ರಾಮುಖ್ಯತೆಯನ್ನು ಕ್ರಮೇಣ ಹೆಚ್ಚಿಸಲಾಗುವುದು.

86. ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಕ್ಷರ ದಾಸೋಹ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವ 8ನೇ ತರಗತಿಯ ಹೆಣ್ಣುಮಕ್ಕಳಿಗೆ ನೀಡುವ ಉಚಿತ ಬೈಸಿಕಲ್ ಯೋಜನೆಯನ್ನು 2008–09ರಿಂದ 8ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗಿದ್ದು, ಈ ಯೋಜನೆಯನ್ನು 2009–10ನೇ ಸಾಲಿನಲ್ಲಿ ಮುಂದುವರಿಸಲಾಗುವುದು.

87. ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಅಗತ್ಯವಿರುವ ಶಿಕ್ಷಕರ ಹುದ್ದೆಯನ್ನು ಭರ್ತಿಮಾಡಲಾಗುವುದು, ಹಾಗೂ ಈ ಭಾಗಕ್ಕೆ ವಿಶೇಷ ಗಮನ ಹರಿಸಿ ಶಿಕ್ಷಕರ ಮತ್ತು ಮಕ್ಕಳ ಅನುಪಾತವನ್ನು ರಾಜ್ಯ ಸರಾಸರಿಗೆ ತಕ್ಕಂತೆ ಸಮತೋಲನಗೊಳಿಸಲಾಗುವುದು.

88. 2009–10ನೇ ಸಾಲಿನಿಂದ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಸಹಯೋಗದೊಂದಿಗೆ ರಾಜ್ಯದ ಹಿಂದುಳಿದ ಶಿಕ್ಷಣ

ವಲಯಗಳಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ 114 ಕೇಂದ್ರೀಯ ವಿದ್ಯಾಲಯ ಮಾದರಿಯ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳನ್ನು ತೆರೆಯಲಾಗುವುದು.

89. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಡಿಸೆಂಬರ್ 2006ರ ನಂತರ ಉದ್ಭವಿಸಿದ ಸಹ ಶಿಕ್ಷಕರ ಖಾಲಿ ಹುದ್ದೆಗಳನ್ನು (2531 ಹುದ್ದೆ) ಭರ್ತಿ ಮಾಡುವ ಸಲುವಾಗಿ ಅಗತ್ಯವಿರುವ (ಅಂದಾಜು 35.00 ಕೋಟಿ) ಅನುದಾನವನ್ನು ನೀಡಿ ಈಗಿನ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಲಾಗುವುದು.

90. ಕಿತ್ತೂರು ಚೆನ್ನಮ್ಮ ಮಹಿಳಾ ವಿದ್ಯಾಶಾಲೆಯ ಅಭಿವೃದ್ಧಿಗೆ ರೂ.2 ಕೋಟಿ ನೀಡಲಾಗುವುದು.

## ಉನ್ನತ ಶಿಕ್ಷಣ

91. ರಾಜ್ಯದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪ್ರಮಾಣವು ಶಾಲಾ ಶಿಕ್ಷಣವನ್ನು ಪೂರೈಸುವ ಶೇ.60 ರಷ್ಟು ಮಾತ್ರವಿದ್ದು ಇದನ್ನು ಕನಿಷ್ಟ ಶೇ.75ಕ್ಕೆ ಹೆಚ್ಚಿಸುವುದು ಅವಶ್ಯಕವಾಗಿದೆ. ಇದಕ್ಕಾಗಿ ಉನ್ನತ ಶಿಕ್ಷಣ ಸಂಸ್ಥೆಗಳ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ.

92. ಇತ್ತೀಚೆಗೆ ಸ್ಥಾಪಿತವಾಗಿರುವ ತುಮಕೂರು ವಿಶ್ವವಿದ್ಯಾನಿಲಯ ಮತ್ತು ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯಗಳಿಗೆ ಸೂಕ್ತ ಮೂಲ ಸೌಲಭ್ಯಗಳನ್ನು ಕಲ್ಪಿಸಲು 2009–10ರಲ್ಲಿ ರೂ.10 ಕೋಟಿ ಅನುದಾನವನ್ನು ಒದಗಿಸಲಾಗುವುದು.

## ಡಾ॥ ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾನಿಲಯ

93. ತುಮಕೂರು ವಿಶ್ವವಿದ್ಯಾನಿಲಯವನ್ನು ಡಾ॥ ಶಿವಕುಮಾರ ಸ್ವಾಮೀಜಿ ವಿಶ್ವವಿದ್ಯಾನಿಲಯವೆಂದು ಪುನರ್‌ನಾಮಕರಣ ಮಾಡಲಾಗುವುದು.

94. ಕೊಡಗಿನ ಕುಶಾಲನಗರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ರೂ.2 ಕೋಟಿ ಒದಗಿಸಲಾಗುವುದು.

95. ಆಯುರ್ವೇದ ವೈದ್ಯ ವಿಜ್ಞಾನದ ಅಭಿವೃದ್ಧಿಗಾಗಿ ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು.

96. ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಡಾ॥ ಅಂಬೇಡ್ಕರ್ ಅಧ್ಯಯನ ಪೀಠವನ್ನು ಸ್ಥಾಪಿಸಲು ಈಗಾಗಲೇ ಅನುಮತಿ ನೀಡಿದ್ದು ಅದಕ್ಕಾಗಿ ರೂ.2 ಕೋಟಿ ಅನುದಾನವನ್ನು ನೀಡಲಾಗುವುದು.

97. ಧಾರವಾಡದ ಸಿಎಂಡಿಆರ್ ಸಂಸ್ಥೆಯಲ್ಲಿ ಡಾ॥ ಡಿ.ಎಂ. ನಂಜುಂಡಪ್ಪನವರ ಹೆಸರಿನಲ್ಲಿ ಸಂಶೋಧನಾ ಪೀಠವನ್ನು ಸ್ಥಾಪಿಸಲು ರೂ.1 ಕೋಟಿ ಒದಗಿಸಲಾಗುವುದು.

98. ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮದಲ್ಲಿ ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ತಾಂತ್ರಿಕ ಪ್ರದರ್ಶನಾಲಯ ಹಾಗೂ ಸಭಾಭವನವನ್ನು ಸ್ಥಾಪಿಸಲು ರೂ.2 ಕೋಟಿ ಅನುದಾನ ನೀಡಲಾಗುವುದು.

**ದಾವಣಗೆರೆಯಲ್ಲಿ ಹೊಸ ವಿಶ್ವವಿದ್ಯಾನಿಲಯ**

99. ರಾಜ್ಯದಲ್ಲಿ ಉನ್ನತ ಶಿಕ್ಷಣ ಸೌಕರ್ಯಗಳನ್ನು ವಿಸ್ತರಿಸಲು ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಅವಶ್ಯಕತೆ ಇದ್ದು 2009-10ರಲ್ಲಿ ದಾವಣಗೆರೆಯಲ್ಲಿ ನೂತನ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ದಾವಣಗೆರೆಯ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸುಮಾರು 170 ಎಕರೆ ಜಮೀನು, ಕಟ್ಟಡಗಳು ಮತ್ತು ಶೈಕ್ಷಣಿಕ ಸಿಬ್ಬಂದಿಯು ಲಭ್ಯವಿದ್ದು ಈ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರೂ. 10 ಕೋಟಿ ಒದಗಿಸಲಾಗುವುದು.

100. ಹಿಂದುಳಿದ ಕೊಪ್ಪಳ ಜಿಲ್ಲೆಯಲ್ಲಿ ತಾಂತ್ರಿಕ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಲು ಗಂಗಾವತಿಯಲ್ಲಿ ನೂತನ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ರೂ.10 ಕೋಟಿ ಒದಗಿಸಲಾಗುವುದು.

101. ಬೆಂಗಳೂರಿನಲ್ಲಿ ಸಂಸ್ಕೃತ-ವೇದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಮತ್ತು ಮೈಸೂರಿನಲ್ಲಿ ಸಂಗೀತ ಮತ್ತು ಲಲಿತ ಕಲೆಗಳ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಈಗಾಗಲೇ ವಿಧೇಯಕಗಳನ್ನು ವಿಧಾನ ಮಂಡಲದಲ್ಲಿ ಮಂಡಿಸಲಾಗಿದೆ. ಮೇಲುಕೋಟೆಯಲ್ಲಿ ಸಂಸ್ಕೃತ ಸಂಶೋಧನಾ ಮತ್ತು ಅಕಾಡೆಮಿ ಕೇಂದ್ರದ ಅಭಿವೃದ್ಧಿಗೆ ಸಹಾಯಧನ ನೀಡಲಾಗುವುದು. ಈ ವಿಶ್ವವಿದ್ಯಾಲಯಗಳ ವೆಚ್ಚಕ್ಕಾಗಿ ತಲಾ ರೂ.5 ಕೋಟಿ ಒದಗಿಸಲಾಗುವುದು.

## ವಿಜ್ಞಾನ ಮತ್ತು ತಂತ್ರಜ್ಞಾನ

102. ಪ್ರೊ॥ ಸಿ.ಎನ್.ಆರ್. ರಾವ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ವಿಜ್ಞಾನ ಮತ್ತು ತಂತ್ರಜ್ಞಾನ ವಿಷನ್ ಗ್ರೂಪ್ ಸಲಹೆಯಂತೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ವಿದ್ಯಾರ್ಥಿ – ವಿಜ್ಞಾನಿ ಸಂವಾದ, ವಿಜ್ಞಾನ ಮೇಳ, ವಿಜ್ಞಾನ ಸಂಘಗಳ ಸ್ಥಾಪನೆ, ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠ ಸಂಸ್ಥೆಗಳನ್ನು ಸ್ಥಾಪಿಸಲು ಕಾಲೇಜು–ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ ಶಿಕ್ಷಣದ ಉನ್ನತೀಕರಣ, ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ ಮತ್ತು ವಸ್ತು ಸಂಗ್ರಹಾಲಯ, ಇತ್ಯಾದಿ ನೂತನ ಕಾರ್ಯಕ್ರಮಗಳಿಗೆ ರೂ.10 ಕೋಟಿ ಕೊಡಲಾಗುವುದು.

## ಚಿತ್ರದುರ್ಗದಲ್ಲಿ ವಿಜ್ಞಾನ ಸಂಸ್ಥೆ

103. ಚಿತ್ರದುರ್ಗದ ಜಿಲ್ಲೆಯಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯ ಶಾಖೆಯನ್ನು ತೆರೆಯಲು 1000 ಎಕರೆಯ ಜಮೀನನ್ನು ಒದಗಿಸಲಾಗುವುದು.

104. ರಾಜ್ಯದಲ್ಲಿ ಕರ್ನಾಟಕ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ ಮತ್ತು ಖಾಯಂ ಭೂಕಂಪನ ಮಾಪನ ಕೇಂದ್ರಗಳ ಸ್ಥಾಪನೆ ಮಾಡಲು ರೂ.5 ಕೋಟಿ ಮೀಸಲಿಡಲಾಗುವುದು.

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

105. ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಶಿಫಾರಸ್ಸುಗಳನ್ನು ಪರಿಗಣಿಸಿ, ಬೆಂಗಳೂರು ಹೊರಗಡೆ ಪ್ರಮುಖ ನಗರಗಳಲ್ಲಿ ಬಯೋಟೆಕ್ ಪಾರ್ಕ್‌ಗಳನ್ನು ನಿರ್ಮಾಣ ಮಾಡಲಾಗುವುದು. ಗುಲ್ಬರ್ಗಾ ವಿಭಾಗದಲ್ಲಿ ಐ.ಟಿ. ಕ್ಷೇತ್ರಕ್ಕೆ ಉತ್ತೇಜನ ನೀಡಲು ಕಿಯೋನಿಕ್ಸ್ ಮುಖಾಂತರ ಐ.ಟಿ. ಪಾರ್ಕ್ ನಿರ್ಮಾಣ ಮಾಡಲು ರೂ. 10 ಕೋಟಿ ನೀಡಲಾಗುವುದು.

106. ಹಿಂದುಳಿದ ಪ್ರದೇಶವಾದ ಗುಲ್ಬರ್ಗ ವಿಭಾಗದಲ್ಲಿ ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರತಿ ಘಟಕಕ್ಕೆ ರೂ.20 ಲಕ್ಷದವರೆಗೆ ಸಹಾಯಧನ ನೀಡಲಾಗುವುದು.

107. ಗ್ರಾಮೀಣ ಪ್ರದೇಶದಲ್ಲಿ ಇಂಟರ್‌ನೆಟ್ ಉಪಯೋಗ ಜನಪ್ರಿಯಗೊಳಿಸಲು ಎಲೆಕ್ಟ್ರಾನಿಕ್ ಪಬ್ಲಿಕ್ ಕಾಲ್ ಆಫೀಸ್ (e-PCO) ಸ್ಥಾಪನೆಗೆ ಉತ್ತೇಜನ ನೀಡಲಾಗುವುದು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**

108. ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಸೌಲಭ್ಯಗಳ ಅಭಿವೃದ್ಧಿಗಾಗಿ ಸರ್ಕಾರವು ವೆಚ್ಚಮಾಡುತ್ತಿರುವ ಮೊತ್ತವು ಪ್ರತಿ ವರ್ಷವೂ ಹೆಚ್ಚಾಗುತ್ತಿದೆ. 2009-10ನೇ ಸಾಲಿನಲ್ಲಿ ಒಟ್ಟು ರೂ.1840 ಕೋಟಿ ವೆಚ್ಚದಲ್ಲಿ ಸರ್ಕಾರದ ವೈದ್ಯಕೀಯ ಸೇವೆಗಳ ವ್ಯವಸ್ಥೆಯನ್ನು ನಿರ್ವಹಿಸಿ ಬಲಪಡಿಸಲಾಗುವುದು.

109. ರಾಜ್ಯದಲ್ಲಿ ವೈದ್ಯಕೀಯ, ಆರಕ್ಷಕ ಮತ್ತು ಅಗ್ನಿಶಾಮಕ ತುರ್ತು ಸೇವೆಗಳನ್ನು ಒದಗಿಸುವ ಸಲುವಾಗಿ ತುರ್ತು ನಿರ್ವಹಣೆ ಪ್ರಕ್ರಿಯೆ ಸೇವೆ ಅಂದರೆ **'ಆರೋಗ್ಯ ಕವಚ'** ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು ಅದು ರಾಜ್ಯದಲ್ಲಿ ಜನಪ್ರಿಯತೆಯನ್ನು ಗಳಿಸಿದೆ ಎಂದು ತಿಳಿಸಲು ನನಗೆ ಸಂತೋಷವಾಗಿದೆ. ಈ ಯೋಜನೆಯಡಿ ಮಾರ್ಚ್ 2010ರ ವೇಳೆಗೆ 517 ಆಂಬುಲೆನ್ಸ್‌ಗಳನ್ನು ರೂ. 221.25 ಕೋಟಿಗಳ ವೆಚ್ಚದಲ್ಲಿ ನೀಡಲಾಗುವುದು. 2008ರ ನವೆಂಬರ್ ರಿಂದ ಫೆಬ್ರವರಿ 1, 2009ರ ವರೆಗೆ ಈ ಯೋಜನೆಯಡಿ ಒಟ್ಟು 8,15,658 ದೂರವಾಣಿ ಕರೆಗಳನ್ನು ನಿರ್ವಹಿಸಲಾಗಿದ್ದು, ಒಟ್ಟಾರೆ 8832 ಜೀವಗಳನ್ನು ಉಳಿಸಲಾಗಿದೆಯೆಂದು ಅಂದಾಜು ಮಾಡಿದೆ.

**ಬಡ ಕುಟುಂಬಗಳಿಗೆ ಉಚಿತ ಆರೋಗ್ಯ ವಿಮೆ**

110. ಗುಲ್ಬರ್ಗ ವಿಭಾಗದ ಹಿಂದುಳಿದ ಜಿಲ್ಲೆಗಳಲ್ಲಿ 'ಸುವರ್ಣ ಆರೋಗ್ಯ ಸುರಕ್ಷಾ' ಯೋಜನೆಯ ಮೂಲಕ 16 ಲಕ್ಷ ಬಡ ಕುಟುಂಬಗಳಿಗೆ ತಲಾ ರೂ.1.50 ಲಕ್ಷದವರೆಗೆ ವೈದ್ಯಕೀಯ ನೆರವನ್ನು ಉಚಿತವಾಗಿ ಒದಗಿಸಲಾಗುವುದು.

111. ಉನ್ನತ ಮಟ್ಟದ ವಿಶೇಷ ತಂತ್ರಜ್ಞಾನದ ವೈದ್ಯಕೀಯ ಸಂಸ್ಥೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸರ್ಕಾರವು 2008-09ನೇ ಸಾಲಿನಲ್ಲಿ ಕರ್ನಾಟಕ ಮಧುಮೇಹ ಸಂಸ್ಥೆಯನ್ನು ಸ್ಥಾಪಿಸಿದ್ದು ಈ ಸಂಸ್ಥೆಯ ಚಿಕಿತ್ಸಾ ಸೌಲಭ್ಯಗಳ ಸಂಕೀರ್ಣವನ್ನು ನಿರ್ಮಿಸಲು 2009-10ರಲ್ಲಿ ರೂ.5 ಕೋಟಿ ವಿನಿಯೋಗಿಸಲಾಗುವುದು.

112. ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ ಸಂಸ್ಥೆಯ ಅಭಿವೃದ್ಧಿಗಾಗಿ ರೂ.4.5 ಕೋಟಿ ಅನುದಾನ ನೀಡಲಾಗುವುದು.

113. ಎಸ್.ಡಿ.ಎಸ್. ಸ್ಯಾನಿಟೋರಿಯಂ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯನ್ನು ಸ್ವಾಯುತ್ತ ಸಂಸ್ಥೆಯಾಗಿ ಪರಿವರ್ತಿಸಿ ರೂ.10 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲಾಗುವುದು.

114. ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ ಹಾಗೂ ಜಯದೇವ ಹೃದ್ರೋಗ ಆಸ್ಪತ್ರೆಗಳ ಶಾಖೆಗಳನ್ನು ತೆರೆಯಲು ರೂ.10 ಕೋಟಿ ವಿನಿಯೋಗಿಸಲಾಗುವುದು.

115. ಮೈಸೂರಿನ ಆಯುರ್ವೇದ ಆಸ್ಪತ್ರೆಯ ಶತಮಾನೋತ್ಸವ ಸಂದರ್ಭದಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ರೂ.2 ಕೋಟಿ ನೀಡಲಾಗುವುದು.

**ಧಾರವಾಡದಲ್ಲಿ ಮಾನಸಿಕ ಆರೋಗ್ಯ ಸಂಸ್ಥೆ**

116. ಧಾರವಾಡದಲ್ಲಿ ಮಾನಸಿಕ ರೋಗಗಳ ಆಸ್ಪತ್ರೆಯನ್ನು ಬೆಂಗಳೂರಿನ ನಿಮ್ಹಾನ್ಸ್ ಮಾದರಿಯಲ್ಲಿ ಸ್ವಾಯುತ್ತ ಸಂಸ್ಥೆಯಾಗಿ ಪರಿವರ್ತಿಸಿ ಉನ್ನತೀಕರಿಸಲು ರೂ.10 ಕೋಟಿ ಒದಗಿಸಲಾಗುವುದು.

117. ಬೆಳಗಾವಿಯ ಸಾರ್ವಜನಿಕ ಆಸ್ಪತ್ರೆ ಮತ್ತು ಬೀದರ್ ಸಾರ್ವಜನಿಕ ಆಸ್ಪತ್ರೆಯ ಸೌಲಭ್ಯಗಳನ್ನು ಹೆಚ್ಚಿಸಲು ತಲಾ 250 ಹೆಚ್ಚುವರಿ ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಲಾಗುವುದು. ಬಳ್ಳಾರಿಯ ಜಿಲ್ಲಾ ಆಸ್ಪತ್ರೆಯನ್ನು ಉನ್ನತೀಕರಿಸಲಾಗುವುದು.

118. ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರ ಪೌಷ್ಠಿಕಾಂಶದ ಅವಶ್ಯಕತೆಗಾಗಿ ನೀಡಲಾಗುತ್ತಿದ್ದ ರೂ.2000 ಉತ್ತೇಜನಾ ಧನದ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ 2008-09ನೇ ಸಾಲಿನಿಂದ ವಿಸ್ತರಿಸಲಾಗಿದ್ದು ಇದಕ್ಕಾಗಿ ರೂ.15 ಕೋಟಿ ವೆಚ್ಚ ಆಗಲಿದೆ.

119. ಮಾರುಕಟ್ಟೆಯಲ್ಲಿ ಲಭ್ಯವಾಗುವ ಔಷಧಿಗಳ ಗುಣಮಟ್ಟವನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳುವ ಸಲುವಾಗಿ ನಮ್ಮ ಸರ್ಕಾರವು ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ

2009–10ನೇ ಸಾಲಿನಲ್ಲಿ ಎರಡು ಹೆಚ್ಚುವರಿ ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಿದೆ. ಇಡೀ ರಾಷ್ಟ್ರದಲ್ಲಿ ಒಂದಕ್ಕಿಂತಲೂ ಹೆಚ್ಚಿನ ಔಷಧ ಪರೀಕ್ಷಾ ಪ್ರಯೋಗಾಲಯವು ಇರುವುದು ಕರ್ನಾಟಕ ರಾಜ್ಯದಲ್ಲಿ ಎಂದು ತಿಳಿಸಲು ಹೆಮ್ಮೆಯಾಗುತ್ತಿದೆ.

120. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಬೆಳಗಾವಿ ಲಸಿಕಾ ಸಂಸ್ಥೆಗೆ ಸೇರಿದ ಆವರಣದಲ್ಲಿನ ಒಟ್ಟು 156 ಎಕರೆ ಜಮೀನಿನಲ್ಲಿ ಒಂದು ಸಸ್ಯತೋಟ (Botanical Garden) ವನ್ನು ಬೆಂಗಳೂರಿನ ಲಾಲ್‌ಬಾಗ್ ಮಾದರಿಯಲ್ಲಿ ತೋಟಗಾರಿಕೆ ಇಲಾಖೆಯ ಮೂಲಕ ಸ್ಥಾಪಿಸಲು ಉದ್ದೇಶಿಸಿದೆ. ಈ ಉದ್ದೇಶಕ್ಕಾಗಿ ರೂ.5 ಕೋಟಿ ಅನುದಾನ ನೀಡಲಾಗುವುದು.

**ಸಮಾಜ ಕಲ್ಯಾಣ**

**"ಕೀಳು ಮೇಲುಗಳಿಲ್ಲವಾಗಲಿ**
**ಸರ್ವಸಮತೆಯು ಮೂಡಲಿ**
**ಮನದ ಕಾರ್ಗತ್ತಲೆಯು ಹರಿಯಲಿ**
**ಜ್ಞಾನ ಜ್ಯೋತಿಯು ಬೆಳಗಲಿ"**

*- ಹಿ.ಮ. ನಾಗಯ್ಯ*

121. ಕವಿಯ ಆಶಯದಂತೆ ಸಮಾಜದಲ್ಲಿನ ಬೇಧ–ಭಾವ ದೂರವಾಗಿ ಎಲ್ಲೆಡೆ ಸಮತೆ ಮೂಡಬೇಕೆಂಬುದು ಸರ್ಕಾರದ ಆಶಯ. ಆದ್ದರಿಂದ ಶೋಷಿತರು ಮತ್ತು ಹಿಂದುಳಿದವರ ಅಭ್ಯುದಯಕ್ಕೆ ಸರ್ಕಾರ ಆದ್ಯತೆಯ ಮೇಲೆ ಕಾರ್ಯಕ್ರಮಗಳನ್ನು ರೂಪಿಸಿರುವುದಲ್ಲದೇ ಅಧಿಕ ಹಣಕಾಸು ಹಂಚಿಕೆ ಮಾಡಿದೆ.

122. ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜೀವನಮಟ್ಟವನ್ನು ಸುಧಾರಿಸಲು ಅವರಿಗೆ ವಸತಿ ಸೌಲಭ್ಯ, ಉದ್ಯೋಗಾವಕಾಶಗಳು ಮುಂತಾದ ಕನಿಷ್ಠ ಜೀವನ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಆ ವರ್ಗಗಳ ಮಕ್ಕಳು ಹಾಗೂ ಯುವಕರಿಗೆ ಉತ್ತಮ ಶಿಕ್ಷಣ ಸೌಕರ್ಯಗಳನ್ನು ನೀಡುವುದರಿಂದ ಅವರ ಶಾಶ್ವತ ಅಭಿವೃದ್ಧಿ ಸಾಧ್ಯವಾಗುತ್ತದೆ. ಕಳೆದ ಮುಂಗಡ ಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ

ನೀಡಲಾಗುತ್ತಿದ್ದ ಪೋಷಣಾ ವೆಚ್ಚವನ್ನು ಮಾಸಿಕ ರೂ.450 ರಿಂದ ರೂ. 600 ಕ್ಕೆ ಹೆಚ್ಚಿಸಿದ್ದು ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ. ಈ ವರ್ಷದ ಮುಂಗಡ ಪತ್ರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಆದ್ಯತೆಯನ್ನು ನೀಡಿ ಅವರ ಅಭಿವೃದ್ಧಿಗಾಗಿ ಈ ಕೆಳಕಂಡ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಕ್ರೋಢೀಕೃತ ಅನುದಾನ (Pooled Fund) ದಲ್ಲಿ ಹೆಚ್ಚಳ**

- ವಿಶೇಷ ಘಟಕಯೋಜನೆ ಮತ್ತು ಗಿರಿಜನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ವಿವಿಧ ಇಲಾಖೆಗಳಿಗೆ ನೀಡಿರುವ ಅನುದಾನವನ್ನು ಆ ವರ್ಗಗಳ ಜನರಿಗೆ ಹೆಚ್ಚು ಪ್ರಯೋಜನಕಾರಿಯಾದ ಯೋಜನೆಗಳು, ಅಂದರೆ ವಸತಿ, ಶಿಕ್ಷಣ ಸೌಕರ್ಯ ಮುಂತಾದ ವೆಚ್ಚಗಳಿಗಾಗಿ ಕ್ರೋಢೀಕರಿಸಲಾಗುತ್ತಿದೆ. ಈ ಕ್ರೋಢೀಕೃತ ಅನುದಾನದ (Pooled Fund) ಮೊತ್ತವನ್ನು 2009-10ರಲ್ಲಿ ರೂ.200 ಕೋಟಿಯಿಂದ ರೂ.600 ಕೋಟಿಗೆ ಹೆಚ್ಚಿಸಲಾಗುವುದು.
- ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳಲ್ಲಿರುವ ನಿಲಯಾರ್ಥಿಗಳ ಭೋಜನ ವೆಚ್ಚವನ್ನು ಪ್ರತಿ ತಿಂಗಳಿಗೆ ರೂ.350 ರಿಂದ ರೂ.500ಕ್ಕೆ ಹೆಚ್ಚಿಸಲಾಗುವುದು.

**ಹೆಣ್ಣು ಮಕ್ಕಳಿಗಾಗಿ 'ಕಿತ್ತೂರುರಾಣಿ ಚೆನ್ನಮ್ಮ ಶಾಲೆಗಳು'**

- ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಪ್ರಮಾಣವು ಅತ್ಯಂತ ಕಡಿಮೆ ಇದೆ. 2009-10ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ 114 ವಸತಿ ಶಾಲೆಗಳನ್ನು 'ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆ' ಹೆಸರಿನಲ್ಲಿ ತೆರೆಯಲು ರೂ.100 ಕೋಟಿ ಅನುದಾನವನ್ನು ನೀಡಲಾಗುವುದು. ಈ ಶಾಲೆಗಳಲ್ಲಿ ಶೇ.25ರಷ್ಟು ಇತರ ವರ್ಗಗಳ ವಿದ್ಯಾರ್ಥಿನಿಯರಿಗೆ ಅವಕಾಶ ನೀಡಲಾಗುವುದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು 10ನೇ ತರಗತಿಯಲ್ಲಿ ಶೇ.75ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳಿಗೆ ರೂ.10,000 ಮತ್ತು ಶೇ.60ಕ್ಕಿಂತಲೂ ಹೆಚ್ಚು ಅಂಕ ಗಳಿಸಿದ ಹೆಣ್ಣುಮಕ್ಕಳಿಗೆ ರೂ.5,000 ಪ್ರೋತ್ಸಾಹ ಧನವನ್ನು ನೀಡಲಾಗುವುದು.
- ವಿದ್ಯಾರ್ಥಿನಿಲಯಗಳಲ್ಲಿ ನಿಲಯಾರ್ಥಿಗಳ ಸಂಖ್ಯೆಯನ್ನು ಶೇ.50 ರಷ್ಟು ಹೆಚ್ಚಿಸಲಾಗುವುದು. ಅವರ ಕೌಶಲ್ಯವನ್ನು ಉನ್ನತಿಗೊಳಿಸಿ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಅವರಿಗೆ ಕಂಪ್ಯೂಟರ್ ತರಬೇತಿ, ಭಾಷಾಜ್ಞಾನ ಹಾಗೂ ಗಣಿತ ವಿಷಯಗಳಲ್ಲಿ ವಿಶೇಷ ಶಿಕ್ಷಣದ ವ್ಯವಸ್ಥೆ ಮಾಡಲು ರೂ.20 ಕೋಟಿ ಒದಗಿಸಲಾಗಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲು ರೂ. 100 ಕೋಟಿ ಒದಗಿಸಲಾಗುವುದು.
- ಲಿಡ್ಕರ್ ಸಂಸ್ಥೆಯನ್ನು ಜಗಜೀವನರಾಮ್ ಅಭಿವೃದ್ಧಿ ನಿಗಮವೆಂದು ಪುನರ್ ನಾಮಕರಣ ಮಾಡಿ ಚರ್ಮ ಕೈಗಾರಿಕೆಯನ್ನು ಅವಲಂಬಿಸಿರುವ ಕುಟುಂಬಗಳಿಗೆ ತಾಂತ್ರಿಕ ಸಹಾಯ ಹಾಗೂ ಮಾರುಕಟ್ಟೆ ಅವಕಾಶವನ್ನು ಕಲ್ಪಿಸಲು ರೂ.5 ಕೋಟಿ ನೀಡಲಾಗುವುದು.
- ಬೆಂಗಳೂರು ನಗರದಲ್ಲಿ ಜಗಜೀವನರಾಮ್ ಸ್ಮಾರಕ ಭವನವನ್ನು ನಿರ್ಮಿಸಲು ರೂ. 5 ಕೋಟಿ ಅನುದಾನ ನೀಡಲಾಗುವುದು.

## ಬಂಜಾರ ತಾಂಡಾಗಳ ಅಭಿವೃದ್ಧಿ

- ಬಂಜಾರ ತಾಂಡಾಗಳನ್ನು ಕಂದಾಯಗ್ರಾಮಗಳಾಗಿ ಪರಿವರ್ತಿಸಲು ನಿಯಮಗಳನ್ನು ರೂಪಿಸಲಾಗುವುದು. 200 ಲಂಬಾಣಿ ತಾಂಡಾಗಳಲ್ಲಿ ಸೇವಾಲಾಲ್ ಸಮುದಾಯ ಭವನಗಳನ್ನು ನಿರ್ಮಿಸಲು ರೂ.10 ಲಕ್ಷದಂತೆ ಧನಸಹಾಯ ನೀಡಲಾಗುವುದು. ಗುಲ್ಬರ್ಗ, ಬಿಜಾಪುರ, ಹಾವೇರಿ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಬಂಜಾರ ಭವನಗಳ ನಿರ್ಮಾಣಕ್ಕೆ ತಲಾ ರೂ.2 ಕೋಟಿಯಂತೆ ರೂ.10 ಕೋಟಿ ನೀಡಲಾಗುವುದು.

- ರಾಜ್ಯದಲ್ಲಿ 500 ಬಂಜಾರ ತಾಂಡಾಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ರೂ. 50 ಕೋಟಿ ಒದಗಿಸಲಾಗುವುದು.
- ಜಿಲ್ಲಾ ಮಟ್ಟದ ವಾಲ್ಮೀಕಿ ಭವನಗಳ ನಿರ್ಮಾಣಕ್ಕೆ ಅನುದಾನವನ್ನು ರೂ.1 ಕೋಟಿಯಿಂದ ರೂ.2 ಕೋಟಿಗೆ ಹೆಚ್ಚಿಸಲಾಗುವುದು.
- ಗೊಲ್ಲರ ಹಟ್ಟಿಗಳ ಅಭಿವೃದ್ಧಿಗಾಗಿ ರೂ.5 ಕೋಟಿ ಒದಗಿಸಲಾಗುವುದು.

## ಹಿಂದುಳಿದ ವರ್ಗಗಳ ಕಲ್ಯಾಣ

123. ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ 2009-10ರಲ್ಲಿ ರೂ.50 ಕೋಟಿ ಒದಗಿಸಲಾಗುವುದು. ವಿಶ್ವಕರ್ಮ, ಕ್ಷತ್ರಿಯ, ಉಪ್ಪಾರ, ಸವಿತಾ, ಕುರುಬ, ಮಡಿವಾಳ, ದೇವಾಂಗ, ಬಿಲ್ಲವ, ಮುಂತಾದ ಸಮಾಜಗಳ ಸಂಘಟನೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ರೂ.20 ಕೋಟಿ ಒದಗಿಸಲಾಗುವುದು.

124. ಹಿಂದುಳಿದ ವರ್ಗಗಳ ಸಾಂಪ್ರದಾಯಿಕ ವೃತ್ತಿಗಳಾದ ಕಮ್ಮಾರ, ಕುಂಬಾರ, ಬಡಿಗ, ದೇವಾಂಗ, ಮೂರ್ತೆದಾರ, ಅಕ್ಕಸಾಲಿಗ, ದರ್ಜಿ, ಕ್ಷೌರಿಕ, ಮುಂತಾದುವುಗಳಲ್ಲಿ ನಿರತರಾದ ಒಂದು ಲಕ್ಷ ಕುಟುಂಬಗಳಿಗೆ ದೇವರಾಜ ಅರಸ್ ಅಭಿವೃದ್ಧಿ ನಿಗಮದ ಮೂಲಕ ರೂ.5,000ದವರೆಗೆ ಸಾಲ ಹಾಗೂ ರೂ.5,000 ಸಹಾಯಧನ ಒದಗಿಸಲು 2009-10ನೇ ಸಾಲಿನಲ್ಲಿ ರೂ.50 ಕೋಟಿ ಒದಗಿಸಲಾಗುವುದು.

## ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ

125. ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಗಳಿಗೆ ರೂ.167 ಕೋಟಿ ಒದಗಿಸಲಾಗುವುದು. ಅಲ್ಪಸಂಖ್ಯಾತರಿಗಾಗಿ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ರೂ.35 ಕೋಟಿ ಹಾಗೂ ಶಾದಿ ಮಹಲ್‌ಗಳ ನಿರ್ಮಾಣಕ್ಕಾಗಿ ರೂ.15 ಕೋಟಿ ಒದಗಿಸಲಾಗುವುದು.

126. ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರೂ.5 ಕೋಟಿ ಒದಗಿಸಲಾಗುವುದು.

127. ಹಜ್ ಯಾತ್ರಿಗಳ ಅನುಕೂಲಕ್ಕಾಗಿ ಬೆಂಗಳೂರಿನಲ್ಲಿ ಹಜ್ ಭವನವನ್ನು ನಿರ್ಮಿಸಲು ರೂ.5 ಕೋಟಿ ಒದಗಿಸಲಾಗುವುದು.

128. ಕ್ರೈಸ್ತ, ಬೌದ್ಧ, ಜೈನ, ಸಿಖ್ ಮುಂತಾದ ಅಲ್ಪಸಂಖ್ಯಾತರ ಸಂಸ್ಥೆಗಳ ಚಟುವಟಿಕೆಗಳಿಗಾಗಿ ರೂ.10 ಕೋಟಿ ಅನುದಾನವನ್ನು ನೀಡಲಾಗುವುದು.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

129. ಕರ್ನಾಟಕದಲ್ಲಿ ಈಗಾಗಲೇ ದೇವದಾಸಿ ಪದ್ಧತಿಯನ್ನು ತೊಡೆದುಹಾಕಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ದೇವದಾಸಿ ಪುನರ್‌ವಸತಿ ಕಾರ್ಯವನ್ನು ಅತ್ಯಂತ ಆದ್ಯತೆಯ ಮೇಲೆ ಜಾರಿಗೊಳಿಸುವ ಅವಶ್ಯಕತೆಯಿದೆ. ಮುಖ್ಯವಾಗಿ ಸುಮಾರು 16,000 ದೇವದಾಸಿ ಮಹಿಳೆಯರು ವಸತಿಹೀನರಾಗಿದ್ದು, ಅವರಿಗಾಗಿ 5,000 ಮನೆಗಳನ್ನು ನಿರ್ಮಿಸಲು ರೂ.20 ಕೋಟಿ ಒದಗಿಸಲಾಗುವುದು.

130. ರಾಜ್ಯದಲ್ಲಿ 1.40 ಲಕ್ಷ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದ್ದು, ಸುಮಾರು 1.10 ಲಕ್ಷ ಗುಂಪುಗಳಿಗೆ ಈಗಾಗಲೇ ಬ್ಯಾಂಕ್ ಸಾಲದ ಸೌಲಭ್ಯವನ್ನು ಒದಗಿಸಲಾಗಿದೆ. ಸ್ವಸಹಾಯ ಗುಂಪುಗಳು ತಯಾರಿಸಿದ ಉತ್ತಮ ವಸ್ತುಗಳನ್ನು ಲಾಭದಾಯಕವಾಗಿ ಮಾರಾಟಮಾಡಲು ಪ್ರತಿ ತಾಲ್ಲೂಕಿನಲ್ಲಿ ಮಾರಾಟ ಕೇಂದ್ರಗಳನ್ನು ಒಳಗೊಂಡ ಸ್ತ್ರೀಶಕ್ತಿ ಸಂಕೀರ್ಣಗಳನ್ನು ನಿರ್ಮಿಸಲು ರೂ.10 ಲಕ್ಷ ಅನುದಾನವನ್ನು ನೀಡಲಾಗುವುದು.

131. 50 ವರ್ಷಕ್ಕೂ ಮೇಲ್ಪಟ್ಟ ನಿರಾಶ್ರಿತ ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸಲು ರೂ.400 ಮಾಸಾಶನ ನೀಡಲಾಗುವುದು.

**ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚಿನ ಭತ್ಯೆ**

132. ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಮತ್ತು ಆಯಾಗಳ ಮಾಸಿಕ ಭತ್ಯೆಯಲ್ಲಿ ಕ್ರಮವಾಗಿ ರೂ.250 ಮತ್ತು ರೂ.125 ಹೆಚ್ಚಿಸಲಾಗುವುದು. ಇದಕ್ಕಾಗಿ ರೂ.25 ಕೋಟಿ ಹೆಚ್ಚುವರಿ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು.

133. ರಾಷ್ಟ್ರದಲ್ಲಿ ಹೆಚ್ಚು AIDS ಪ್ರಕರಣಗಳಿರುವ ಆರು ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ಈ ಮಾರಕ ರೋಗದಿಂದ ಪಾಲಕರನ್ನು ಕಳೆದುಕೊಂಡು ತಬ್ಬಲಿಗಳಾದ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದು ಸಮಾಜದ ಜವಾಬ್ದಾರಿ. ಈ ಅನಾಥ ಮಕ್ಕಳ ಪಾಲನೆ ಮತ್ತು ಪೋಷಣೆಗಾಗಿ ವಿಶೇಷ ಅನಾಥಾಲಯಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ಪ್ರಕ್ರಿಯೆಯಲ್ಲಿ ಸಮುದಾಯ ಸಂಘಟನೆಗಳ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಹಯೋಗ ಪಡೆಯಲಾಗುವುದು. ಇದಕ್ಕಾಗಿ ರೂ.1 ಕೋಟಿಯನ್ನು ಒದಗಿಸಲಾಗುವುದು.

## ವಸತಿ ಇಲಾಖೆ

134. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 2009-10ರಲ್ಲಿ 3 ಲಕ್ಷ ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ಮತ್ತು 1 ಲಕ್ಷ ಮನೆಗಳನ್ನು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ಸುಮಾರು ರೂ.1200 ಕೋಟಿ ವೆಚ್ಚ ಮಾಡಲಾಗುವುದು.

135. ಆಶ್ರಯ, ಅಂಬೇಡ್ಕರ್ ಆವಾಸ್ ಮುಂತಾದ ಯೋಜನೆಗಳಲ್ಲಿ ವಸತಿಹೀನರಿಗಾಗಿ ಒಂದು ಲಕ್ಷ ನಿವೇಶನಗಳ ಅಭಿವೃದ್ಧಿಗಾಗಿ ರೂ.100 ಕೋಟಿ ವಿನಿಯೋಗಿಸಲಾಗುವುದು.

136. ನಗರಗಳಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ವಿಶೇಷ ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದು, 2009-10ರಲ್ಲಿ ಈ ಯೋಜನೆಯಡಿ 5000 ಮನೆಗಳನ್ನು ನಿರ್ಮಿಸಲಾಗುವುದು.

## ನಗರಾಭಿವೃದ್ಧಿ

137. ಕರ್ನಾಟಕದ ನಗರ ಪ್ರದೇಶಗಳಲ್ಲಿ ರಾಜ್ಯದ ಸುಮಾರು ಶೇ.35 ರಷ್ಟು ಜನರು ವಾಸಿಸುತ್ತಿದ್ದಾರೆ. ಒಟ್ಟು ಜನ ಸಂಖ್ಯೆಯಲ್ಲಿ ನಗರ ಪ್ರದೇಶಗಳ ಜನಸಂಖ್ಯೆ ಪ್ರಮಾಣವು ಕ್ರಮೇಣ ಹೆಚ್ಚಾಗುತ್ತಿದ್ದು, ನಗರ ಪ್ರದೇಶಗಳ ಅಭಿವೃದ್ಧಿಗೆ ರಾಜ್ಯವು ವಿಶೇಷ ಗಮನ ನೀಡಬೇಕಾಗಿದೆ. 2008-09ನೆಯ ಸಾಲಿನ ಮುಂಗಡ ಪತ್ರದಲ್ಲಿ ರಾಜ್ಯದ 8 ನಗರ ಪಾಲಿಕೆಗಳಿಗೆ ತಲಾ ರೂ.50 ಕೋಟಿ ಅನುದಾನವನ್ನು ಒದಗಿಸಿದ್ದು,

ಪ್ರತಿಯೊಂದು ನಗರಪಾಲಿಕೆಯೂ ಇದರಿಂದ ರೂ.100 ಕೋಟಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

### ಸಣ್ಣ ನಗರಗಳ ಅಭಿವೃದ್ಧಿಗೆ ಅನುದಾನ

138. ನಗರಪಾಲಿಕೆಗಳ ಹೊರತಾಗಿ ಇತರ ಜಿಲ್ಲಾ ಕೇಂದ್ರಗಳು ಹಾಗೂ ನಗರಪಾಲಿಕೆಗಳಿರುವ ಇತರ ನಗರಗಳ ಅಭಿವೃದ್ಧಿಗೂ ಸಹ ತಲಾ ರೂ. 15 ಕೋಟಿಯಂತೆ ವಿಶೇಷ ಅನುದಾನವನ್ನು ಒದಗಿಸಲು ನಿರ್ಧರಿಸಲಾಗಿದೆ. ಇದರಿಂದ ರೂ.30 ಕೋಟಿಯ ಅಭಿವೃದ್ಧಿ ಕಾರ್ಯಗಳನ್ನು ಈ ನಗರಗಳಲ್ಲಿ 2 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಬಹುದಾಗಿರುತ್ತದೆ. ತಾಲ್ಲೂಕು ಕೇಂದ್ರಗಳು ಮತ್ತು ಪುರಸಭೆಗಳಿರುವ ಇತರ ಸಣ್ಣ ಪಟ್ಟಣಗಳಿಗೆ ಪ್ರತಿ ಪಟ್ಟಣಕ್ಕೆ ರೂ.5 ಕೋಟಿಯಂತೆ ಮತ್ತು ಪಟ್ಟಣ ಪಂಚಾಯತಿಗಳಿರುವ ಇತರ ನಗರ ಪ್ರದೇಶಗಳಿಗೆ ರೂ.2 ಕೋಟಿಯಂತೆ ವಿಶೇಷ ಅನುದಾನವನ್ನು ನೀಡಿ ಈ ನಗರ ಪ್ರದೇಶಗಳ ಅಭಿವೃದ್ಧಿಗೆ ಕೆಯುಐಡಿಎಫ್‌ಸಿ (KUIDFC) ಮೂಲಕ ಬಲವಾದ ಚಾಲನೆ ನೀಡಲಾಗುವುದು.

### ಬೆಂಗಳೂರು ಅಭಿವೃದ್ಧಿಗೆ ಬೃಹತ್ ಯೋಜನೆ

139. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 2008-09ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂ.700 ಕೋಟಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.300 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. 2009-10ರಲ್ಲಿ ಈ ಸಂಸ್ಥೆಗಳು ಕ್ರಮವಾಗಿ ರೂ.800 ಕೋಟಿ ಮತ್ತು ರೂ.500 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿ ಪ್ರಮುಖ ರಸ್ತೆಗಳನ್ನು ಉತ್ತಮ ದರ್ಜೆಗೇರಿಸಿ ಖಾಸಗಿ ಸಹಭಾಗಿತ್ವದಿಂದ ನಿರ್ವಹಣೆ ಮಾಡಲು ರೂ.2000 ಕೋಟಿಯ ವಿಶೇಷ ಯೋಜನೆಯನ್ನು ಅನುಷ್ಠಾನ ಮಾಡಲು ನಿರ್ಧರಿಸಲಾಗಿದೆ.

140. ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿನ ಸರಬರಾಜನ್ನು ಹೆಚ್ಚಿಸಲು ರೂ.3,384 ಕೋಟಿ ವೆಚ್ಚದಲ್ಲಿ ಜಪಾನ್ ಬ್ಯಾಂಕ್ ನೆರವಿನಿಂದ ಕಾವೇರಿ ನೀರು ಸರಬರಾಜು ಯೋಜನೆ (4ನೇ ಭಾಗ 2ನೆಯ ಹಂತ) ಇದರ ನಿರ್ಮಾಣವನ್ನು

ಪ್ರಾರಂಭಿಸಲಾಗಿದ್ದು, 2009-10ರಲ್ಲಿ ಇದಕ್ಕಾಗಿ ರೂ.300 ಕೋಟಿಯನ್ನು ವಿನಿಯೋಗಿಸಲಾಗುವುದು. ವಿಶ್ವಬ್ಯಾಂಕ್ ನೆರವಿನಿಂದ ಕೈಗೆತ್ತಿಕೊಂಡಿರುವ ಬೆಂಗಳೂರಿನ ಒಳಚರಂಡಿ ಯೋಜನೆಗಳ ಕಾಮಗಾರಿಗಳನ್ನು ಪ್ರಾರಂಭಿಸಿ, 2010ರ ವೇಳೆಗೆ ಪೂರ್ಣಗೊಳಿಸಲಾಗುವುದು. ಈ ಯೋಜನೆಗಾಗಿ 2009-10ರಲ್ಲಿ ರೂ.600 ಕೋಟಿ ವಿನಿಯೋಗಿಸಲಾಗುವುದು. ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಶುದ್ಧೀಕರಿಸಿದ ಒಳಚರಂಡಿ ನೀರಿನ ಸರಬರಾಜನ್ನು ಕಲ್ಪಿಸಲು ರೂ.100 ಕೋಟಿ ವೆಚ್ಚ ಮಾಡಲಾಗುವುದು.

## ಮೆಟ್ರೊ ಯೋಜನೆಯ ವಿಸ್ತರಣೆ

141. ಪ್ರಥಮ ಹಂತದ ಬೆಂಗಳೂರು ಮೆಟ್ರೊ ಜಾಲದ ಉತ್ತರ – ದಕ್ಷಿಣ ಮಾರ್ಗವನ್ನು ಉತ್ತರದಲ್ಲಿ ಹೆಸರಘಟ್ಟ ಅಡ್ಡರಸ್ತೆಯವರೆಗೆ ಮತ್ತು ದಕ್ಷಿಣದಲ್ಲಿ ಪುಟ್ಟೇನಹಳ್ಳಿ ಅಡ್ಡರಸ್ತೆಯವರೆಗೆ ವಿಸ್ತರಿಸಲು ಇತ್ತೀಚೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿರ್ಧರಿಸಿದ್ದು ಇದಕ್ಕಾಗಿ ರೂ.1,763 ಕೋಟಿ ಹೆಚ್ಚಿನ ವೆಚ್ಚವನ್ನು ಒದಗಿಸಬೇಕಾಗಿದೆ. ಬೆಂಗಳೂರು ಮೆಟ್ರೊ ಸಂಚಾರದ ಮೊದಲ ಮಾರ್ಗವು 2010ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದ್ದು ರಾಜ್ಯ ಸರ್ಕಾರವು 2009-10ರಲ್ಲಿ ಮೆಟ್ರೊ ಸಂಸ್ಥೆಗೆ ತನ್ನ ಪಾಲಿನ ಬಂಡವಾಳವಾಗಿ ರೂ.600 ಕೋಟಿಯನ್ನು ಒದಗಿಸಲಿದೆ.

142. ಮೆಟ್ರೊ ಸಂಚಾರಕ್ಕೆ ಪೂರಕವಾಗಿ ಬೆಂಗಳೂರಿನ ಬಸ್ ಸಂಚಾರವನ್ನು ಸಹ ಆಧುನೀಕರಣಗೊಳಿಸಲು ಉದ್ದೇಶಿಸಿದೆ. ಇದಕ್ಕಾಗಿ 2009-10ರಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವತಿಯಿಂದ ಹೆಚ್ಚುವರಿಯಾಗಿ ಕನಿಷ್ಠ 1,000 ಉತ್ತಮ ದರ್ಜೆಯ ನಗರ ಸಾರಿಗೆ ಬಸ್‌ಗಳ ಸಂಚಾರವನ್ನು ಪ್ರಾರಂಭಿಸಲು ರೂ.500 ಕೋಟಿ ವೆಚ್ಚ ಮಾಡಲಾಗುವುದು.

143. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಈಗಾಗಲೇ ಹೊರವಲಯದ ವರ್ತುಲ ರಸ್ತೆಯ ನೀಲನಕ್ಷೆಯನ್ನು ಸಿದ್ದಪಡಿಸಲಾಗಿದ್ದು 10 ಪಥಗಳ ಈ ಜಂಕ್ಷನ್‌ರಹಿತ ರಸ್ತೆಯ ನಿರ್ಮಾಣವನ್ನು 2009-10ರಲ್ಲಿ ಖಾಸಗಿ ಸಹಭಾಗಿತ್ವದೊಡನೆ ಪ್ರಾರಂಭಿಸಲಾಗುವುದು. ಈ ಯೋಜನೆಗಾಗಿ ಭೂಸ್ವಾಧೀನ ಮುಂತಾದ ಪೂರ್ವಭಾವಿ

ಸಿದ್ಧತೆಗಳಿಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರೂ.700 ಕೋಟಿ ವೆಚ್ಚ ಮಾಡುವುದು.

144. 2009-10ರ ಸಾಲಿನಲ್ಲಿ ಬೆಳಗಾವಿ ಮತ್ತು ಬಳ್ಳಾರಿ ನಗರಗಳಿಗೆ ಖಾಸಗಿ ಸಹಭಾಗಿತ್ವದಲ್ಲಿ ವರ್ತುಲ ರಸ್ತೆ ಸೌಲಭ್ಯವನ್ನು ಒದಗಿಸಲಾಗುವುದು. ಬೆಳಗಾವಿ ನಗರದ ಒಳಚರಂಡಿ ವ್ಯವಸ್ಥೆಯನ್ನು ನವೀಕರಿಸಲು ರೂ.120 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

**ನಗರಗಳಿಗೆ ನೀರು ಸರಬರಾಜು : ಕನ್ನಡ ಗಂಗಾ ಯೋಜನೆ**

145. 2009-10ನೇ ಸಾಲಿನಲ್ಲಿ ಬಿಜಾಪುರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ನದಿ ಅಥವಾ ಜಲಾಶಯಗಳಿಂದ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡುವ ಪ್ರಾದೇಶಿಕ ಯೋಜನೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಮಾಡಲು ಉದ್ದೇಶಿಸಿದೆ. ಇದಕ್ಕಾಗಿ ರಾಜ್ಯ ಮಟ್ಟದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ರೂ.6 ಕೋಟಿ ಅನುದಾನವನ್ನು ಒದಗಿಸಲಾಗುವುದು.

146. ಜಿಲ್ಲಾ ಕೇಂದ್ರಗಳ ಸಮೀಪದಲ್ಲಿ ಸೂಕ್ತ ಕೆರೆ ಅಥವಾ ಜಲಾಶಯಗಳನ್ನು ಸುಂದರೀಕರಣಗೊಳಿಸಿ ಸಾರ್ವಜನಿಕ ವಿಹಾರ ಹಾಗೂ ಮನರಂಜನೆಗಾಗಿ ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗುವುದು. ಇದಕ್ಕಾಗಿ ರೂ.25 ಕೋಟಿ ಅನುದಾನವನ್ನು ಒದಗಿಸಲಾಗುವುದು.

**ಮೂಲಭೂತ ಸೌಕರ್ಯಗಳ ಅಭಿವೃದ್ಧಿ**

147. ರಾಜ್ಯದ ಅಭಿವೃದ್ಧಿಯ ವೇಗವನ್ನು ತೀವ್ರಗೊಳಿಸಲು ಸರ್ಕಾರವು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಬೇಕಾಗಿದೆ. ಆದ್ದರಿಂದ 2009-10ನೆಯ ಸಾಲಿನಲ್ಲಿ ಬೃಹತ್ ಪ್ರಮಾಣದಲ್ಲಿ ರಾಜ್ಯದಾದ್ಯಂತ ಉತ್ತಮ ರಸ್ತೆಗಳ ನಿರ್ಮಾಣ, ರೈಲ್ವೆ ಸಂಪರ್ಕಯೋಜನೆಗಳ ಚಾಲನೆ, ವಿಮಾನ ನಿಲ್ದಾಣಗಳ ನಿರ್ಮಾಣ ಮತ್ತು ಬಂದರುಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಈಗಾಗಲೇ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಅತ್ಯಂತ ಮಹತ್ವಾಕಾಂಕ್ಷೆಯ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲು ನಿರ್ಧರಿಸಲಾಗಿದ್ದು ಒಟ್ಟು 66,000 ಕಿ.ಮೀ. ಉದ್ದದ ರಸ್ತೆಗಳನ್ನು ಈ ಯೋಜನೆಯಲ್ಲಿ

ಸೇರಿಸಲಾಗಿದೆ. ಮೊದಲನೆಯ ಹಂತದಲ್ಲಿ 2009-10ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ಮತ್ತು ಮುಖ್ಯ ರಸ್ತೆಗಳ 10,000 ಕಿ.ಮೀ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 12,600 ಕಿ.ಮೀ. ರಸ್ತೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ರಸ್ತೆ ನಿಧಿಯನ್ನು ಸ್ಥಾಪಿಸಲು ಕೆ.ಆರ್.ಡಿ.ಸಿ.ಎಲ್. ಸಂಸ್ಥೆಗೆ ರೂ.500 ಕೋಟಿ ಬಂಡವಾಳ ಅನುದಾನವನ್ನು ನೀಡಲಾಗುತ್ತಿದೆ. ಈ ಯೋಜನೆಯನ್ನು ಟೋಲ್ ಆಧಾರದ ಮೇಲೆ ಕಾರ್ಯಗತಗೊಳಿಸಲಾಗುವುದು.

148. ವಿಶ್ವ ಬ್ಯಾಂಕ್ ನೆರವಿನಿಂದ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2 ಇದನ್ನು ಸುಮಾರು ರೂ.1,200 ಕೋಟಿ ವೆಚ್ಚದಲ್ಲಿ 585 ಕಿ.ಮೀ. ಉದ್ದದ ಹೆದ್ದಾರಿಗಳ ಅಭಿವೃದ್ಧಿಗಾಗಿ ಅನುಷ್ಠಾನ ಮಾಡಲು ಸಿದ್ಧತೆಗಳನ್ನು ಮಾಡಲಾಗಿದೆ. 2009-10ರಲ್ಲಿ ಇದಕ್ಕಾಗಿ ರೂ.400 ಕೋಟಿ ಅನುದಾನವನ್ನು ಒದಗಿಸಲಾಗುವುದು.

149. 2009-10ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಮುಂದುವರೆದ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ರೂ.400.00ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಇದಲ್ಲದೆ, ನಬಾರ್ಡ್ ನೆರವಿನಿಂದ 2100 ಕಿ.ಮಿ. ಉದ್ದದ ರಸ್ತೆ ಕಾಮಗಾರಿಗಳನ್ನು ಹಾಗೂ 32 ಸೇತುವೆ ಕಾಮಗಾರಿಗಳನ್ನು ನಿರ್ಮಿಸಲು ರೂ.258 ಕೋಟಿ ಒದಗಿಸಲಾಗುವುದು.

150. ಪ್ರಮುಖ ಪಟ್ಟಣಗಳಿಗೆ ಹಾಗೂ ನಗರಗಳಿಗೆ ವರ್ತುಲ ರಸ್ತೆ ನಿರ್ಮಾಣವನ್ನು 2009-10ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

## ರೈಲ್ವೆ ಮಾರ್ಗಗಳ ವಿಸ್ತರಣೆ

151. ನೂತನ ರೈಲ್ವೆ ಯೋಜನೆಗಳಾದ ಧಾರವಾಡ-ಬೆಳಗಾವಿ ನೇರ ಸಂಪರ್ಕ ಕುಡಚಿ-ಬಾಗಲಕೋಟೆ, ಗದಗ-ಹಾವೇರಿ, ಆಲಮಟ್ಟಿ-ಕೊಪ್ಪಳ ಯೋಜನೆಗಳಿಗೆ ಚಾಲನೆ ನೀಡಲು ರಾಜ್ಯ ಸರ್ಕಾರದಿಂದ ಶೇ. 50% ಪಾಲು ಹಣ ಒದಗಿಸಲಾಗುವುದು.

152. ಬೆಂಗಳೂರು ನಗರದಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅತಿ ವೇಗದ ರೈಲಿನ ಸಂಪರ್ಕವನ್ನು ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲು ಕೆ.ಎಸ್.ಐ.ಐ.ಡಿ.ಸಿ. ಮೂಲಕ ಸೂಕ್ತ ಕ್ರಮ.

## ಬಂದರುಗಳ ಅಭಿವೃದ್ಧಿ

153. ರಾಜ್ಯದಲ್ಲಿ ಬಂದರುಗಳನ್ನು ಅಭಿವೃದ್ಧಿಪಡಿಸಲು 'ಕರ್ನಾಟಕ ಮ್ಯಾರಿಟೈಮ್ ಬೋರ್ಡ್' ಸಂಸ್ಥೆಯ ಸ್ಥಾಪನೆಗೆ ಸ್ಥಾಪಿಸಲು ಅಗತ್ಯ ಕಾನೂನಿನ ಚೌಕಟ್ಟನ್ನು ನಿರ್ಮಿಸಲಾಗುತ್ತಿದೆ. ಮೇಲ್ಕಂಡ ಸಂಸ್ಥೆಯ ಮೂಲಕ ರಾಜ್ಯದ ಪಶ್ಚಿಮ ಕರಾವಳಿಯಲ್ಲಿ ಕಾರವಾರ, ತದಡಿ, ಹೊನ್ನಾವರ, ಮಲ್ಪೆ, ಹಳೆ ಮಂಗಳೂರು ಮುಂತಾದ ಕಡೆಗಳಲ್ಲಿ ಉತ್ತಮ ಬಂದರುಗಳ ನಿರ್ಮಾಣವನ್ನು ಖಾಸಗಿ ಸಹಭಾಗಿತ್ವದೊಡನೆ ಕೈಗೊಳ್ಳಲು ರೂ.100 ಕೋಟಿ ಅನುದಾನವನ್ನು ಒದಗಿಸಲಾಗುವುದು.

154. ಕಾರವಾರ ಬಂದರಿನಲ್ಲಿ ಹೂಳೆತ್ತುವ ಕಾಮಗಾರಿಯ ಮೂಲಕ ಹೆಚ್ಚಿನ ನೌಕಾ ಸಂಚಾರಕ್ಕೆ ಅನುವು ಮಾಡಲು ರೂ.10 ಕೋಟಿ ಒದಗಿಸಲಾಗುವುದು.

155. 2009-10ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ಬಂದರುಗಳ ಅಭಿವೃದ್ಧಿ ಮತ್ತು ಸಮುದ್ರಕೊರೆತ ಪ್ರತಿಬಂಧಕ ಕಾಮಗಾರಿಗಳನ್ನು ಕೈಗೊಳ್ಳಲು ರೂ.20 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

## ವಿಮಾನ ನಿಲ್ದಾಣಗಳು

156. ಗುಲ್ಬರ್ಗ, ಬಿಜಾಪುರ, ಶಿವಮೊಗ್ಗ, ಹುಬ್ಬಳ್ಳಿ, ಬಳ್ಳಾರಿ ಹಾಗೂ ಮೈಸೂರು ನಗರಗಳಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ ಹಾಗೂ ಅಭಿವೃದ್ಧಿಗಾಗಿ ರೂ.100 ಕೋಟಿ ನೀಡಲಾಗುವುದು.

## ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ

157. ರಾಜ್ಯದ ಔದ್ಯಮೀಕರಣವನ್ನು ಉತ್ತೇಜಿಸಲು ಕೈಗಾರಿಕೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು 2009-10ನೇ ಸಾಲಿನ ಆದ್ಯತೆಗಳಲ್ಲಿ ಒಂದಾಗಿದೆ. ನೂತನ ಕೈಗಾರಿಕೆಗಳ ಸ್ಥಾಪನೆಗಾಗಿ ಅಗತ್ಯವಿರುವ ಕೈಗಾರಿಕಾ ಜಮೀನು, ನೀರು ಸರಬರಾಜು ಹಾಗು ವಿದ್ಯುತ್ ಸೌಕರ್ಯಗಳನ್ನು ಒಳಗೊಂಡ ಕೈಗಾರಿಕಾ

ವಸಾಹತುಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ವತಿಯಿಂದ ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ 1000 ದಿಂದ 2000 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಅಗತ್ಯ ಸೌಕರ್ಯಗಳೊಡನೆ ಅಭಿವೃದ್ಧಿಪಡಿಸಲು ಮುಂದಿನ ಸಾಲಿನಲ್ಲಿ ರೂ.1000 ಕೋಟಿ ವಿನಿಯೋಗಿಸಲಾಗುವುದು. ಇದರಿಂದ ಸಹಸ್ರಾರು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗೆ ಸಹಾಯವಾಗುವುದು. ಮೇಲ್ಕಂಡಂತೆ ಕೈಗಾರಿಕಾ ವಸಾಹತುಗಳ ಸ್ಥಾಪನೆಯಿಂದ ವಿದೇಶಿ ಬಂಡವಾಳವನ್ನು ರಾಜ್ಯದ ಕೈಗಾರಿಕಾ ಕ್ಷೇತ್ರಕ್ಕೆ ಆಕರ್ಷಿಸಲು ಸಾಧ್ಯವಾಗುವುದು.

158. ಸರ್ಕಾರವು ನೂತನ ಗಣಿಗಾರಿಕೆಯ ನೀತಿಯನ್ನು ಅನುಮೋದಿಸಿದ್ದು ಇದರ ಅಡಿಯಲ್ಲಿ ರಾಜ್ಯದ ಖನಿಜ ಸಂಪತ್ತನ್ನು ರಾಜ್ಯದಲ್ಲಿಯೇ ಬಳಸುವ ಕೈಗಾರಿಕೆಗಳ ಉಪಯೋಗಕ್ಕಾಗಿ ಒದಗಿಸಬೇಕೆಂಬ ತತ್ವವನ್ನು ಅಳವಡಿಸಿಕೊಂಡಿದೆ. ಇದರಿಂದ ರಾಜ್ಯದ ಖನಿಜದ ಅದಿರು ಕೇವಲ ರಫ್ತು ಮಾರಾಟಕ್ಕಾಗಿ ಸೂರೆಗೊಳ್ಳುವುದು ತಪ್ಪುತ್ತದೆ. ರಾಜ್ಯದಲ್ಲಿ ಹೇರಳವಾಗಿ ದೊರೆಯುವ ಕಬ್ಬಿಣದ ಅದಿರಿನ ಬಳಕೆಯಿಂದ ಬೃಹತ್ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು ಸರ್ಕಾರದ ಉದ್ದೇಶವಾಗಿದೆ.

### ಸಿದ್ಧ ಉಡುಪು ತಯಾರಿಕೆ ಉದ್ಯಮಕ್ಕೆ ಪ್ರೋತ್ಸಾಹ

159. ಬೆಂಗಳೂರು ನಗರ ಹಾಗೂ ಹೊರವಲಯದಲ್ಲಿ ಸುಮಾರು 1500 ಸಿದ್ಧ ಉಡುಪು ತಯಾರಿಕಾ ಕೇಂದ್ರಗಳು ಕಾರ್ಯನಿರತವಾಗಿದ್ದು ಅವುಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಯುವ ಜನರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಲು ವಿವಿಧ ಭಾಗಗಳಲ್ಲಿ ಇಂತಹ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲಗಳನ್ನು ಕಲ್ಪಿಸಬೇಕಾಗಿದೆ. ಇದಕ್ಕಾಗಿ 2009-10ರಲ್ಲಿ ಖಾಸಗಿ ಸಹಭಾಗಿತ್ವದೊಡನೆ ಹತ್ತು ಸಿದ್ಧ ಉಡುಪುಗಳ ಸಮುಚ್ಚಯಗಳನ್ನು (Apparel Clusters) ಗುಲ್ಬರ್ಗ, ಬಳ್ಳಾರಿ, ಹುಬ್ಬಳ್ಳಿ, ಬೆಳಗಾವಿ, ಬಾಗಲಕೋಟೆ, ಶಿವಮೊಗ್ಗ, ದಾವಣಗೆರೆ, ಮೈಸೂರು, ರಾಮನಗರ ಮತ್ತು ಚಿಕ್ಕಬಳ್ಳಾಪುರದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರತಿ ಸಮುಚ್ಚಯದಲ್ಲಿ ಅಗತ್ಯ ಸಾಮಾನ್ಯ ಸೌಲಭ್ಯಗಳನ್ನು ಒದಗಿಸಲು ರೂ.40 ರಿಂದ 50 ಕೋಟಿ

ತೊಡಗಿಸಬೇಕಾಗಿದ್ದು ಕರ್ನಾಟಕ ಸುವರ್ಣ ವಸ್ತ್ರ ನೀತಿ ಅಡಿಯಲ್ಲಿ ಶೇ.20 ರಷ್ಟು ಬಂಡವಾಳವನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು. ಇದಕ್ಕಾಗಿ ರೂ.40 ಕೋಟಿ ಒದಗಿಸಲಾಗುವುದು.

**ನೇಕಾರರಿಗೆ ನೆರವು**

160. ಕೈಮಗ್ಗದ ನೇಕಾರರಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಲು ಈಗಾಗಲೇ ಬೆಳಗಾವಿ ಹಾಗೂ ರಬಕವಿ-ಬನಹಟ್ಟಿಗಳಲ್ಲಿ ಸೈಜಿಂಗ್ (ನೂಲು ಸಂಸ್ಕರಣ) ಘಟಕಗಳನ್ನು ಸ್ಥಾಪಿಸಲು ರೂ.10 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಬಡ ನೇಕಾರರಿಗೆ ತಮ್ಮ ವೃತ್ತಿಯನ್ನು ಸೂಕ್ತ ಪರಿಸರದಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ 5000 ಮಗ್ಗದ ಕೋಣೆಯುಳ್ಳ ಮನೆಗಳನ್ನು ತಲಾ ರೂ.60000 ವೆಚ್ಚದಲ್ಲಿ ನಿರ್ಮಿಸಲಾಗುವುದು. ಇದಕ್ಕಾಗಿ ರೂ.30 ಕೋಟಿ ಅನುದಾನವನ್ನು ನೀಡಲಾಗುವುದು. ನೇಕಾರರಿಗೆ ಶೇ.3ರ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುವ ಯೋಜನೆಯನ್ನು ಮುಂದುವರೆಸಲಾಗುವುದು.

161. ಜಾಗತಿಕ ಆರ್ಥಿಕ ಹಿನ್ನಲೆಯಲ್ಲಿ ಸಂಕಷ್ಟದಲ್ಲಿರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ಪರಿಹಾರ ನೀಡಲು, ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಐ.ಐ.ಡಿ.ಸಿ ಯಿಂದ ಕೈಗಾರಿಕೋದ್ಯಮಿಗಳು ಪಡೆದ ಸಾಲಗಳ ಮರುಪಾವತಿಗೆ ಒಂದಾವರ್ತಿ ತೀರುವಳಿ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುವುದು.

162. ಕೈಗಾರಿಕೆಗಳ ಸಂಕಷ್ಟಗಳನ್ನು ಅರಿತು ಅವುಗಳಿಗೆ ಸೂಕ್ತ ಪರಿಹಾರ ಒದಗಿಸಲು ಹಾಗೂ ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ಹಲವಾರು ಕುಂದು ಕೊರತೆ ಹಾಗೂ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗುವಂತೆ ಕೈಗಾರಿಕಾ ಅದಾಲತ್‌ಗಳನ್ನು ನಡೆಸಲಾಗುವುದು.

**ಮಂಡ್ಯ ಸಕ್ಕರೆ ಕಾರ್ಖಾನೆಗೆ ಹೆಚ್ಚಿನ ಬಂಡವಾಳ**

163. ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರ ಆರ್ಥಿಕ ಸುಭದ್ರತೆಗೆ ಆಧಾರ ಸ್ತಂಭವಾಗಿರುವ ಮೈಸೂರು ಸಕ್ಕರೆ ಕಂಪನಿ ಕಾರ್ಖಾನೆಯ ಪುನರುಜ್ಜೀವನಕ್ಕಾಗಿ ರೂ.50 ಕೋಟಿ ಬಂಡವಾಳವನ್ನು ನೀಡಲಾಗುವುದು.

## ಉತ್ತರ ಕರ್ನಾಟಕದ ಕೈಗಾರಿಕಾಭಿವೃದ್ಧಿಗಾಗಿ ಪೂರಕ ಯೋಜನೆಗಳು

164. ಉತ್ತರ ಕರ್ನಾಟಕದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಕೆಳಕಂಡ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುವುದು;

- ಕೊಪ್ಪಳ, ಬಳ್ಳಾರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಒಟ್ಟು 10000 ಎಕರೆ ಪ್ರದೇಶದಲ್ಲಿ ಉಕ್ಕು ವಲಯ ಸ್ಥಾಪಿಸಲಾಗುವುದು.
- ಬೆಳಗಾವಿಯ ಮಾಚೆ ಗ್ರಾಮದಲ್ಲಿ ಸುಮಾರು 500 ಎಕರೆ ಭೂ ಪ್ರದೇಶದಲ್ಲಿ ಫೌಂಡ್ರಿ ಪಾರ್ಕ್‌ನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖಾಂತರ ಸ್ಥಾಪಿಸುವುದು.
- ಹಾವೇರಿ ಜಿಲ್ಲೆಯ ಬ್ಯಾಡಗಿಯಲ್ಲಿ ಫುಡ್ ಕರ್ನಾಟಕ ಲಿಮಿಟೆಡ್, ಬೆಂಗಳೂರು ಮುಖಾಂತರ 120 ಎಕರೆ ವಿಸ್ತೀರ್ಣದಲ್ಲಿ ಸ್ಪೈಸ್ ಪಾರ್ಕ್‌ನ್ನು ಪ್ರಾರಂಭಿಸುವುದು.
- ಬೀದರ್ ಜಿಲ್ಲೆ ಬಸವ ಕಲ್ಯಾಣದ ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿ ಸುಮಾರು 20 ರಿಂದ 25 ಎಕರೆ ವಿಸ್ತೀರ್ಣದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖಾಂತರ ಆಟೋ ಪಾರ್ಕ್ ಸ್ಥಾಪಿಸುವುದು.
- ಬೆಳಗಾವಿಯ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಮಾಂಗೂರು ಗ್ರಾಮದಲ್ಲಿನ ಸುಮಾರು 50 ಎಕರೆ ಪ್ರದೇಶದಲ್ಲಿ ಕೆ.ಎಸ್.ಎಸ್.ಐ.ಡಿ.ಸಿ ಮುಖಾಂತರ ಬೆಳ್ಳಿ ಆಭರಣ ತಯಾರಕ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು.

## ವಿದ್ಯುತ್ ಉತ್ಪನ್ನ ಹಾಗೂ ವಿತರಣೆ

165. 2008-09ನೇ ಸಾಲಿನಲ್ಲಿ ರಾಜ್ಯದಲ್ಲಿ ಅಸಮರ್ಪಕ ಮಳೆಯಿಂದಾಗಿ ಜಲವಿದ್ಯುತ್ ಉತ್ಪಾದನೆಗೆ ಅಗತ್ಯವಾದ ಜಲಾಶಯಗಳ ನೀರಿನ ಸಂಗ್ರಹದಲ್ಲಿ ತೀವ್ರವಾದ ಕೊರತೆ ಉದ್ಭವಿಸಿ ಇದರಿಂದ ಜಲವಿದ್ಯುತ್ ಉತ್ಪಾದನೆಯಲ್ಲಿ ಸುಮಾರು 2,000 ದಶಲಕ್ಷ ಯೂನಿಟ್‌ಗಳಷ್ಟು ಕೊರತೆ ತಲೆದೋರಿದೆ. ಈ ಕೊರತೆಯನ್ನು

ತುಂಬಲು ರಾಜ್ಯವು ಉಷ್ಣವಿದ್ಯುತ್ ಸ್ಥಾವರಗಳಲ್ಲಿ ಉತ್ಪನ್ನವನ್ನು ಹೆಚ್ಚಿಸಿರುವುದಲ್ಲದೆ ಹೊರರಾಜ್ಯಗಳಿಂದ ಮತ್ತು ರಾಜ್ಯದಲ್ಲಿನ ಖಾಸಗಿ ವಿದ್ಯುತ್ ಉತ್ಪಾದಕರಿಂದ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಖರೀದಿಸಲಾಗಿರುತ್ತದೆ.

166. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಹ ಸರ್ಕಾರವು ತನ್ನ ಭರವಸೆಯಂತೆ 17 ಲಕ್ಷ ರೈತಕುಟುಂಬಗಳ 10 ಅಶ್ವಶಕ್ತಿಗಿಂತ ಕಡಿಮೆ ಸಾಮರ್ಥ್ಯದ ಪಂಪ್‌ಸೆಟ್‌ಗಳಿಗೆ ಉಚಿತವಾದ ವಿದ್ಯುತ್ ಒದಗಿಸಿದೆ. ಇದಕ್ಕಾಗಿ ಸರ್ಕಾರವು ರೂ.500 ಕೋಟಿ ಹೆಚ್ಚುವರಿ ವೆಚ್ಚವನ್ನು ಭರಿಸಿದೆ.

## ವಿದ್ಯುತ್ ಉತ್ಪಾದನೆಗೆ ವಿವಿಧ ಯೋಜನೆಗಳು

167. ಇದೇ ಸಂದರ್ಭದಲ್ಲಿ ರಾಜ್ಯದ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಬಳ್ಳಾರಿಯಲ್ಲಿ 500 ಮೆಗಾವ್ಯಾಟ್ ಸಾಮರ್ಥ್ಯದ ನೂತನ ಉಷ್ಣವಿದ್ಯುತ್ ಸ್ಥಾವರವನ್ನು ಕಾರ್ಯಾರಂಭಗೊಳಿಸಿದೆ.
- ವಾರಾಹಿಯಲ್ಲಿ 230 ಮೆಗಾವ್ಯಾಟ್ ಜಲವಿದ್ಯುತ್ ಸ್ಥಾವರವನ್ನು ಕಾರ್ಯಾರಂಭಗೊಳಿಸಿದೆ.
- ನವೀಕರಿಸಬಹುದಾದ ಇಂಧನ ಮೂಲಗಳಿಂದ 500 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರಗಳಿಗೆ ಚಾಲನೆ ನೀಡಿದೆ.
- ಛತ್ತೀಸ್‌ಗಡ್ ರಾಜ್ಯದಲ್ಲಿ 2,000 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.
- ಬಿಜಾಪುರದ ಜಿಲ್ಲೆಯ ಕೂಡಗಿಯಲ್ಲಿ 4,000 ಮೆಗಾವ್ಯಾಟ್ ಸಾಮರ್ಥ್ಯದ ಬೃಹತ್ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಎನ್.ಟಿ.ಪಿ.ಸಿ. ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡಿದೆ.
- ರಾಯಚೂರು ಜಿಲ್ಲೆಯ ಯಡಲಾಪುರ ಮತ್ತು ಯರಮರಸ್‌ನಲ್ಲಿ 2400 ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಬಿ.ಹೆಚ್.ಇ.ಎಲ್. ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡಿದೆ.

- ಉಡುಪಿಯಲ್ಲಿ 1015 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗಾಗಿ ಮತ್ತು ಗುಲ್ಬರ್ಗ ಹಾಗೂ ಹಿಡಕಲ್‌ನಲ್ಲಿ ನೂತನ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ.

**ವಿದ್ಯುತ್ ನಿಗಮಕ್ಕೆ ಬಂಡವಾಳ**

168. ಮೇಲ್ಕಂಡ ಯೋಜನೆಗಳ ಪೈಕಿ ಸಾರ್ವಜನಿಕ ಹಾಗೂ ಜಂಟಿ ವಲಯದ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ವಿದ್ಯುತ್ ನಿಗಮಕ್ಕೆ ರೂ.500 ಕೋಟಿ ಬಂಡವಾಳವನ್ನು ಸರ್ಕಾರದಿಂದ ನೀಡಲಾಗುತ್ತಿದೆ. ಮೇಲ್ಕಂಡ ಯೋಜನೆಗಳ ಫಲವಾಗಿ 2013ರ ವೇಳೆಗೆ ನಮ್ಮ ರಾಜ್ಯದಲ್ಲಿ ಹೊಸದಾಗಿ 5000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೃಷ್ಟಿಸುವ ಭರವಸೆಯನ್ನು ಸರ್ಕಾರವು ಈಡೇರಿಸಲು ಸಾಧ್ಯವಾಗುವುದು.

**ನಿರಂತರ ಜ್ಯೋತಿ**

169. ವಿದ್ಯುತ್ ವಿತರಣೆಯಲ್ಲಿನ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ನಿರಂತರ ಜ್ಯೋತಿ ಯೋಜನೆಯನ್ನು ನವೆಂಬರ್ 2008ರಲ್ಲಿ ಮಾಲೂರು ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ 24 ಗಂಟೆಗಳ ಸತತ ಸಿಂಗಲ್ ಫೇಸ್ ಪೂರೈಕೆ ಹಾಗೂ 8 ಗಂಟೆಗಳ ಪೂರ್ಣ ವಿದ್ಯುತ್ ಪೂರೈಕೆಗೆ ವ್ಯವಸ್ಥೆ ಮಾಡಲಾಗುವುದು. ಈ ಯೋಜನೆಯನ್ನು ಇತರ ಹಿಂದುಳಿದ ತಾಲ್ಲೂಕುಗಳಿಗೆ ಹಂತ ಹಂತವಾಗಿ ವಿಸ್ತರಿಸಲಾಗುವುದು.

170. ರಾಜ್ಯದಲ್ಲಿನ ಎಲ್ಲಾ ಗುಡಿಸಲು ವಾಸಿಗಳಿಗೆ ಹಾಗೂ ತಾಂಡಾಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು. ಇದರಿಂದ ಸುಮಾರು 2.75 ಲಕ್ಷ ಬಡಕುಟುಂಬಗಳಿಗೆ ಅನುಕೂಲವುಂಟಾಗಲಿದೆ. ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 10000 ಬಡಕುಟುಂಬಗಳ ನೀರಾವರಿ ಪಂಪ್‌ಸೆಟ್‌ಗಳಿಗೆ 2009-10ರಲ್ಲಿ ವಿದ್ಯುದೀಕರಣ ಮಾಡಲು ರೂ.100 ಕೋಟಿ ವೆಚ್ಚ ಮಾಡಲಾಗುವುದು.

## ಉದ್ಯೋಗ ಮತ್ತು ತರಬೇತಿ

171. ರಾಜ್ಯಾದ್ಯಂತ ಎಲ್ಲಾ ಯುವಕರಿಗೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಮತ್ತು ಅಗತ್ಯವಾದ ತರಬೇತಿಯನ್ನು ಒದಗಿಸಲು ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾನವ ಸಂಪನ್ಮೂಲ ಸೇವಾ ಕೇಂದ್ರಗಳಾಗಿ ಪರಿವರ್ತಿಸಲಾಗುವುದು. ಕೌಶಲ್ಯ ಮಾಪನ, ತರಬೇತಿ ಮತ್ತು ಸಹಾಯಗಳನ್ನು ಈ ಕೇಂದ್ರಗಳು ಒದಗಿಸಲಿವೆ.

172. ರಾಜ್ಯದಲ್ಲಿ 158 ಸರ್ಕಾರಿ ಕೈಗಾರಿಕಾ ಸಂಸ್ಥೆಗಳು ಮತ್ತು 901 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಇದಲ್ಲದೆ, ಸರ್ಕಾರಿ ಹಾಗೂ ಖಾಸಗಿ ವಲಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಯುವಕ ಯುವತಿಯರಿಗೆ ಅಗತ್ಯವಿರುವ ತಾಂತ್ರಿಕ ಕೌಶಲ್ಯವನ್ನು ಮತ್ತು ವ್ಯಕ್ತಿತ್ವ ಸುಧಾರಣೆಯ ತರಬೇತಿಯನ್ನು ನೀಡಲು ಅವಕಾಶವಿರುತ್ತದೆ. ಇಂತಹ ಸಂಸ್ಥೆಗಳು ತಮ್ಮ ಲಭ್ಯವಿರುವ ಸ್ಥಳಾವಕಾಶ ಮತ್ತು ಯಂತ್ರೋಪಕರಣಗಳನ್ನು ಉಪಯೋಗಿಸಿ ತಜ್ಞ ಸಂಪನ್ಮೂಲ ವ್ಯಕ್ತಿಗಳ ಸಹಾಯದಿಂದ ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಅರೆಕಾಲಿಕವಾಗಿ ಅಥವಾ ಪೂರ್ಣಕಾಲಿಕವಾಗಿ ನಡೆಸಲು ಸಾಧ್ಯವಿದೆ. ಇಂಥ ಸಂಸ್ಥೆಗಳ ಮೂಲಕ ಪ್ರತಿವರ್ಷವೂ ಸುಮಾರು ಒಂದು ಲಕ್ಷ ಯುವಜನರಿಗೆ ಉದ್ಯೋಗ ಸಂಬಂಧಿತ ಕೌಶಲ್ಯ ತರಬೇತಿಯನ್ನು ಒದಗಿಸಬಹುದಾಗಿದೆ. ಲಭ್ಯವಿರುವ ಈ ಸೌಕರ್ಯಗಳ ಸಂಪೂರ್ಣ ಉಪಯೋಗವನ್ನು ಪಡೆಯಲು ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಲಾಗುವುದು.

## ಕೌಶಲ್ಯ ತರಬೇತಿಗೆ ಸಹಾಯಧನ

173. ಕೈಗಾರಿಕಾ ತರಬೇತಿ ಸಂಸ್ಥೆಗಳು, ವಿದ್ಯಾಸಂಸ್ಥೆಗಳು ಮತ್ತು ಕೈಗಾರಿಕಾ ಘಟಕಗಳು ವಿಶೇಷ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ತರಬೇತಿ ವೆಚ್ಚವನ್ನು ಒದಗಿಸಲಾಗುವುದು. ತರಬೇತಿಯ ಅವಧಿ ಮತ್ತು ತಾಂತ್ರಿಕತೆಯ ಆಧಾರದ ಮೇಲೆ ತರಬೇತಿಯಿಂದ ಉದ್ಯೋಗ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯ ತರಬೇತಿಗಾಗಿ ರೂ.3000 ದಿಂದ ರೂ.10,000ದವರೆಗೆ ತರಬೇತಿ ಸಹಾಯಧನವಾಗಿ ಸಂಬಂಧಪಟ್ಟ ಸಂಸ್ಥೆಗೆ ನೀಡಲಾಗುವುದು.

174. ಪ.ಜಾ : ಪ.ಪಂ. ಹಾಗೂ ಹಿಂದುಳಿದ ವರ್ಗಗಳ/ಅಲ್ಪಸಂಖ್ಯಾತರ ಇಲಾಖೆಗಳಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ವೆಚ್ಚವನ್ನು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಿಂದ ಭರಿಸಲಾಗುವುದು.

175. ಮಾಡ್ಯೂಲರ್ ಎಂಪ್ಲಾಯೇಬಲ್ ಸ್ಕಿಲ್ಸ್ (MES): ಅನೌಪಚಾರಿಕ ವಲಯಗಳ ಮುಖಾಂತರ ಅಸಂಘಟಿತ ತರಬೇತಿ ಆಯ್ಕೆಗಳನ್ನು ವೃದ್ಧಿಪಡಿಸುವ ನಿಟ್ಟಿನಲ್ಲಿ 42 ವೃತ್ತಿಗಳಲ್ಲಿ 340 ಮಾಡ್ಯುಲ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆಟೋಮೊಬೈಲ್, ಕಟ್ಟಡ ನಿರ್ಮಾಣ, ಅತಿಥಿ ಸತ್ಕಾರ, ಎಲೆಕ್ಟ್ರಾನಿಕ್ ಕ್ಷೇತ್ರಗಳಿಗೆ ಈ ನಿಟ್ಟಿನಲ್ಲಿ ಆದ್ಯತೆ ನೀಡಲಾಗುವುದು.

176. ಸಿದ್ಧ ಉಡುಪು ಕೈಗಾರಿಕೆಗಳಲ್ಲಿ ಕೆಲಸ ಮಾಡಲು ಅಗತ್ಯವಿರುವ ತರಬೇತಿಯನ್ನು ನೀಡಲು ಪ್ರತಿಯೊಂದು ಜಿಲ್ಲೆಯಲ್ಲಿ ವಿಶೇಷ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ರೂ.15 ಕೋಟಿ ವಿನಿಯೋಗಿಸಲಾಗುವುದು.

177. ಒಟ್ಟಾರೆ ರಾಜ್ಯದ ಯುವಜನರಿಗಾಗಿ ವಿವಿಧ ರೀತಿಯ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ರೂ.100 ಕೋಟಿ ಅನುದಾನವನ್ನು ಒದಗಿಸಲಾಗಿದೆ.

**ಕಾರ್ಮಿಕ ಕಲ್ಯಾಣ**

178. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಿ ಕಾರ್ಮಿಕರ ಕಲ್ಯಾಣಕ್ಕಾಗಿ ರೂ.10 ಕೋಟಿ ಒದಗಿಸಲಾಗುವುದು.

179. ಆಟೋ ಮತ್ತು ಟ್ಯಾಕ್ಸಿ ಚಾಲಕರಿಗಾಗಿ ವಿಮೆ ಯೋಜನೆಯನ್ನು ಜಾರಿಗೊಳಿಸಲು ರೂ.2 ಕೋಟಿ ಒದಗಿಸಲಾಗುವುದು. ಇದರಿಂದ ಸುಮಾರು 2 ಲಕ್ಷ ಆಟೋ ಚಾಲಕರ ಕುಟುಂಬಗಳಿಗೆ ವೈದ್ಯಕೀಯ ಸೌಲಭ್ಯದ ರಕ್ಷಣೆ ದೊರೆಯುವುದು.

180. ಪ್ರಖ್ಯಾತ ಕಾರ್ಮಿಕ ಮುಖಂಡ ದಿವಂಗತ ಆಲಂಪಲ್ಲಿ ವೆಂಕಟರಾವ್ ಅವರ ಹೆಸರಿನಲ್ಲಿ ಕೈಗಾರಿಕಾ ಸಂಬಂಧಗಳ ವಿಷಯಗಳ ಬಗ್ಗೆ ಸಂಶೋಧನಾ

ಕೇಂದ್ರವನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ರೂ.1 ಕೋಟಿ ವಿನಿಯೋಗಿಸಲಾಗುವುದು.

**ಕಂದಾಯ ಮತ್ತು ಮುಜರಾಯಿ ಇಲಾಖೆಗಳು**

***ಮಾನ್ಯ ಸಭಾಧ್ಯಕ್ಷರೇ,***

181. ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನವನ್ನು ಕಳೆದ ತಿಂಗಳು ತಮ್ಮ ಹಾಗೂ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಿರುವುದು ಉತ್ತರ ಕರ್ನಾಟಕದ ಜನರ ಆಶೋತ್ತರಗಳಿಗೆ ಸರ್ಕಾರವು ಸಮರ್ಪಕವಾಗಿ ಸ್ಪಂದಿಸಿರುವುದಕ್ಕೆ ದ್ಯೋತಕವಾಗಿದೆ. ಕರ್ನಾಟಕದ ಎಲ್ಲ ಭಾಗಗಳ ಜನತೆಯ ಭಾವೈಕ್ಯತೆಯನ್ನು ಬಲಪಡಿಸಲು ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನವನ್ನು ಪ್ರತಿ ವರ್ಷವೂ ನಡೆಸಲು ಶಾಶ್ವತ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರವು ಬದ್ಧವಾಗಿದೆ. ಈ ದಿಸೆಯಲ್ಲಿ ಸುವರ್ಣ ವಿಧಾನ ಸೌಧದ ನಿರ್ಮಾಣಕ್ಕಾಗಿ ರೂ.100 ಕೋಟಿಗಳ ಅನುದಾನವನ್ನು ಒದಗಿಸಲಾಗುವುದು.

182. ರಾಜ್ಯದ ಭೂಸುಧಾರಣೆ ಕಾಯಿದೆಯ ಕೆಲವು ಅಂಶಗಳಲ್ಲಿರುವ ನಿರ್ಬಂಧಗಳಿಂದಾಗಿ ಶಿಕ್ಷಣ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿಯನ್ನು ಖರೀದಿಸಲು ಅಡ್ಡಿಯಾಗಿದೆ. ಶಾಲಾ ಕಾಲೇಜುಗಳು ಹಾಗೂ ಕೈಗಾರಿಕೆಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಲು ಭೂಸುಧಾರಣೆ ಕಾಯ್ದೆಗೆ ತಿದ್ದುಪಡಿ ಮಾಡಿ ನೇರವಾಗಿ ಅಂತಹ ಸಂಸ್ಥೆಗಳು ಭೂಮಿಯನ್ನು ಖರೀದಿಸಲು ಅನುಕೂಲ ಮಾಡಿಕೊಡಲಾಗುವುದು.

**ಜಿಲ್ಲಾ ಕೇಂದ್ರಗಳ ಅಭಿವೃದ್ಧಿ**

183. ಯಾದಗಿರಿ ಪಟ್ಟಣವನ್ನು ನೂತನ ಜಿಲ್ಲಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ವಿವಿಧ ಕಛೇರಿಗಳು ಮುಂತಾದ ಸೌಲಭ್ಯಗಳ ನಿರ್ಮಾಣಕ್ಕಾಗಿ ರೂ.25 ಕೋಟಿ ಒದಗಿಸಲಾಗುವುದು. ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದ ಕಛೇರಿಗಳ ಸಂಕೀರ್ಣಕ್ಕಾಗಿ ರೂ.25 ಕೋಟಿ ಒದಗಿಸಲಾಗುವುದು.

184. ಕಾಗಿನೆಲೆ ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೇ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮುಂದಿನ ವರ್ಷದಲ್ಲಿ ರೂ.10 ಕೋಟಿ ವಿನಿಯೋಗಿಸಲಾಗುವುದು.

185. ಸವದತ್ತಿಯ ಪುಣ್ಯ ಕ್ಷೇತ್ರ ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗಾಗಿ ರೂ.50 ಕೋಟಿ ವೆಚ್ಚದಲ್ಲಿ ಯೋಜನೆಯೊಂದನ್ನು ಜಾರಿಗೊಳಿಸಲಾಗುವುದು. ಇದಕ್ಕಾಗಿ ಸರ್ಕಾರವು ಒಂದು ವಿಶೇಷ ಪ್ರಾಧಿಕಾರವನ್ನು ರಚಿಸಲಿದ್ದು 2009–10ರಲ್ಲಿ ರೂ.5 ಕೋಟಿ ಅನುದಾನ ನೀಡಲಾಗುವುದು.

186. ಚಾಮರಾಜನಗರದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾದ ಮಲೆಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ ಹಾಗೂ ಹಿಮವದ್‌ಗೋಪಾಲಸ್ವಾಮಿ ಬೆಟ್ಟಗಳ ಅಭಿವೃದ್ಧಿಗಾಗಿ ರೂ.5 ಕೋಟಿ ಒಟ್ಟು ಅನುದಾನವನ್ನು ಒದಗಿಸಲಾಗುವುದು.

187. ಮೇಲುಕೋಟೆ ಕ್ಷೇತ್ರದ ಅಭಿವೃದ್ಧಿಗಾಗಿ ರೂ.2 ಕೋಟಿ ಅನುದಾನವನ್ನು ನೀಡಲಾಗುವುದು.

188. ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ಹಾಗೂ ಶಿವನಪಾದ ಕ್ಷೇತ್ರಗಳ ಅಭಿವೃದ್ಧಿಗೆ ತಲಾ ರೂ.2 ಕೋಟಿ ಒದಗಿಸಲಾಗುವುದು.

189. ಗುಲ್ಬರ್ಗ ಜಿಲ್ಲೆಯ ಜಿಡಗಾ ಮಠದ ಅಭಿವೃದ್ಧಿ ಕಾರ್ಯಗಳಿಗೆ ರೂ.1 ಕೋಟಿ ಅನುದಾನ ನೀಡಲಾಗುವುದು.

190. ಬಾಗಲಕೋಟೆಯಲ್ಲಿ ಭೋವಿ ಸಮಾಜದ ಶ್ರೀ ಶರಣಬಸವೇಶ್ವರ ಗುರುಪೀಠ, ಚಿತ್ರದುರ್ಗದಲ್ಲಿ ಇಮ್ಮಡಿ ಸಿದ್ದರಾಮೇಶ್ವರ ಮಠದ ಅಭಿವೃದ್ಧಿಗಾಗಿ ಹಾಗೂ ದೇವಾಂಗ ಸಮಾಜದ ಹಂಪಿ ಹೇಮಕೂಟ ಗಾಯತ್ರಿ ಮಠದ ಆಭಿವೃದ್ಧಿಗಾಗಿ ತಲಾ ರೂ.1 ಕೋಟಿ ನೀಡಲಾಗುವುದು.

191. ಚಿತ್ರದುರ್ಗದ ಮುರುಗಾಮಠದ ಅಲ್ಲಮಪ್ರಭು ಪೀಠ ಸ್ಥಾಪನೆಗಾಗಿ ಮತ್ತು ಮಾದರ ಚೆನ್ನಯ್ಯ ಶರಣರ ಗುರುಪೀಠದ ಸ್ಥಾಪನೆಗಾಗಿ ರೂ.2 ಕೋಟಿ ನೀಡಲಾಗುವುದು.

192. ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಅಭಿವೃದ್ಧಿಗಾಗಿ ರೂ.2 ಕೋಟಿ ನೀಡಲಾಗುವುದು.

193. ಯಡಿಯೂರು ಸಿದ್ಧಲಿಂಗೇಶ್ವರ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ರೂ.5 ಕೋಟಿ ಅನುದಾನವನ್ನು ಒದಗಿಸಲಾಗುವುದು.

194. ಹಾನಗಲ್‌ನಲ್ಲಿರುವ ಕುಮಾರಸ್ವಾಮಿ ಮಠ ಮತ್ತು ಬಾಗಲಕೋಟೆಯ ಶಿವಯೋಗಮಂದಿರದ ಅಭಿವೃದ್ಧಿಗೆ ತಲಾ ರೂ.1 ಕೋಟಿ ನೀಡಲಾಗುವುದು.

195. ಮೈಸೂರು ಜಿಲ್ಲೆಯ ತಗಡೂರಿನಲ್ಲಿ ಅಂಕನಾಥೇಶ್ವರ ಕಾರ್ಯಸಿದ್ಧೇಶ್ವರ ಬೆಟ್ಟ ಅಭಿವೃದ್ಧಿ ರೂ.50 ಲಕ್ಷ, ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನ ಭೀಮನ ಕೊಲ್ಲಿ ಮಹದೇಶ್ವರ ದೇವಸ್ಥಾನದ ಅಭಿವೃದ್ಧಿಗೆ ರೂ.1 ಕೋಟಿ ನೀಡಲಾಗುವುದು.

196. ಉಡುಪಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಬ್ಬುಸ್ವಾಮಿ ಮಠದ ಅಭಿವೃದ್ಧಿಗೆ ರೂ.1 ಕೋಟಿ ನೀಡಲಾಗುವುದು.

197. ವಿವಿಧ ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಗಾಗಿ ರೂ.10 ಕೋಟಿ ಒದಗಿಸಲಾಗುವುದು.

**ಭಾವೈಕ್ಯತಾ ಕ್ಷೇತ್ರಗಳ ಅಭಿವೃದ್ಧಿ:**

**"ಸರ್ವ ಜನಾಂಗದ ಶಾಂತಿಯ ತೋಟ**
**ರಸಿಕರ ಕಂಗಳ ಸೆಳೆಯುವ ನೋಟ**
**ಹಿಂದೂ ಕ್ರೈಸ್ತ ಮುಸಲ್ಮಾನ**
**ಪಾರಸಿಕ ಜೈನರುದ್ಯಾನ"**

– ಕುವೆಂಪು

198. ಕವಿವರ್ಯ ಕುವೆಂಪು ಕರ್ನಾಟಕವನ್ನು ಸರ್ವ ಜನಾಂಗದ ಶಾಂತಿಯ ತೋಟವೆಂದು ಬಣ್ಣಿಸಿದ್ದಾರೆ. ಇಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಪಾರಸಿ ಮತ್ತು ಜೈನ ಇತ್ಯಾದಿ ಜನಾಂಗಗಳು ಸೌಹಾರ್ದದಿಂದ ಬಾಳ್ವೆ ಮಾಡುತ್ತಿದ್ದಾರೆ. ಇಂತಹ ಭಾವೈಕ್ಯತೆಯನ್ನು ಬಿಂಬಿಸುವ ಹಲವಾರು ಸ್ಥಳ ಮತ್ತು ಸಂಸ್ಥೆಗಳು ನಮ್ಮಲ್ಲಿವೆ. ಆ ಸ್ಥಳ ಮತ್ತು ಸಂಸ್ಥೆಗಳ ಅಭಿವೃದ್ಧಿಗೆ ಸಹಕರಿಸುವ ಮೂಲಕ ಭಾವೈಕ್ಯತೆಯ ಬೇರು ಮತ್ತು ಬಿಳಲುಗಳು ಆಳವಾಗಿ, ವಿಸ್ತಾರವಾಗಿ ಹಬ್ಬಲು ಸರ್ಕಾರ ನೆರವಾಗಲಿದೆ.

199. ಧರ್ಮ-ಧರ್ಮಗಳ ಮಧ್ಯೆ ಜಾತಿ-ಜಾತಿಗಳ ಮಧ್ಯೆ ಪ್ರೀತಿ-ವಿಶ್ವಾಸ ಬೆಸೆಯಲು ನಾವು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಈ ದೆಸೆಯಲ್ಲಿ ಹಲವಾರು

ದಶಕಗಳಿಂದ ವಿವಿಧ ಧರ್ಮಗಳ ಭಾವೈಕ್ಯತೆಯ ಸಂದೇಶ ಸಾರುತ್ತಿರುವ ಈ ಕೆಳಗಿನ ಕ್ಷೇತ್ರಗಳ ಅಭಿವೃದ್ಧಿಗೆ ರೂ.10 ಕೋಟಿ ಅನುದಾನ ಮೀಸಲಿಡಲಾಗುವುದು.

- ಬಿಜಾಪುರದ ಖಾಜಾ ಅಮೀನುದ್ದೀನ ದರ್ಗಾ;
- ಗದಗಜಿಲ್ಲೆಯ ಶಿರಹಟ್ಟಿ ಫಕೀರಸ್ವಾಮಿ ಮಠ;
- ಸುರಪುರ ತಾಲ್ಲೂಕಿನ ಕೊಡೆಕಲ್ ಬಸವಣ್ಣ ಮತ್ತು ತಿಂಥಿಣಿ ಮೌನೇಶ್ವರ ಕ್ಷೇತ್ರಗಳು;
- ಗೋಕಾಕ ತಾಲ್ಲೂಕಿನ ಸಾವಳಗಿ ಶಿವಲಿಂಗೇಶ್ವರ ಮಠ;
- ಚಿಂತಾಮಣಿ ತಾಲ್ಲೂಕಿನ ಮುರುಗುಮುಲ್ಲಾ ಕ್ಷೇತ್ರ ಮತ್ತು ಇತರೆ ಹಿಂದು-ಮುಸ್ಲಿಂ ಮತ್ತು ಹಿಂದು-ಕ್ರೈಸ್ತ ಭಾವೈಕ್ಯತಾ ಕ್ಷೇತ್ರಗಳು;

### ಆಹಾರ – ಪಡಿತರ ವ್ಯವಸ್ಥೆಗೆ ರೂ. 750 ಕೋಟಿ

200. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಎಲ್ಲ ಬಡ ಕುಟುಂಬಗಳಿಗೆ ಅಗತ್ಯ ಆಹಾರ ಧಾನ್ಯಗಳನ್ನು ವಿತರಿಸಲು ಸರ್ಕಾರವು ವಿಶೇಷ ಆದ್ಯತೆಯನ್ನು ನೀಡಿದೆ. ಈ ವರೆಗೆ 78 ಲಕ್ಷ ಬಡ ಕುಟುಂಬಗಳಿಗೆ ಪಡಿತರ ಚೀಟಿಯನ್ನು ಮತ್ತು 21 ಲಕ್ಷ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಚೀಟಿಯನ್ನು ವಿತರಿಸಲಾಗಿದೆ. ಪ್ರತಿಯೊಂದು ಕುಟುಂಬಕ್ಕೆ ಭಾವಚಿತ್ರ ಸಮೇತವಾದ ಪಡಿತರ ಚೀಟಿಗಳನ್ನು ವಿತರಿಸುವುದಲ್ಲದೆ, ಎಲೆಕ್ಟ್ರಾನಿಕ್ ಯಂತ್ರಗಳ ಬಳಕೆಯಿಂದ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಸೌಲಭ್ಯಗಳ ದುರುಪಯೋಗವನ್ನು ತಡೆಗಟ್ಟಲು ಸರ್ಕಾರವು ಕ್ರಮ ಕೈಗೊಳ್ಳುವುದು. 2009-10ರಲ್ಲಿ ಪಡಿತರ ವ್ಯವಸ್ಥೆಯ ಮೂಲಕ ಅಗತ್ಯ ವಸ್ತುಗಳನ್ನು ಬಡಕುಟುಂಬಗಳಿಗೆ ವಿತರಿಸಲು ರೂ.750 ಕೋಟಿ ಸಹಾಯಧನವನ್ನು ಒದಗಿಸಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಆಶ್ವಾಸನೆ ನೀಡಿದಂತೆ ಪಡಿತರ ಚೀಟಿ ಇಲ್ಲದ ಬಡವರಿಗೆ ಅವರ ಅರ್ಜಿಯನ್ನು ಪರಿಗಣಿಸಿ ಈ ವರೆಗೆ ಸುಮಾರು 20 ಲಕ್ಷ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ರಾಜ್ಯದಲ್ಲಿ ಮುಂದಿನ ಕೆಲವು ದಿನಗಳಲ್ಲಿ ಉಳಿದ ಎಲ್ಲ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

## ಗೃಹ ಇಲಾಖೆ

201. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸಲು ಮತ್ತು ಭಯೋತ್ಪಾದಕರು, ನಕ್ಸಲರು ಮತ್ತು ಇತರ ಅಪರಾಧಗಳ ನಿಯಂತ್ರಣಕ್ಕಾಗಿ 475 ವಿವಿಧ ಹುದ್ದೆಯನ್ನೊಳಗೊಂಡ ಆಂತರಿಕ ಭದ್ರತಾ ವಿಭಾಗವನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ನೇತೃತ್ವದಲ್ಲಿ ರಚಿಸಲಾಗಿದೆ. ಕಾನೂನು ಸುವ್ಯವಸ್ಥೆಯಲ್ಲಿ ಪೊಲೀಸ್ ಇಲಾಖೆಯನ್ನು ಬಲಪಡಿಸಲು 3,000 ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ.

202. ಕರಾವಳಿ ಪ್ರದೇಶದಲ್ಲಿ ಅಪರಾಧಗಳನ್ನು ನಿಯಂತ್ರಿಸಲು ಕರಾವಳಿ ರಕ್ಷಣಾ ಪಡೆಗೆ 5 ಹೊಸ ಠಾಣೆಗಳನ್ನು ಪೂರ್ಣ ಸಿಬ್ಬಂದಿಯೊಂದಿಗೆ ಪ್ರಾರಂಭಿಸಲಾಗಿದೆ.

203. ಪುರಾತನ ಸ್ಮಾರಕಗಳನ್ನು ಸಂರಕ್ಷಿಸುವ ಸಲುವಾಗಿ ಹಂಪಿಯ ಉಪ ವಿಭಾಗವನ್ನು ಸೃಜಿಸಲಾಗಿದೆ.

204. ಬೆಂಗಳೂರು ನಗರದಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ಬಿ-ಟ್ರಾಕ್ ಯೋಜನೆಗೆ ರೂ. 40 ಕೋಟಿಗಳನ್ನು ಒದಗಿಸಲಾಗುವುದು.

205. ಮಲೆನಾಡು ಪ್ರದೇಶದಲ್ಲಿ ಸುವ್ಯವಸ್ಥೆ ಪಾಲನೆಗಾಗಿ ಐದು ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲಾಗುವುದು.

206. ಮುಂಬರುವ ದಿನಗಳಲ್ಲಿ ಪೊಲೀಸ್ ಇಲಾಖೆಯ ದೃಢತೆಯನ್ನು ಹೆಚ್ಚಿಸಲು ರಾಜ್ಯದಲ್ಲಿ ಇನ್ನೂ 3 ಇಂಡಿಯನ್ ರಿಸರ್ವ್ ಬೆಟಾಲಿಯನ್ ಸ್ಥಾಪಿಸಲು ನಿರ್ಧರಿಸಲಾಗಿದೆ.

207. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಎಸ್ಮಾ (ESMA) ಮತ್ತು ಕೋಕಾ (KCOCA) ಕಾಯಿದೆಗಳನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ. ಈ ವರ್ಷದಲ್ಲಿ 3,840 ಪೊಲೀಸ್ ಸಿಬ್ಬಂದಿಗಳನ್ನು ಹೊಸದಾಗಿ ನೇಮಕ ಮಾಡುವುದರ ಮೂಲಕ ಪೊಲೀಸ್ ಬಲವನ್ನು ಮತ್ತಷ್ಟು ಸದೃಢಗೊಳಿಸಲಾಗುವುದು.

208. ರಾಜ್ಯದ ಮೀಸಲು ಪಡೆಯ ಸಿಬ್ಬಂದಿಗಳಿಗಾಗಿ ಸಮುದಾಯ ಭವನ, ಅವರ ಕಲ್ಯಾಣ ನಿಧಿಗೆ ಹಾಗೂ ಇತರ ಕಟ್ಟಡಗಳಿಗಾಗಿ ರೂ.20 ಕೋಟಿಗಳನ್ನು ಪ್ರತ್ಯೇಕವಾಗಿ ಒದಗಿಸಲಾಗಿದೆ.

209. ಅಗ್ನಿಶಾಮಕ ಸೇವೆಯನ್ನು ಮತ್ತಷ್ಟು ಬಲ ಪಡಿಸಲು ರೂ.35 ಕೋಟಿಗಳ ಅನುದಾನವನ್ನು ಒದಗಿಸಲಾಗುವುದು.

210. ಕಾರಾಗೃಹಗಳ ಉನ್ನತೀಕರಣಕ್ಕಾಗಿ ಹೊಸ ಕಟ್ಟಡಗಳ ನಿರ್ಮಾಣ ಮಾಡಲು ಹಾಗೂ ವಿವಿಧ ಭದ್ರತಾ ಉಪಕರಣಗಳನ್ನು ಅಳವಡಿಸಿ ಆಧುನೀಕರಣ ಮಾಡಲು ಮತ್ತು ಕಾರಾಗೃಹಗಳಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯ ಒದಗಿಸಲು ರೂ.10 ಕೋಟಿಗಳನ್ನು ನೀಡಲಾಗುವುದು.

211. ಧಾರವಾಡದಲ್ಲಿ ಪೊಲೀಸ್ ಕಲ್ಯಾಣನಿಧಿಯ ಮೂಲಕ ಸ್ಥಾಪಿಸುವ ಎನ್.ಎ.ಮುತ್ತಣ್ಣ ಸ್ಮಾರಕ ವಸತಿ ಶಾಲೆಗೆ ರೂ.2 ಕೋಟಿ ನೆರವು ನೀಡಲಾಗುವುದು.

**ಸಾರಿಗೆ**

212. ಕರ್ನಾಟಕದ ವಿಕಾಸಶೀಲ ಅರ್ಥ ವ್ಯವಸ್ಥೆಗೆ ಸಮರ್ಪಕ ಸಾರಿಗೆ ಸೇವೆಗಳು ಅಗತ್ಯ ಚಾಲನೆಯನ್ನು ನೀಡುತ್ತವೆ. ಈ ದೃಷ್ಟಿಯಿಂದ ಸರ್ಕಾರಿ ಸ್ವಾಮ್ಯದ ರಸ್ತೆ ಸಾರಿಗೆ ಸಂಸ್ಥೆಗಳು ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸುತ್ತಿವೆ. 2009-10ರಲ್ಲಿ ಈ ಸಂಸ್ಥೆಗಳು ತಮ್ಮ ವಾಹನಬಲವನ್ನು ಹೆಚ್ಚಿಸಲು ಒಟ್ಟು 4000 ನೂತನ ವಾಹನಗಳನ್ನು ಖರೀದಿಸಲಿವೆ. ಪ್ರಯಾಣಿಕರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಮುಂದಿನ ವರ್ಷ ಈ ಸಂಸ್ಥೆಗಳಿಗೆ ರೂ.100 ಕೋಟಿ ಅನುದಾನವನ್ನು ನೀಡಲಾಗುವುದು.

213. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಬಲಪಡಿಸಲು ವ್ಯವಸ್ಥಿತ ಯೋಜನೆಯನ್ನು ರೂಪಿಸಿ ರೂ.25 ಕೋಟಿ ಬಂಡವಾಳವನ್ನು ನೀಡಲಾಗುವುದು.

**ಕನ್ನಡ ನುಡಿಯ ಹಿರಿಮೆ – ಸಂಸ್ಕೃತಿಯ ಗರಿಮೆ!**

**"ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ**
**ಒಂದೇ ಜನವೂ, ಒಂದೇ ಮನವೂ ಕನ್ನಡಿಗರು ಒಂದೇ**
**ಕುಲವೊಂದೇ, ಸ್ಥೂಲವೊಂದೇ ನೀತಿಯ ನೆಲೆಯೊಂದೇ**
**ಹೀಗೆನ್ನದ ಹೆರವರು ಅವರಿದ್ದರು ಒಂದೇ**
**ಇರದಿದ್ದರು ಒಂದೇ".**

*– ದ.ರಾ.ಬೇಂದ್ರೆ*

214. ವರಕವಿ ಬೇಂದ್ರೆಯವರು ಕನ್ನಡಿಗರು ಎಂದಿಗೂ ಒಂದೇ ಎಂಬ ಭಾವವನ್ನು ತಮ್ಮ ಕವನದ ಸಾಲುಗಳಲ್ಲಿ ಅಭಿವ್ಯಕ್ತಿಸಿರುವ ರೀತಿ ಅನನ್ಯ. ಕರ್ನಾಟಕದ ಮತ್ತು ಸಮಸ್ತ ಕನ್ನಡಿಗರ ಅಭ್ಯುದಯಕ್ಕೆ ಶ್ರಮಿಸಲು ಬೇಂದ್ರೆಯವರ ಕಾವ್ಯದ ಆಶಯ ಪ್ರೇರಕವಾಗಿದೆ. ಕನ್ನಡ ಮತ್ತು ಕನ್ನಡಿಗರ ಹಿತ ರಕ್ಷಣೆಗೆ ಸರ್ಕಾರ ಸದಾ ಬದ್ಧವಾಗಿದೆ.

215. ಕನ್ನಡಿಗರ ದೃಢ ನಿರ್ಧಾರದ ಹೋರಾಟ ಹಾಗು ಒತ್ತಾಯಗಳ ದೆಸೆಯಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದು ಎಲ್ಲ ಕನ್ನಡಿಗರ ಒಂದು ಮಹದಾಕಾಂಕ್ಷೆಯನ್ನು ನೆರವೇರಿಸಿದಂತಾಗಿದೆ. ಇದೇ ಸಂದರ್ಭದಲ್ಲಿ ಕನ್ನಡಾಂಬೆಯ ಹೆಮ್ಮೆಯ ಪುತ್ರ ಹಿಂದೂಸ್ಥಾನಿ ಸಂಗೀತ ಪ್ರಪಂಚದ ದಿಗ್ಗಜ ಡಾ॥ ಭೀಮಸೇನ್ ಜೋಷಿ ಅವರಿಗೆ ಭಾರತ ರತ್ನ ಪ್ರಶಸ್ತಿ ಲಭಿಸಿರುವುದು ಕನ್ನಡಿಗರಿಗೆ ಅಪರಿಮಿತ ಸಂತೋಷವನ್ನು ತಂದಿದೆ. ಮುಂಬರುವ ವರ್ಷಗಳಲ್ಲಿ ಕನ್ನಡ ನಾಡು ನುಡಿಯ ಹಿರಿಮೆಯನ್ನು ಕಾಪಾಡಲು ಮತ್ತು ಹೆಚ್ಚಿಸಲು ನಮ್ಮ ಸರ್ಕಾರವು ಸಮಗ್ರ ಯೋಜನೆಗಳನ್ನು ರಚಿಸಿ ಅನುಷ್ಠಾನಗೊಳಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ.6 ಕೋಟಿ ನೀಡಲಾಗುತ್ತಿದೆ.

216. ಕರ್ನಾಟಕದ ಗಡಿ ಪ್ರದೇಶಗಳ ಅಭಿವೃದ್ಧಿಯು ನಾಡಿನ ಕಡೆಯಂಚಿನ ಕನ್ನಡಿಗರ ಜೀವನವನ್ನು ಹಸನಾಗಿಸಲು ಅತ್ಯವಶ್ಯಕವಾಗಿದೆ. ಆದ್ದರಿಂದ ಕರ್ನಾಟಕದ ಎಲ್ಲಾ ಗಡಿಭಾಗಗಳ ಸಮಗ್ರ ಅಭಿವೃದ್ಧಿಗೆ "ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ"

ರಚಿಸಲಾಗುವುದು. ಇದಕ್ಕಾಗಿ ಈ ವರ್ಷ ರೂ.10 ಕೋಟಿ ಅನುದಾನ ನೀಡಲು ತೀರ್ಮಾನಿಸಲಾಗಿದೆ.

217. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಶೋಧನಾ ಕೇಂದ್ರವನ್ನು ತೆರೆಯಲು ಮತ್ತು ಕನ್ನಡ ನಿಘಂಟು ಯೋಜನೆಯನ್ನು ಮುಂದುವರೆಸಲು ರೂ.2 ಕೋಟಿ ಅನುದಾನ ನೀಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಲು ತಲಾ ರೂ.5 ಲಕ್ಷ ಸಹಾಯಧನ ನೀಡಲಾಗುವುದು.

218. ಇಂಗ್ಲೀಷಿನ 'ವಿಕಿಪಿಡಿಯಾ' ಮಾದರಿಯಲ್ಲಿ ಕನ್ನಡದಲ್ಲಿ ಸರ್ವವಸ್ತು ಜ್ಞಾನಕೋಶವನ್ನು ಇಂಟರ್‌ನೆಟ್‌ನಲ್ಲಿ ಅಳವಡಿಸಲು ಜ್ಞಾನ ಆಯೋಗವು ಮಾಡಿರುವ ಶಿಫಾರಸ್ಸನ್ನು ಜಾರಿಗೊಳಿಸಲು ರೂ.2 ಕೋಟಿ ಒದಗಿಸಲಾಗುವುದು.

219. ಕಿತ್ತೂರು ಪ್ರಾಧಿಕಾರಕ್ಕೆ ರೂ.5 ಕೋಟಿ ನೀಡಲು ನಿರ್ಧರಿಸಲಾಗಿದೆ. ಇದರ ಜೊತೆ ವೀರರಾಣಿ ಚೆನ್ನಮ್ಮನ ಹುಟ್ಟೂರಾದ ಕಾಕತಿಯನ್ನು ಸಹ ಸೇರಿಸಲಾಗುವುದು. ಕಿತ್ತೂರು ಮತ್ತು ಕಾಕತಿ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಈ ಪ್ರಾಧಿಕಾರವು ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸುವುದು.

220. ಕೊಪ್ಪ ತಾಲ್ಲೂಕು (ಚಿಕ್ಕಮಗಳೂರು ಜಿಲ್ಲೆ) ಇಲ್ಲಿ 'ಕುವೆಂಪು ಸಂದೇಶ ಭವನ'ಕ್ಕೆ ರೂ.1 ಕೋಟಿ ವಿಶೇಷ ಅನುದಾನ ನೀಡಲಾಗುವುದು.

221. ಮೈಸೂರಿನಲ್ಲಿನ ರಂಗಾಯಣ ಅಭಿವೃದ್ಧಿಗೆ ರೂ.1 ಕೋಟಿ ಮತ್ತು ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವಾ) ಅಭಿವೃದ್ಧಿಗೆ ರೂ.2 ಕೋಟಿ ನೀಡಲಾಗುವುದು. ವಿವಿಧ ಅಕಾಡೆಮಿಗಳಿಗೆ ನೀಡುತ್ತಿರುವ ಅನುದಾನವನ್ನು ದ್ವಿಗುಣಗೊಳಿಸಲಾಗುವುದು.

222. ರಾಮನಗರದ ಜಾನಪದ ಪರಿಷತ್ತು ಅಭಿವೃದ್ಧಿ ಕಾರ್ಯಗಳಿಗೆ ರೂ. 1 ಕೋಟಿ ಒದಗಿಸಲಾಗುವುದು.

223. ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ದಿವಂಗತ ಆಲೂರು ವೆಂಕಟರಾಯರ ಹೆಸರಿನಲ್ಲಿ ಹೊಳೆ ಆಲೂರಿನಲ್ಲಿ ಸ್ಮಾರಕವನ್ನು ನಿರ್ಮಿಸಲು ರೂ. 1 ಕೋಟಿ ನೀಡಲಾಗುವುದು.

224. ಪ್ರಖ್ಯಾತ ಸಂಗೀತಗಾರರಾದ ಸವಾಯಿ ಗಂಧರ್ವ ಅವರ ಹೆಸರಿನಲ್ಲಿ ಕುಂದಗೋಳದಲ್ಲಿ ಸಭಾಭವನವನ್ನು ನಿರ್ಮಿಸಲು ರೂ.2 ಕೋಟಿ ನೀಡಲಾಗುವುದು. ದಿವಂಗತ ಮಲ್ಲಿಕಾರ್ಜುನ ಮನ್ಸೂರರ ಗ್ರಾಮದ ಅಭಿವೃದ್ಧಿಗಾಗಿ ಮತ್ತು ಬಸವರಾಜ ರಾಜಗುರು ಅವರ ಸ್ಮಾರಕಗಳ ನಿರ್ಮಾಣಕ್ಕಾಗಿ ತಲಾ ರೂ.1 ಕೋಟಿ ನೀಡಲಾಗುವುದು.

225. ಕನ್ನಡ ಚಿತ್ರೋದ್ಯಮದ ಅಮೃತೋತ್ಸವ ಸಂದರ್ಭದಲ್ಲಿ ಅಮೃತೋತ್ಸವ ಭವನದ ನಿರ್ಮಾಣಕ್ಕಾಗಿ ರೂ.5 ಕೋಟಿ ನೀಡಲಾಗುವುದು.

226. ಚೆನ್ನೈನಲ್ಲಿ ಸರ್ವಜ್ಞನ ಮೂರ್ತಿಯನ್ನು ಸ್ಥಾಪಿಸಲು ಅಗತ್ಯ ಅನುದಾನವನ್ನು ಒದಗಿಸಲಾಗುವುದು.

## ಸ್ವಾತಂತ್ರ್ಯಯೋಧರ ಸ್ಮಾರಕಗಳು

227. ನಾವು ಬ್ರಿಟಿಷ್‌ನ ಆಳ್ವಿಕೆಯಿಂದ ಹೊರಬಂದು ಪ್ರಜಾಪ್ರಭುತ್ವದ ಫಲ ಅನುಭವಿಸಲು ಸಾಧ್ಯವಾಗಿರುವುದು ಸ್ವಾತಂತ್ರ್ಯಯೋಧರ ತ್ಯಾಗ ಬಲಿದಾನಗಳಿಂದ. ಈ ಮಹಾ ಚೇತನಗಳ ನೆನಪು ಸದಾಕಾಲ ಇರುವುದರ ಜೊತೆಗೆ ಮುಂದಿನ ಪೀಳಿಗೆಯಲ್ಲಿ ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸಲು ಸ್ವಾತಂತ್ರ್ಯಯೋಧರ ಸ್ಮಾರಕಗಳನ್ನು ನಿರ್ಮಿಸಲು ಮತ್ತು ಈ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಕಿತ್ತೂರು ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣನ ಸ್ಮಾರಕಗಳಲ್ಲದೆ, ಗೌರಿಬಿದನೂರಿನ ವಿದುರಾಶ್ವತ್ಥ, ಮದ್ದೂರು ಬಳಿ ಶಿವಪುರ, ಶಿವಮೊಗ್ಗ ಜಿಲ್ಲೆಯ ಈಸೂರು, ಹಾವೇರಿ / ಮೊಟೆಬೆನ್ನೂರಿನಲ್ಲಿ ಮೈಲಾರ ಮಹದೇವಪ್ಪ ಸ್ಮಾರಕ, ಬೆಳಗಾವಿ ಜಿಲ್ಲೆಯ ಗಂಗಾಧರ ದೇಶಪಾಂಡೆಯವರ ಹುದ್ಲಿ, ಹರ್ಡೇಕರ್ ಮಂಜಪ್ಪನವರ ಕರ್ಮಭೂಮಿಯಾದ ಆಲಮಟ್ಟಿ, ಅಂಕೋಲ ಇತ್ಯಾದಿ ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರಗಳಲ್ಲಿ ಹೆಚ್ಚಿನ ಮೂಲಭೂತ ಸೌಲಭ್ಯ ಮತ್ತು ಸ್ಮಾರಕಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ರೂ.10 ಕೋಟಿ ವೆಚ್ಚ ಮಾಡಲಾಗುವುದು.

## ಮಾಧ್ಯಮಗಳಿಗೆ ಬೆಂಬಲ

228. ಪ್ರಜಾಪ್ರಭುತ್ವದ ಪ್ರಕ್ರಿಯೆಗಳ ಪೋಷಣೆಯಲ್ಲಿ ಸ್ವತಂತ್ರ ಮಾಧ್ಯಮಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಮಾಧ್ಯಮಗಳ ಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರದಿಂದ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

229. ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ಪತ್ರಿಕಾ ಭವನ / ಮಾಧ್ಯಮ ಕೇಂದ್ರದ ನಿರ್ಮಾಣಕ್ಕಾಗಿ ತಲಾ ರೂ.25 ಲಕ್ಷ ಅನುದಾನ ನೀಡಲಾಗುವುದು.

230. ನಿವೃತ್ತ ಪತ್ರಕರ್ತರು ಮಾಸಾಶನ ಪಡೆಯಲು ಇರುವ ವಾರ್ಷಿಕ ವರಮಾನದ ಮಿತಿಯನ್ನು ಈಗಿರುವ ರೂ. 5000ದ ಬದಲಿಗೆ ರೂ. 50,000ಕ್ಕೆ ಹೆಚ್ಚಿಸಲಾಗುವುದು.

231. ಸದಾ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರ ಕ್ಷೇಮಾಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ಆದ್ದರಿಂದ ಕಾರ್ಯನಿರತ ಪತ್ರಕರ್ತರು ಮತ್ತು ನಿವೃತ್ತ ಪತ್ರಕರ್ತರನ್ನು 'ಯಶಸ್ವಿನಿ ಸಹಕಾರ ಆರೋಗ್ಯ ವಿಮಾ ಯೋಜನೆ' ವ್ಯಾಪ್ತಿಗೆ ಒಳಪಡಿಸಲು ನಿರ್ಧರಿಸಿದ್ದೇವೆ. ವಾರ್ತಾ ಇಲಾಖೆ ಸಹಯೋಗದೊಂದಿಗೆ ಪತ್ರಕರ್ತರ ಸಹಕಾರ ಸಂಘದ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

232. ಜಿಲ್ಲಾ ಮಟ್ಟದ ಪತ್ರಕರ್ತರು ವೃತ್ತಿ ಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲೆಯೊಳಗೆ ಪ್ರಯಾಣಕ್ಕೆ ಸೀಮಿತಿಗೊಳಿಸಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೂಲಕ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗುವುದು.

## ಪ್ರವಾಸೋದ್ಯಮ

233. ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಬೆಂಬಲ ನೀಡಲು ಈ ಬಾರಿಯ ಆಯವ್ಯಯದಲ್ಲಿ ರೂ.180 ಕೋಟಿ ಒದಗಿಸಲಾಗುವುದು. ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಾದ ಹಂಪಿ, ಬದಾಮಿ, ಪಟ್ಟದಕಲ್ಲು, ಬಿಜಾಪುರ, ಬೇಲೂರು, ಹಳೇಬೀಡು, ಸೋಮನಾಥಪುರ, ಜೋಗ, ಮುಂತಾದ ಸ್ಥಳಗಳಲ್ಲಿ ಖಾಸಗಿ

ಸಹಭಾಗಿತ್ವದೊಡನೆ ಪ್ರವಾಸಿಗಳಿಗಾಗಿ ಉತ್ತಮ ಸೌಲಭ್ಯಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

234. ನಂದಿ ಬೆಟ್ಟ, ಕೆಮ್ಮಣ್ಣುಗುಂಡಿ, ಕೊಡಚಾದ್ರಿ, ಮುಂತಾದ ಗಿರಿಧಾಮಗಳನ್ನು ಅಭಿವೃದ್ಧಿಪಡಿಸಲು ರೂ. 10 ಕೋಟಿ ವಿನಿಯೋಗಿಸಲಾಗುವುದು.

235. ಕಾರವಾರದಲ್ಲಿ ಪ್ರವಾಸಿ ತಾಣವಾದ ಟಾಗೋರ್ ಬೀಚನ್ನು ಅಭಿವೃದ್ಧಿಪಡಿಸಲು ರೂ.5 ಕೋಟಿ ಮಂಜೂರು ಮಾಡಲಾಗುವುದು.

236. ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರದ ಬಳಿ ಬೃಂದಾವನವನ್ನು ನವೀಕರಣಗೊಳಿಸಲು ರೂ. 5 ಕೋಟಿ ಅನುದಾನವನ್ನು ನೀಡಲಾಗುವುದು.

237. ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ರೂ.2 ಕೋಟಿಯನ್ನು ನೀಡಲಾಗುವುದು.

238. ಬೆಂಗಳೂರು ಸಮೀಪದ ಬನ್ನೇರುಘಟ್ಟದಲ್ಲಿ ರಾತ್ರಿ ಸಫಾರಿ ಅಭಿವೃದ್ಧಿಗೊಳಿಸಲು ಅಗತ್ಯ ಅನುದಾನ ನೀಡಲಾಗುವುದು.

239. ಶೃಂಗೇರಿಯಲ್ಲಿ ಯಾತ್ರಿನಿವಾಸದ ನಿರ್ಮಾಣಕ್ಕಾಗಿ ರೂ.2 ಕೋಟಿ ಮತ್ತು ಕಿಗ್ಗ ಕ್ಷೇತ್ರದ ಅಭಿವೃದ್ಧಿಗಾಗಿ ರೂ.1 ಕೋಟಿ ಒದಗಿಸಲಾಗುವುದು.

240. ಚನ್ನಗಿರಿ ತಾಲ್ಲೂಕಿನ ಶಾಂತಿ ಸಾಗರ ಕೆರೆಯನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲು ರೂ.2 ಕೋಟಿ ನೀಡಲಾಗುವುದು.

**ಯುವಜನ ಸೇವೆ ಮತ್ತು ಕ್ರೀಡೆಗಳು**

241. ರಾಜ್ಯದಲ್ಲಿ ಈಗಾಗಲೇ ಸ್ಥಾಪಿಸಿರುವ 23 ಕ್ರೀಡಾಶಾಲೆಗಳ ಅಭಿವೃದ್ಧಿಗಾಗಿ 10 ಕ್ರೀಡಾ ವಿದ್ಯಾರ್ಥಿನಿಲಯಗಳನ್ನು ಒದಗಿಸುವ ಅವಶ್ಯಕತೆ ಇದೆ. ಇದಕ್ಕಾಗಿ ರೂ.10 ಕೋಟಿ ಒದಗಿಸಲಾಗುವುದು.

242. ಧಾರವಾಡ, ಗುಲ್ಬರ್ಗ, ಉಡುಪಿ ಮತ್ತು ಮೈಸೂರು ನಗರಗಳಲ್ಲಿ ಸ್ಟೇಡಿಯಂ ನವೀಕರಣ ಮತ್ತು ಟ್ರ್ಯಾಕ್ ಸ್ಥಾಪನೆಗಾಗಿ ರೂ.10 ಕೋಟಿ ಅನುದಾನ ಒದಗಿಸಲಾಗುವುದು.

243. ಕೊಡಗು ಜಿಲ್ಲೆಯಲ್ಲಿ ಹಾಕಿ ಟರ್ಫ್ ಸ್ಥಾಪಿಸಲು ರೂ.2 ಕೋಟಿ ಅನುದಾನ ನೀಡಲಾಗುವುದು.

244. ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಅಧಿಕೃತವಾಗಿ ಭಾಗವಹಿಸಲು ಆಯ್ಕೆಯಾಗುವ ರಾಜ್ಯದ ಕ್ರೀಡಾಪಟುಗಳಿಗೆ ರೂ.50,000 ಪ್ರೋತ್ಸಾಹ ಧನ ನೀಡಲಾಗುವುದು.

245. ರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆಯುವ ರಾಜ್ಯದ ಕ್ರೀಡಾ ಪಟುಗಳಿಗೆ ರೂ.1 ಲಕ್ಷ, ದ್ವಿತೀಯ ಸ್ಥಾನ ಪಡೆಯುವವರಿಗೆ ರೂ.50,000 ಮತ್ತು ತೃತೀಯ ಸ್ಥಾನ ಪಡೆಯುವವರಿಗೆ ರೂ.25,000 ಪ್ರೋತ್ಸಾಹ ಧನ ನೀಡಲಾಗುವುದು.

246. ಪೈಲ್ವಾನರಿಗೆ ನೀಡುತ್ತಿರುವ ಮಾಸಾಶನವನ್ನು ರೂ.750ಕ್ಕೆ ಹೆಚ್ಚಿಸಲಾಗುವುದು.

## ಅರಣ್ಯ

247. ರಾಜ್ಯದಲ್ಲಿ ಹೆಚ್ಚಿನ ಅರಣ್ಯೀಕರಣವನ್ನು ಪ್ರೋತ್ಸಾಹಿಸಲು ಈ ವರ್ಷ ಸುಮಾರು 80000 ಹೆಕ್ಟೇರ್ ಗುರಿಯನ್ನು ಹೊಂದಿದ್ದೇವೆ. ಈ ಅರಣ್ಯೀಕರಣಗೊಳಿಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಹೆಚ್ಚಿನ ಜನಕ್ಕೆ ಉದ್ಯೋಗ ಒದಗಿಸುವ ಮೂಲಕ ಅರಣ್ಯೀಕರಣ ಕೆಲಸವನ್ನು ಮಾಡಲು ಉದ್ದೇಶಿಸಿದೆ. ಪಶ್ಚಿಮ ಘಟ್ಟಗಳ ಕಾರ್ಯಪಡೆ ಮತ್ತು ಜೈವಿಕ ಇಂಧನ ಕಾರ್ಯಪಡೆಗಳು ಲಕ್ಷ ವೃಕ್ಷ – ಆಂದೋಲನ ಕಾರ್ಯಕ್ರಮದ ಮೂಲಕ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಅಗತ್ಯವಿರುವ ಸಸಿಗಳನ್ನು ನೀಡಲಾಗುವುದು. ಇದಕ್ಕಾಗಿ ರೂ.20 ಕೋಟಿ ವಿನಿಯೋಗಿಸಲಾಗುವುದು.

248. ಈ ವರ್ಷ ಶ್ರೀಗಂಧದ ಅಭಿವೃದ್ಧಿ, ಸಮೃದ್ಧ ಹಸಿರು ಗ್ರಾಮ, ಔಷಧಿ ಉಪಯುಕ್ತ ಪ್ರದೇಶಗಳ ಅಭಿವೃದ್ಧಿ, ದೇವರ ಕಾಡು ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಕ್ರಮ ಕೈಗೊಳ್ಳಲಾಗುವುದು.

249. ರಾಜ್ಯದ ವಿವಿಧೆಡೆ ಆನೆಗಳ ಪಾರ್ಕ್‌ಗಳನ್ನು ಸ್ಥಾಪಿಸಲು ರೂ.5 ಕೋಟಿ ಒದಗಿಸಲಾಗುವುದು. ಈಗಾಗಲೆ ಇಂತಹ ಪಾರ್ಕ್‌ಗಳು ಶ್ರೀಲಂಕಾ, ಥೈಲ್ಯಾಂಡ್

ಮತ್ತು ಕೇರಳ ಗಳಲ್ಲಿ ಚಾಲ್ತಿಯಲ್ಲಿದೆ. ಹೀಗೆ ಮಾಡುವುದರಿಂದ ಈಗ ನಡೆಯುತ್ತಿರುವ ಮನುಷ್ಯರ ಮತ್ತು ಬೆಳೆಗಳ ಮೇಲಿನ ದಾಳಿಯನ್ನು ತಪ್ಪಿಸಬಹುದು ಹಾಗೂ ಇದರಿಂದಾಗುವ ನಷ್ಟವನ್ನು ಕಡಿಮೆ ಮಾಡಬಹುದು.

250. ಹುಬ್ಬಳ್ಳಿ – ಕಲಘಟಕಿ ನಡುವೆ 2000 ಎಕರೆ ಅರಣ್ಯ ಪ್ರದೇಶದಲ್ಲಿ ವನ್ಯಪ್ರಾಣಿ ಧಾಮವನ್ನು ಅಭಿವೃದ್ಧಿಪಡಿಸಲಾಗುವುದು.

**ಸರ್ಕಾರಿ ನೌಕರರ ಮನೆಬಾಡಿಗೆ ಭತ್ಯೆ ಹೆಚ್ಚಳ**

251. ರಾಜ್ಯ ಸರ್ಕಾರದ ನೌಕರರ ಮನೆಬಾಡಿಗೆ ಭತ್ಯೆಯನ್ನು ಹೆಚ್ಚಿಸಬೇಕೆಂಬ ಮನವಿಯನ್ನು ಪರಿಗಣಿಸಿದ್ದು ಮನೆಬಾಡಿಗೆ ಭತ್ಯೆಯ ದರಗಳನ್ನು 'ಎ' ವರ್ಗದ ನಗರಗಳಲ್ಲಿ ಶೇ. 20ಕ್ಕೆ, 'ಬಿ' ವರ್ಗದ ನಗರಗಳಲ್ಲಿ ಶೇ. 15ಕ್ಕೆ, 'ಸಿ', 'ಡಿ', ಮತ್ತು 'ಇ' ವರ್ಗದ ಸ್ಥಳಗಳಲ್ಲಿ ಕ್ರಮವಾಗಿ ಶೇ. 9, 6, ಮತ್ತು 5ಕ್ಕೆ ಹೆಚ್ಚಿಸಲಾಗುವುದು.

252. ಹತ್ತು ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿರುವ ದಿನಗೂಲಿ ನೌಕರರಿಗೆ ತಿಂಗಳಿಗೆ ರೂ. 1000 ದವರೆಗೆ ಹೆಚ್ಚಿಸಲಾಗುವುದು.

**ಆಡಳಿತ ಸುಧಾರಣೆಯಲ್ಲಿ ಅನುಷ್ಠಾನ ಪರ್ವ**

253. ರಾಜ್ಯ ಸರ್ಕಾರವು ಈಗಾಗಲೇ ಇತರ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆಯನ್ನು ಸಂಗ್ರಹಿಸುತ್ತಿದ್ದು, ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪ್ರತಿವರ್ಷವೂ ಬೃಹತ್ ಪ್ರಮಾಣದ ಯೋಜನಾ ವೆಚ್ಚವನ್ನು ಮಾಡುತ್ತಿದೆ. ಸರ್ಕಾರದ ವೆಚ್ಚವನ್ನು ಅತಿ ಹೆಚ್ಚು ಫಲಿತಾಂಶ ನೀಡುವ ಕಾರ್ಯಕ್ರಮಗಳಲ್ಲಿ ಕೇಂದ್ರೀಕರಿಸುವುದು ಮತ್ತು ಸಂಪನ್ಮೂಲಗಳನ್ನು ಹೆಚ್ಚು ದಕ್ಷತೆಯಿಂದ ಬಳಸುವುದು ಅವಶ್ಯಕವಾಗಿದೆ. ನಾವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪದ್ಧತಿಯ ಗುಣಮಟ್ಟವನ್ನು ಉತ್ತಮಪಡಿಸುವುದಲ್ಲದೆ, ದಕ್ಷತೆಯಿಂದ ಮತ್ತು ಹೆಚ್ಚು ಜವಾಬ್ದಾರಿಯಿಂದ ಕಾರ್ಯಪ್ರವೃತ್ತರಾಗಬೇಕಾಗಿದೆ. ಇದಕ್ಕಾಗಿ ರಾಜ್ಯದ ಆಡಳಿತದಲ್ಲಿ ಅನುಷ್ಠಾನ ಪರ್ವವನ್ನು ಪ್ರಾರಂಭಿಸಬೇಕಾಗಿದೆ.

- ಸರ್ಕಾರದ ಕಾರ್ಯಕ್ರಮಗಳಲ್ಲಿ ಆಗುವ ವೆಚ್ಚವನ್ನು ಪರಿಶೀಲಿಸಿ ಕಡಿಮೆ ಪರಿಣಾಮಕಾರಿಯಾದ ಕಾರ್ಯಕ್ರಮಗಳ ವೆಚ್ಚವನ್ನು ತಗ್ಗಿಸಿ ಹೆಚ್ಚು ಪರಿಣಾಮಕಾರಿಯಾದ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು

ಕ್ರೋಢೀಕರಿಸುವ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ದಕ್ಷತೆಯನ್ನು ಹೆಚ್ಚಿಸುವ ಅಗತ್ಯವಿದೆ. ಇದಕ್ಕಾಗಿ ಸೂಕ್ತ ಕಾರ್ಯನೀತಿಯನ್ನು ಸಲಹೆ ಮಾಡಲು ತಜ್ಞರನ್ನೊಳಗೊಂಡ ವೆಚ್ಚ ಸುಧಾರಣಾ ಆಯೋಗ (Expenditure Reforms Commission)ವೊಂದನ್ನು ರಚಿಸಲಾಗುವುದು.

- ಪ್ರತಿಯೊಂದು ಇಲಾಖೆಯ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಮುಖ್ಯಸ್ಥನು ತನ್ನ ಇಲಾಖೆಯ ಕಾರ್ಯಕ್ರಮಗಳ ಕಾಲಬದ್ಧ ಅನುಷ್ಠಾನಕ್ಕಾಗಿ ವೇಳಾಪಟ್ಟಿಯನ್ನು ವರ್ಷದ ಮೊದಲ ಪಾಕ್ಷಿಕದಲ್ಲಿ ಸಲ್ಲಿಸಬೇಕು. ಇದರೊಡನೆ ಕಾರ್ಯಕ್ರಮಗಳ ಕ್ರಮಬದ್ಧ ಅನುಷ್ಠಾನಕ್ಕಾಗಿ ಸರ್ಕಾರದಿಂದ ನಿರೀಕ್ಷಿಸಿರುವ ಕ್ರಮಗಳನ್ನು ನಮೂದಿಸಬೇಕು. ಇದಕ್ಕಾಗಿ ಈಗಾಗಲೇ ರೂಪಿಸಿರುವ ಎಂಪಿಕ್ (MPIC) ನಮೂನೆಯನ್ನು ಉಪಯೋಗಿಸಬೇಕು.

- ಕಾಮಗಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳು (ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿ ಇತ್ಯಾದಿ) ತಮ್ಮ ವರ್ಷದ ಕಾರ್ಯಕ್ರಮಪಟ್ಟಿ ಮತ್ತು ಕ್ರಿಯಾ ಯೋಜನೆಗಳನ್ನು ಏಪ್ರಿಲ್ ಅಂತ್ಯದೊಳಗೆ ಸಿದ್ಧಪಡಿಸಿ ಅನುಮೋದನೆಯನ್ನು ಪಡೆಯಬೇಕು.

- ಪ್ರತಿಯೊಂದು ಕಾಮಗಾರಿಯ ವಿವರವಾದ ಅಂದಾಜು ಪಟ್ಟಿಯನ್ನು ಕ್ರಿಯಾಯೋಜನೆ/ಅಪೆಂಡಿಕ್ಸ್-ಇ ಅನುಮೋದಿಸಿದ ಒಂದು ತಿಂಗಳೊಳಗಾಗಿ ಸಿದ್ಧಪಡಿಸಬೇಕು. ಅಗತ್ಯವಿದ್ದಲ್ಲಿ ಅಂದಾಜು ಪತ್ರಿಕೆ / ಟೆಂಡರ್ ದಾಖಲೆಗಳನ್ನು ಹೊರಗಿನ ತಜ್ಞರಿಂದ ಸಿದ್ಧಪಡಿಸಬಹುದು.

- ಪ್ರತಿಯೊಂದು ಕಾಮಗಾರಿಯ ಪ್ರಾರಂಭದಲ್ಲಿಯೇ ಅನುಷ್ಠಾನದ ಸಮಯವನ್ನು ಗಮನದಲ್ಲಿಟ್ಟು ಅಗತ್ಯವಿರುವ ಅನುದಾನವನ್ನು ಒದಗಿಸಬೇಕು. ರೂ. 5 ಕೋಟಿಗಿಂತ ಕಡಿಮೆ ವೆಚ್ಚದ ಕಾಮಗಾರಿಗಳಿಗೆ ಮೊದಲನೆಯ ವರ್ಷದಲ್ಲಿ ಕನಿಷ್ಟ ಶೇ.40 ರಷ್ಟು ಮತ್ತು 2ನೆಯ ವರ್ಷದಲ್ಲಿ ಶೇ.60 ರಷ್ಟು ಒದಗಿಸಿ ಕಡ್ಡಾಯವಾಗಿ ಅವುಗಳನ್ನು ಪೂರ್ಣಗೊಳಿಸಬೇಕು.

- ಚಾಲ್ತಿಯಲ್ಲಿರುವ / ಮುಂದುವರೆದ ಕಾಮಗಾರಿಗಳಿಗೆ ಆಯಾವರ್ಷದಲ್ಲಿ ಅಗತ್ಯವಾದ ಪೂರ್ಣ ಅನುದಾನವನ್ನು ಮೀಸಲಾಗಿಟ್ಟು ಉಳಿದ ಅನುದಾನದಲ್ಲಿ ಮಾತ್ರ ಹೊಸ ಕಾಮಗಾರಿಗಳನ್ನು ಅನುಮೋದಿಸಬೇಕು.

- ಪ್ರತಿಯೊಂದು ಇಲಾಖೆಯಲ್ಲಿ ವಿವಿಧ ಹಂತಗಳ ಅಧಿಕಾರಿಗಳ ಹಣಕಾಸಿನ ಅಧಿಕಾರಗಳನ್ನು ಹೆಚ್ಚಿಸಿ ಏಪ್ರಿಲ್ 15ರೊಳಗೆ ಆದೇಶಗಳನ್ನು ಹೊರಡಿಸಲಾಗುವುದು. ಇಲಾಖಾ ಮಟ್ಟದಲ್ಲಿ ಹೆಚ್ಚಿನ ಅಧಿಕಾರವನ್ನು ಉಪಯೋಗಿಸಲು ಇಲಾಖಾ ಸಮಿತಿಗಳನ್ನು ರಚಿಸಲಾಗುವುದು.

- ಪ್ರತಿಯೊಂದು ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವಸ್ತುನಿಷ್ಠ ರೀತಿಯಲ್ಲಿ ವರದಿ ಮಾಡಲು ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ 'ಅನುಷ್ಠಾನ ಆಡಿಟ್' (Performance Audit) ನಡೆಸಲು ಸೂಕ್ತ ಸಂಸ್ಥೆ / ವ್ಯಕ್ತಿಗಳನ್ನು ಗುರುತಿಸಬೇಕು. ಆಡಿಟ್ ವರದಿಯನ್ನು ವರ್ಷದ ಮಧ್ಯಂತರದಲ್ಲಿ ಮತ್ತು ವರ್ಷಾಂತ್ಯದಲ್ಲಿ ಸಿದ್ಧಪಡಿಸಬೇಕು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಚಟುವಟಿಕೆಯನ್ನು ಗುಣನಿಯಂತ್ರಣ ಕಾರ್ಯಪಡೆಯ ನೇತೃತ್ವದಲ್ಲಿ ಮಾಡಲಾಗುವುದು.

- ಪ್ರತಿಯೊಂದು ಇಲಾಖೆಯಲ್ಲಿ ಪ್ರತಿವರ್ಷವೂ ಕನಿಷ್ಠ ಶೇ.10 ರಷ್ಟು ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕನಿಷ್ಟ ಮೂರು ದಿನಗಳ ತರಬೇತಿ ನೀಡಲಾಗುವುದು. ಇದಕ್ಕಾಗಿ ಇಲಾಖೆಗಳು ವಿವರವಾದ ಕಾರ್ಯಕ್ರಮಗಳನ್ನು ರೂಪಿಸಬೇಕು.

- ಪ್ರತಿಯೊಂದು ಕಾರ್ಯಕ್ರಮದ ಅನುಷ್ಠಾನದಲ್ಲಿ ನಿರೀಕ್ಷಿಸಿದ ಸಾಧನೆಗಳನ್ನು ನಮೂದಿಸಬೇಕು. ಹೆಚ್ಚಿನ ಸಾಧನೆ ಮಾಡಿದ ಅಧಿಕಾರಿ / ಸಿಬ್ಬಂದಿಗಳಿಗೆ ಪ್ರೋತ್ಸಾಹಕ ಬಹುಮಾನಗಳ ಯೋಜನೆಯನ್ನು ಜಾರಿಗೆ ತರಬೇಕು. ಸಾಧನೆಯಲ್ಲಿ ಕೊರತೆ ತೋರಿಸುವ ಅಧಿಕಾರಿಗಳ ವಿರುದ್ಧ ಕಡ್ಡಾಯ ನಿವೃತ್ತಿಯನ್ನು ಒಳಗೊಂಡಂತೆ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು.

- ಇಲಾಖೆಗಳ ಮಂತ್ರಿಗಳು ಹಾಗೂ ಇಲಾಖಾ ಮುಖ್ಯಸ್ಥರು ವಿಧಾನ ಮಂಡಲದ ಅಧಿವೇಶನದ ಸಂದರ್ಭವನ್ನು ಹೊರತುಪಡಿಸಿ ಪ್ರತಿ

ವಾರದಲ್ಲಿ ಕನಿಷ್ಟ ಮೂರು ದಿನಗಳ ಕಾಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನವನ್ನು ತಪಾಸಣೆ ಮಾಡಬೇಕು.

- ಸರ್ಕಾರಿ ಸ್ವಾಮ್ಯದ ನಿಗಮಗಳು ಮತ್ತು ನಗರ ಪಾಲಿಕೆಗಳು ಪ್ರತಿ ಮೂರು ವರ್ಷಕ್ಕೊಮ್ಮೆ ತಾವು ಸಾಧಿಸಬಹುದಾದ ಗುರಿಗಳನ್ನು ಮತ್ತು ಸರಕಾರ / ಸಂಬಂಧಪಟ್ಟ ಇಲಾಖೆಯಿಂದ ಪಡೆಯಬೇಕಾದ ನೆರವನ್ನು ನಮೂದಿಸಿ ಒಡಂಬಡಿಕೆಯನ್ನು (MoU) ಮಾಡಿಕೊಳ್ಳಬೇಕು.
- ವರ್ಗಾವಣೆಗಳ ನೀತಿಯನ್ನು ಪರಿಷ್ಕರಿಸಿ ವಿವಿಧ ಹಂತಗಳಿಗೆ ಅಧಿಕಾರವನ್ನು ವರ್ಗಾಯಿಸಲಾಗುವುದು. ಇದಕ್ಕಾಗಿ ಪ್ರತ್ಯೇಕ ಅಧಿನಿಯಮವನ್ನು ರಚಿಸಲಾಗುವುದು.
- ಆಡಳಿತದಲ್ಲಿ ನೂತನ ವಿಚಾರಗಳ ಪ್ರಯೋಗಗಳನ್ನು ಪ್ರೋತ್ಸಾಹಿಸಲು ರೂ.10 ಕೋಟಿಯ ಒಂದು 'ಚಾಲೆಂಜ್ ಫಂಡ್' ಸ್ಥಾಪಿಸಲಾಗುವುದು.
- ಪಂಚಾಯತಿ ರಾಜ್ ಸಂಸ್ಥೆಗಳ ದಕ್ಷತೆಯನ್ನು ಹೆಚ್ಚಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

254. ತಾಲ್ಲೂಕು ಪುನರ್‌ರಚನೆ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ ನೂತನ ತಾಲ್ಲೂಕುಗಳ ರಚನೆಗೆ ಕ್ರಮ ಕೈಗೊಳ್ಳಲಾಗುವುದು.

**ಕಾನೂನು ಆಯೋಗದ ರಚನೆ**

255. ರಾಜ್ಯದ ವಿವಿಧ ಕಾನೂನುಗಳ ಪರಿಷ್ಕರಣೆಗಾಗಿ ಸರ್ಕಾರಕ್ಕೆ ಸಲಹೆ ನೀಡಲು ನ್ಯಾಯಮೂರ್ತಿ ವಿ.ಎಸ್.ಮಳೀಮಠ ಅವರ ನೇತೃತ್ವದಲ್ಲಿ ಕಾನೂನು ಆಯೋಗವನ್ನು ರಚಿಸಲಾಗಿದೆ.

256. ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನ್ಯಾಯಾಲಯಗಳ ಕಟ್ಟಡಗಳ ಅಭಿವೃದ್ಧಿಗೆ ರೂ.25 ಕೋಟಿ ಅನುದಾನ ನೀಡಲಾಗುವುದು.

257. ಹುಬ್ಬಳ್ಳಿಯಲ್ಲಿ ಸ್ಥಾಪಿಸಿರುವ ಕಾನೂನು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ರೂ.10 ಕೋಟಿ ನೀಡಲಾಗುವುದು.

258. ವಕೀಲರ ಸಂಘದ ಕಲ್ಯಾಣ ನಿಧಿಗೆ ಸಹಾಯಧನವಾಗಿ ರೂ.1 ಕೋಟಿ ನೀಡಲಾಗುವುದು.

## ರಾಜ್ಯ ಯೋಜನೆ 2009-10

259. 2008-09ರ ಆಯವ್ಯಯದಲ್ಲಿ ರಾಜ್ಯದ ಯೋಜನಾ ಗಾತ್ರವನ್ನು 25,953 ಕೋಟಿ ರೂ. ಎಂದು ನಿಗದಿ ಮಾಡಲಾಗಿತ್ತು. ನಂತರ ಯೋಜನಾ ಗಾತ್ರವನ್ನು ರೂ.26,188 ಕೋಟಿಗಳಿಗೆ ಪರಿಷ್ಕರಿಸಲಾಗಿದೆ. ಪ್ರತಿಕೂಲ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಂಪನ್ಮೂಲಗಳ ಸಂಗ್ರಹದಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಯವಾಗಿದ್ದರೂ ಸಹ ರಾಜ್ಯದ ಯೋಜನಾ ವೆಚ್ಚವನ್ನು, ಅದರಲ್ಲಿಯೂ ವಿಶೇಷವಾಗಿ ಬಂಡವಾಳ ಶೀರ್ಷಿಕೆಗಳ ವೆಚ್ಚವನ್ನು 2007-08ರ ಸಾಲಿನ ವೆಚ್ಚಕ್ಕಿಂತಲೂ ಗಣನೀಯವಾಗಿ ಹೆಚ್ಚಿನ ಪ್ರಮಾಣದಲ್ಲಿ ನಿರ್ವಹಿಸಲು ಸರ್ಕಾರವು ಕಂಕಣಬದ್ಧವಾಗಿದೆ. ರಾಜ್ಯದ ಯೋಜನಾ ವೆಚ್ಚವು 2006-07ರಲ್ಲಿ ರೂ.18,308.69 ಕೋಟಿ, 2007-08ರಲ್ಲಿ ರೂ17,226.91 ಕೋಟಿ ಇದ್ದದ್ದು, 2008-09ರಲ್ಲಿ ರೂ.22,118.21 ಕೋಟಿ ಆಗುವ ನಿರೀಕ್ಷೆಯಿದ್ದು ಇದು ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಸರ್ಕಾರವು ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ರಾಜ್ಯದ ವಿವಿಧ ಕ್ಷೇತ್ರಗಳ ಆರ್ಥಿಕ ಪುನಃಶ್ಚೇತನದ ದೃಷ್ಟಿಯಿಂದ 2009-10ನೆಯ ಸಾಲಿನಲ್ಲಿಯೂ ನಮ್ಮ ಯೋಜನಾ ವೆಚ್ಚವನ್ನು ಸೂಕ್ತ ರೀತಿಯಲ್ಲಿ ಹೆಚ್ಚಿಸುವುದು ಅನಿವಾರ್ಯವಾಗಿದೆ. ಮುಂದಿನ ವರ್ಷದಲ್ಲಿ ರಾಜ್ಯದ ಯೋಜನಾ ವೆಚ್ಚವನ್ನು ರೂ.29,500 ಕೋಟಿಗಳಿಗೆ (ಅನುಬಂಧ-I) ಹೆಚ್ಚಿಸಲು ಆಯವ್ಯಯದಲ್ಲಿ ಅವಕಾಶ ಮಾಡಿದೆ.

## ತೆರಿಗೆ ಪ್ರಸ್ತಾವನೆಗಳು

260. 2008-09ರ ಆಯವ್ಯಯದಲ್ಲಿ ರಾಜ್ಯದ ಸ್ವಂತ ತೆರಿಗೆ ವರಮಾನವು ಸುಮಾರು ರೂ.31,876 ಕೋಟಿ ಆಗುವುದೆಂದು ಅಂದಾಜು ಮಾಡಿದ್ದು, ಈಗಾಗಲೇ ಪ್ರಸ್ತಾಪಿಸಿದ ಹಲವು ಕಾರಣಗಳಿಂದಾಗಿ ತೆರಿಗೆ ಸಂಗ್ರಹದಲ್ಲಿ ಸುಮಾರು ರೂ.3,111 ಕೋಟಿ ಕಡಿಮೆಯಾಗುವ ನಿರೀಕ್ಷೆಯಿದೆ. ಈ ರೀತಿಯ ಕೊರತೆಯು ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹದಲ್ಲಿಯೇ ಅಲ್ಲದೆ, ಬಹುತೇಕ ರಾಜ್ಯಗಳ ತೆರಿಗೆ ಆದಾಯದಲ್ಲಿಯೂ ಸಹ ತಲೆದೋರಿರುವುದು ಸದ್ಯದ ರಾಷ್ಟ್ರವ್ಯಾಪಿ ಆರ್ಥಿಕ ಪರಿಸ್ಥಿತಿಗೆ ಸಾಕ್ಷಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಸಹ ರಾಜ್ಯವು 2008-09ನೇ ಸಾಲಿನಲ್ಲಿ

ಸಂಗ್ರಹಿಸಲಿರುವ ತೆರಿಗೆ ವರಮಾನವು 2007–08ನೆಯ ಸಾಲಿನ ತೆರಿಗೆ ವರಮಾನಕ್ಕಿಂತಲೂ ಸುಮಾರು ಶೇ.10.7 ರಷ್ಟು ಹೆಚ್ಚಾಗಲಿದೆ. ಇದು ನಮ್ಮ ತೆರಿಗೆ ಇಲಾಖೆಗಳು ದಕ್ಷತೆಯಿಂದ ಕರ್ತವ್ಯ ನಿರ್ವಹಣೆ ಮಾಡಿರುವುದಕ್ಕೆ ಸಾಕ್ಷಿಯಾಗಿದೆಯೆಂದು ಹೇಳಲು ಇಚ್ಛಿಸುತ್ತೇನೆ.

## ವಾಣಿಜ್ಯ ತೆರಿಗೆಗಳು

261. 2009–10ನೆಯ ಸಾಲಿನಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಒಳಗೊಂಡಂತೆ ಹಲವು ವಾಣಿಜ್ಯ ತೆರಿಗೆಗಳ ಮೂಲದಿಂದ ಒಟ್ಟು ರೂ.20,125 ಕೋಟಿ ಸಂಗ್ರಹವಾಗುವುದೆಂದು ಅಂದಾಜು ಮಾಡಲಾಗಿದೆ. ರಾಜ್ಯದ ವಾಣಿಜ್ಯ ಹಾಗೂ ಕೈಗಾರಿಕೋದ್ಯಮಿಗಳೊಡನೆ ನಡೆಸಿರುವ ಚರ್ಚೆಗಳ ಹಿನ್ನೆಲೆಯಲ್ಲಿ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಸದ್ಯ ಜಾರಿಯಲ್ಲಿರುವ ತೆರಿಗೆ ದರಗಳಲ್ಲಿ ಈ ಕೆಳಕಂಡಂತೆ ಬದಲಾವಣೆಗಳನ್ನು ಮಾಡಲು ಉದ್ದೇಶಿಸಿದೆ.

## ಮೌಲ್ಯವರ್ಧಿತ ತೆರಿಗೆ

262. ರಾಜ್ಯದಲ್ಲಿ ಪ್ರಚಲಿತವಿರುವ ಮೌಲ್ಯವರ್ಧಿತ ತೆರಿಗೆ ದರಗಳು ದೇಶದ ಎಲ್ಲ ರಾಜ್ಯಗಳು ಒಪ್ಪಿ ಅಳವಡಿಸಿಕೊಂಡಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯ ಚೌಕಟ್ಟಿಗೆ ಅನುಗುಣವಾಗಿದ್ದು, ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಲು ಸೀಮಿತ ಅವಕಾಶವಿರುತ್ತದೆ. ರಾಜ್ಯದಲ್ಲಿ ಆಹಾರ ಧಾನ್ಯಗಳಾದ ಭತ್ತ, ಅಕ್ಕಿ, ಗೋಧಿ, ಬೇಳೆ ಮುಂತಾದುವುಗಳ ಮೇಲೆ ಈಗ ಮೌಲ್ಯವರ್ಧಿತ ತೆರಿಗೆಯ ವಿನಾಯಿತಿ ಜಾರಿಯಲ್ಲಿದ್ದು ಈ ವಿನಾಯಿತಿಯನ್ನು 1.4.2009ರಿಂದ ಒಂದು ವರ್ಷದವರೆಗೆ ವಿಸ್ತರಿಸಲಾಗುವುದು.

- ನಮ್ಮ ರಾಜ್ಯದ ಕೃಷಿ ಮತ್ತು ಅರಣ್ಯ ಉತ್ಪನ್ನಗಳಾದ ಹುಣಸೇಹಣ್ಣು, ಸೀಗೇಕಾಯಿಗಳ ಮೇಲೆ ಈಗ ವಿಧಿಸಲಾಗುತ್ತಿರುವ ಶೇ.4 ತೆರಿಗೆಯನ್ನು ಶೇ.2ಕ್ಕೆ ಇಳಿಸಲಾಗುವುದು;
- ತೆಂಗಿನಕಾಯಿ, ಒಣಕೊಬ್ಬರಿ ಮತ್ತು ಕೊಬ್ಬರಿಯ ಪುಡಿಯು (Desiccated Coconut Powder) ಮೇಲಿನ ತೆರಿಗೆಯನ್ನು ಶೇ.2ಕ್ಕೆ ಇಳಿಸಲಾಗುವುದು;
- ಅಡಿಕೆ ಮೇಲಿನ ತೆರಿಗೆಯನ್ನು ಶೇ.4ರಿಂದ ಶೇ.2ಕ್ಕೆ ಇಳಿಸಲಾಗುವುದು;

- ಬಜೆ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ರದ್ದು ಮಾಡಲಾಗುವುದು;
- ರೂ.100 ಮತ್ತು ಅದಕ್ಕಿಂತಲೂ ಕಡಿಮೆ ಬೆಲೆಯ ಪಾದರಕ್ಷೆಗಳ ಮೇಲಿನ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗುವುದು;
- ಈಗಾಗಲೇ ರಕ್ಷಣಾ ಪಡೆಗಳ ಯೋಧರಿಗೆ ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟಮೆಂಟ್ ಮೂಲಕ ಮಾರಾಟ ಮಾಡುವ 12 ಬಗೆಯ ಅಗತ್ಯ ವಸ್ತುಗಳಿಗೆ ಶೇ.4ರ ತೆರಿಗೆ ರಿಯಾಯಿತಿ ನೀಡಲಾಗಿದೆ. ಅವುಗಳಲ್ಲದೆ ಇನ್ನೂ ಕೆಲವು ನಿತ್ಯೋಪಯೋಗಿ ವಸ್ತುಗಳಾದ ಪ್ರಸಾಧನ ವಸ್ತುಗಳು ಮತ್ತು ಟೆಲಿವಿಷನ್ ಸೆಟ್‌ಗಳು, ವಾಷಿಂಗ್ ಮೆಷಿನ್‌ಗಳಂತಹ ಗೃಹಬಳಕೆಯ ವಸ್ತುಗಳ ಮೇಲೆ ಕೂಡ ಶೇ.4ರ ತೆರಿಗೆ ರಿಯಾಯಿತಿ ನೀಡಲು ನಾನು ಉದ್ದೇಶಿಸಿರುತ್ತೇನೆ.
- ಟೈರ್ ರಿಟ್ರೇಡಿಂಗ್‌ನಲ್ಲಿ ಉಪಯೋಗಿಸುವ ಎಲ್ಲಾ ತರಹದ ಟ್ರೆಡ್‌ರಬ್ಬರ್ ಮೇಲೆ ಶೇ.4ರ ತೆರಿಗೆ ರಿಯಾಯಿತಿ ನೀಡಲು ನಾನು ಉದ್ದೇಶಿಸಿರುತ್ತೇನೆ.

**ಮಾರಾಟ ತೆರಿಗೆ**

263. ಮೀನುಗಾರರು ದೋಣಿಗಳಲ್ಲಿ ಬಳಸುವ ಡೀಸೆಲ್ ಇಂಧನದ ಮೇಲೆ ಒಟ್ಟು 75,000 ಕಿಲೋ ಲೀಟರ್‌ವರೆಗೆ ಮಾರಾಟ ತೆರಿಗೆ ವಿನಾಯಿತಿ ನೀಡಲಾಗುವುದು.

**ವಿಲಾಸ ತೆರಿಗೆ**

264. ಜಾಗತಿಕ ಆರ್ಥಿಕ ವ್ಯವಸ್ಥೆಯ ಹಿಂಜರಿತದ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮದ ವಹಿವಾಟು ಇಳಿಮುಖವಾಗುತ್ತಿದೆ. ಆದ್ದರಿಂದ ಪ್ರವಾಸೋದ್ಯಮವನ್ನು ಉತ್ತೇಜಿಸಲು ಈ ಕೆಳಗಿನಂತೆ ವಿಲಾಸಿ ತೆರಿಗೆಯಲ್ಲಿ ಬದಲಾವಣೆಗಳನ್ನು ಮಾಡಲು ಉದ್ದೇಶಿಸಿದೆ.

- ಹೋಟೆಲ್‌ಗಳ ಮೇಲಿನ ವಿಲಾಸ ತೆರಿಗೆಯ ವಿನಾಯಿತಿ ಮಿತಿಯನ್ನು ಈಗಿನ ದೈನಂದಿನ ಕೋಣೆ ಬಾಡಿಗೆ ರೂ.149ರಿಂದ ರೂ.499ಕ್ಕೆ ಏರಿಸಲಾಗುವುದು.

- ಹೋಟೆಲ್‌ಗಳಲ್ಲಿ ಕೋಣೆಯ ನಿಗದಿತ ಬಾಡಿಗೆಗೆ ಬದಲಾಗಿ ವಾಸ್ತವಿಕವಾಗಿ ಸ್ವೀಕರಿಸಿದ ಬಾಡಿಗೆ ಮೇಲೆ ವಿಲಾಸ ತೆರಿಗೆ ವಿಧಿಸಲಾಗುವುದು.
- ಹೋಟೆಲ್‌ಗಳ ವಿಲಾಸ ತೆರಿಗೆ ದರಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗುವುದು.

  1) ಕೋಣೆಯ ಬಾಡಿಗೆ ದಿನವೊಂದಕ್ಕೆ ರೂ.500 ರಿಂದ ರೂ. 1000 ದವರೆಗೆ ಶೇ.4 ರಂತೆ;

  2) ಕೋಣೆಯ ಬಾಡಿಗೆ ದಿನವೊಂದಕ್ಕೆ ರೂ. 1000ಕ್ಕಿಂತ ಹೆಚ್ಚು ಮತ್ತು ರೂ.2000ದವರೆಗೆ ಶೇ.6 ರಂತೆ;

  3) ಕೋಣೆಯ ಬಾಡಿಗೆ ದಿನವೊಂದಕ್ಕೆ ರೂ.2000ಕ್ಕೂ ಹೆಚ್ಚು ಇದ್ದಲ್ಲಿ ಶೇ.10 ರಂತೆ;

- ಕಲ್ಯಾಣ ಮಂಟಪಗಳ (Marriage Hall) ಮೇಲೆ ವಿಧಿಸುತ್ತಿರುವ ವಿಲಾಸ ತೆರಿಗೆಯನ್ನು ಶೇ.20 ರಿಂದ ಶೇ.10ಕ್ಕೆ ಇಳಿಸಲಾಗುವುದು;
- ವ್ಯಾಪಾರಿ ಪ್ರದರ್ಶನಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಎಕ್ಸಿಬಿಷನ್ ಹಾಲ್‌ಗಳ ಮೇಲಿನ ವಿಲಾಸಿ ತೆರಿಗೆಯನ್ನು ಶೇ.20 ರಿಂದ ಶೇ.10ಕ್ಕೆ ಇಳಿಸಲಾಗುವುದು;

## ವೃತ್ತಿ ತೆರಿಗೆ

265. ಕಡಿಮೆ ವೇತನ ಪಡೆಯುತ್ತಿರುವ ವ್ಯಕ್ತಿಗಳಿಗೆ ವೃತ್ತಿ ತೆರಿಗೆಯಿಂದ ಪರಿಹಾರ ನೀಡುವ ಅವಶ್ಯಕತೆ ಇದ್ದು ವೃತ್ತಿ ತೆರಿಗೆಯ ವಿನಾಯಿತಿ ಮಿತಿಯನ್ನು ಮಾಸಿಕ ವೇತನ ರೂ. 5,000 ದಿಂದ ರೂ. 10,000ಕ್ಕೆ ಏರಿಸಲು ಉದ್ದೇಶಿಸಿದೆ.

266. ಶೈಕ್ಷಣಿಕ ಸಂಸ್ಥೆಗಳು ನಡೆಸುವ ಪ್ರತಿಯೊಂದು ಶಾಲೆಗೂ ಪ್ರತ್ಯೇಕವಾಗಿ ವೃತ್ತಿ ತೆರಿಗೆ ವಿಧಿಸಲಾಗುತ್ತಿದ್ದು, 12ನೆಯ ತರಗತಿವರೆಗಿನ ಶಾಲೆ – ಕಾಲೇಜುಗಳ ಶಾಖೆಗಳಿಗೆ ವೃತ್ತಿ ತೆರಿಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿರುತ್ತೇನೆ.

## ಮನರಂಜನೆ ತೆರಿಗೆ

267. ಖಾಸಗಿ ಸ್ವಾಮ್ಯದ ಕ್ರೀಡಾ ತಂಡಗಳಿಂದ ಮನರಂಜನೆಗಾಗಿ ನಡೆಸುವ ಕ್ರೀಡೆಗಳ ಪ್ರವೇಶದರದ ಮೇಲೆ ಶೇ.10 ರಂತೆ ಮನರಂಜನೆ ತೆರಿಗೆ ವಿಧಿಸಲಾಗುವುದು.

268. ಚಲನಚಿತ್ರಗಳು ಸಾಮಾನ್ಯ ಜನರ ಪ್ರಮುಖ ಮನರಂಜನೆಯಾಗಿದ್ದು, ಅವರ ಹೊರೆ ಕಡಿಮೆ ಮಾಡಲೋಸುಗ ಚಲನಚಿತ್ರಗಳ ಮೇಲಿನ ಮನರಂಜನಾ ತೆರಿಗೆಯನ್ನು ಶೇ.40 ರಿಂದ ಶೇ.30ಕ್ಕೆ ಇಳಿಸಲು ಉದ್ದೇಶಿಸಿರುತ್ತೇನೆ.

## ರಾಜ್ಯ ಅಬಕಾರಿ

269. ಸಾಮಾಜಿಕ ಕಾರ್ಯಕರ್ತರು, ಮಹಿಳಾ ಸಂಘಟನೆಗಳು, ಮತ್ತು ಹಲವು ಪ್ರಜ್ಞಾವಂತ ನಾಗರೀಕರ ಬೇಡಿಕೆಯಂತೆ 2007ರ ಜುಲೈ ತಿಂಗಳಿನಿಂದ ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸುವ ಚರಿತ್ರಾರ್ಹ ನಿರ್ಧಾರವನ್ನು ಜಾರಿಗೆ ತರಲಾಗಿದೆ. ಇದರಿಂದ ಪ್ರಾರಂಭದ ಹಂತದಲ್ಲಿ ಸಹಜವಾಗಿಯೇ ಸರ್ಕಾರದ ಅಬಕಾರಿ ಆದಾಯದ ಗುರಿಯನ್ನು ಪರಿಷ್ಕರಿಸಲಾಗಿತ್ತು. 2007–08ರಲ್ಲಿ ಅಬಕಾರಿ ಆದಾಯವು ಪರಿಷ್ಕರಿಸಿದ ಗುರಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿದೆ. 2008–09ರಲ್ಲಿಯೂ ಸಹ ರೂ.5,627 ಕೋಟಿ ವಾರ್ಷಿಕ ಗುರಿಯಂತೆ ಅಬಕಾರಿ ಬಾಬಿನಿಂದ ರಾಜಸ್ವದ ಸಂಗ್ರಹ ಆಗಲಿದೆ.

270. ಸಾರಾಯಿ ಮಾರಾಟದ ನಿಷೇಧದ ಪರಿಣಾಮವಾಗಿ ರಾಜ್ಯದಲ್ಲಿ ಭಾರತೀಯ ತಯಾರಿಕಾ ಮದ್ಯ ಹಾಗೂ ವಿದೇಶಿ ಮದ್ಯಗಳ ಮಾರಾಟದಲ್ಲಿ ಗಣನೀಯವಾದ ಏರಿಕೆ ಕಂಡುಬಂದಿದ್ದು, 2009–10ನೆಯ ಸಾಲಿನಲ್ಲಿ ಸರಕಾರಕ್ಕೆ ಇನ್ನೂ ಹೆಚ್ಚಿನ ಅಬಕಾರಿ ಆದಾಯವನ್ನು ರೂಢಿಸಲು ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಒಟ್ಟು ರೂ.6,565 ಕೋಟಿಯನ್ನು ಅಬಕಾರಿ ಮೂಲದಿಂದ ಸಂಗ್ರಹಿಸಲು ಅಂದಾಜು ಮಾಡಿದೆ.

271. ರಾಜ್ಯದಲ್ಲಿ ದ್ರಾಕ್ಷಿ ಬೆಳೆಗಾರರಿಗೆ ಹೆಚ್ಚಿನ ಲಾಭ ಒದಗಿಸಲು ಮತ್ತು ಕಡಿಮೆ ಆಲ್ಕೋಹಾಲ್ ಪ್ರಮಾಣವಿರುವ ದ್ರಾಕ್ಷಾರಸದ ಸೇವನೆಯನ್ನು ಉತ್ತೇಜಿಸುವ ಉದ್ದೇಶದಿಂದ ರಾಜ್ಯದಲ್ಲಿ ನೂತನ ವೈನ್ ನೀತಿಯನ್ನು ಜಾರಿಗೊಳಿಸಲಾಗಿದೆ. 2009–10ರಲ್ಲಿ ವೈನ್ ನೀತಿಯ ವ್ಯಾಪಕ ಅನುಷ್ಠಾನಕ್ಕಾಗಿ ಸರ್ಕಾರವು ಸೂಕ್ತ ಕ್ರಮಗಳನ್ನು ಜಾರಿ ಮಾಡುವುದು.

## ಮುದ್ರಾಂಕ ಮತ್ತು ನೋಂದಣಿ

272. ಜಾಗತಿಕ ಮಟ್ಟದ ಮತ್ತು ರಾಷ್ಟ್ರಮಟ್ಟದ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ರಾಜ್ಯದಲ್ಲಿ ಸ್ಥಿರ ಆಸ್ತಿಗಳ ಮಾರಾಟ ಹಾಗೂ ಪರಭಾರೆ ವಹಿವಾಟಿನಲ್ಲಿ ತೀವ್ರ ಹಿಂಜರಿತ ಉಂಟಾಗಿದೆ. 2006–07ರಲ್ಲಿ ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಒಟ್ಟು 1413185 ದಾಖಲೆಗಳನ್ನು ನೋಂದಾಯಿಸಿ ರೂ.3415.20 ಕೋಟಿಗಳ ರಾಜಸ್ವವನ್ನು ಸಂಗ್ರಹಿಸಿತ್ತು. 2007–08ರಲ್ಲಿ ವಾರ್ಷಿಕ ಗುರಿ ರೂ.3812.55 ಕೋಟಿಗೆ ಪ್ರತಿಯಾಗಿ ರೂ.3630.73 ರಾಜಸ್ವದ ಸಂಗ್ರಹವಾಗಿತ್ತು. 2008–09ರಲ್ಲಿ ಜನವರಿ 2009ರ ಅಂತ್ಯದವರೆಗೆ ಕೇವಲ 870578 ದಾಖಲೆಗಳನ್ನು ನೊಂದಾಯಿಸಲಾಗಿದ್ದು ರೂ2757.97 ಕೋಟಿ ತೆರಿಗೆ ಸಂಗ್ರಹವಾಗಿದೆ. ವರ್ಷಾಂತ್ಯದ ವೇಳೆಗೆ ರೂ.3318 ಕೋಟಿ ರಾಜಸ್ವವು ಸಂಗ್ರಹವಾಗುವ ನಿರೀಕ್ಷೆಯಿದ್ದು 2009–10ರಲ್ಲಿ ಆರ್ಥಿಕ ಚೇತರಿಕೆಯನ್ನು ಅವಲಂಬಿಸಿ ಮುದ್ರಾಂಕ ಮತ್ತು ನೋಂದಣಿ ರಾಜಸ್ವವು ಸ್ವಲ್ಪಮಟ್ಟಿಗೆ ಹೆಚ್ಚಾಗುವ ಸಾಧ್ಯತೆಯಿದೆ. ರಾಜ್ಯದ ವಾಣಿಜ್ಯ ಹಾಗೂ ಕೈಗಾರಿಕೆ ಉದ್ಯಮಗಳ ಹಾಗೂ ಸಾಮಾನ್ಯ ಜನರ ಅಗತ್ಯಗಳನ್ನು ಗಮನದಲ್ಲಿಟ್ಟು ಈ ಕೆಳಕಂಡ ಬದಲಾವಣೆಗಳನ್ನು ಹಾಗೂ ಸುಧಾರಣೆಗಳನ್ನು ಪ್ರಸ್ತಾಪಿಸುತ್ತೇನೆ.

273. ಆರ್ಥಿಕ ಬಿಕ್ಕಟ್ಟಿನ ದೆಸೆಯಿಂದ ಆಸ್ತಿ ವಹಿವಾಟುಗಳ ಪ್ರಮಾಣದಲ್ಲಿ ಕಡಿಮೆಯಾಗಿದ್ದು ಸಾಮಾನ್ಯ ಜನರು ಕೃಷಿ ಜಮೀನು, ಮನೆ, ಅಂಗಡಿ, ಫ್ಲಾಟ್ ಮುಂತಾದುವುಗಳನ್ನು ಖರೀದಿ ಮಾಡಲು ಮತ್ತು ವರ್ಗಾಯಿಸಲು ಅಡಚಣೆಯಾಗಿದೆ. ಇದರಿಂದ ಕಟ್ಟಡ ನಿರ್ಮಾಣದ ಉದ್ಯಮಕ್ಕೂ ಹಿನ್ನಡೆ ಆಗಿದೆ. ಈಗಾಗಲೇ ಮುದ್ರಾಂಕ ಶುಲ್ಕವನ್ನು ಕ್ರಮೇಣ ಶೇ.5ರ ಮಟ್ಟಕ್ಕೆ ಇಳಿಸಬೇಕೆಂಬ ಕೇಂದ್ರ ಸರ್ಕಾರದ ಸೂಚನೆಗೆ ರಾಜ್ಯವು ಒಪ್ಪಿಗೆ ನೀಡಿದ್ದು ಪ್ರಸ್ತುತ ಸಂದರ್ಭದಲ್ಲಿ ಈ ಶುಲ್ಕದ ದರಗಳನ್ನು ಗಣನೀಯವಾಗಿ ಇಳಿಸುವುದು ಸಮರ್ಪಕವಾಗಿದೆ. ಆದ್ದರಿಂದ ಕೃಷಿ ಭೂಮಿಯನ್ನು ಒಳಗೊಂಡಂತೆ ಎಲ್ಲ ಬಗೆಯ ಸ್ಥಿರ ಆಸ್ತಿಗಳ ಮಾರಾಟ ಮತ್ತಿತರ ವರ್ಗಾವಣೆಗಳ ಮೇಲೆ ಮುದ್ರಾಂಕ ಶುಲ್ಕವನ್ನು ಈಗಿನ ಶೇ.7.5ರಿಂದ ಶೇ.6ಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಇದರಿಂದ ರಾಜ್ಯದ ಲಕ್ಷಾಂತರ ಸಾಮಾನ್ಯ ಜನರಿಗೆ ಗಣನೀಯ ಪರಿಹಾರ ದೊರಕುವುದರಲ್ಲಿ ಸಂದೇಹವಿಲ್ಲ. ಅಲ್ಲದೆ, ಇದರಿಂದ ಕಟ್ಟಡ ನಿರ್ಮಾಣದ ಉದ್ಯಮದ ಚೇತರಿಕೆಗೂ ಸಹ ಸಹಾಯವಾಗಬಹುದೆಂದು ಆಶಿಸುತ್ತೇನೆ.

274. ಮೇಲ್ಕಂಡಂತೆ ಗಣನೀಯವಾಗಿ ಮುದ್ರಾಂಕ ಶುಲ್ಕವನ್ನು ಇಳಿಸುವುದರಿಂದ ರಾಜ್ಯದ ಶುಲ್ಕ ಸಂಗ್ರಹದಲ್ಲಿ ಸುಮಾರು ರೂ.400 ಕೋಟಿ ಇಳಿಕೆಯಾಗುವ

ಸಂಭವವಿದೆ. ಸ್ವಲ್ಪಮಟ್ಟಿಗೆ ಈ ಕೊರತೆಯನ್ನು ತುಂಬುವ ಉದ್ದೇಶದಿಂದ ಈ ಕೆಳಗಿನಂತೆ ಮುದ್ರಾಂಕ ಶುಲ್ಕದಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಲು ಉದ್ದೇಶಿಸಿದೆ.

- ಆಸ್ತಿಯ ಸ್ವಾಧೀನವನ್ನು ಒಳಗೊಂಡಿರದ ಒಪ್ಪಂದಗಳಿಗೆ ಈಗಿನ ಮುದ್ರಾಂಕ ಶುಲ್ಕದ ರೂ.10 ರಿಂದ ರೂ.200ಕ್ಕೆ ಬದಲಾಗಿ ಒಪ್ಪಂದದ ಮೌಲ್ಯದ ಶೇ.0.25ನ್ನು ವಿಧಿಸಲಾಗುವುದು;
- ಜಂಟಿ ಡೆವಲಪ್‌ಮೆಂಟ್ ಒಪ್ಪಂದ ಈಗಿನ ಮುದ್ರಾಂಕ ಶುಲ್ಕ ರೂ.10,000 ದಿಂದ ರೂ.1.5 ಲಕ್ಷಕ್ಕೆ ಬದಲಾಗಿ ಮೌಲ್ಯದ ಶೇ.1 ರಷ್ಟು ವಿಧಿಸಲಾಗುವುದು;
- ಮಧ್ಯಸ್ಥಿಕೆ (Arbitration) ಅವಾರ್ಡ್ ಈಗಿನ ಶೇ.5ಕ್ಕೆ ಬದಲಾಗಿ ಶೇ.6ನ್ನು ವಿಧಿಸಲಾಗುವುದು;
- ಸೆಕ್ಯುರಿಟೈಸೇಷನ್ (Securetisation) ಅಡಿಯಲ್ಲಿ ಋಣಭಾರದ ವರ್ಗಾವಣೆಗೆ ನೋಂದಣಿಶುಲ್ಕದಲ್ಲಿ ಈಗಿನ ಶೇ.1ಕ್ಕೆ ಬದಲಾಗಿ ಶೇ.0.5, ರೂ.10,000 ಮಿತಿಗೆ ಒಳಪಟ್ಟು;
- ನಕಲು ನೋಂದಾವಣೆ (Duplicate Registration) ಪ್ರತಿ ನಕಲಿಗೆ ಈಗಿನ ರೂ.50ಕ್ಕೆ ಬದಲಾಗಿ ರೂ.500ರಷ್ಟು ವಿಧಿಸಲಾಗುವುದು;
- ಸ್ಥಿರ ಆಸ್ತಿಯ ಗುತ್ತಿಗೆ (Lease)
    1) ಐದು ವರ್ಷ ಅಥವಾ ಕಡಿಮೆ ಅವಧಿಗೆ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡದ ಮೇಲೆ ಶೇ.1;
    2) ಐದು ವರ್ಷಕ್ಕೆ ಮೇಲ್ಪಟ್ಟು ಹತ್ತು ವರ್ಷದವರೆಗೆ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡದ ಮೇಲೆ ಶೇ.2;
    3) ಹತ್ತು ವರ್ಷಕ್ಕೆ ಮೇಲ್ಪಟ್ಟು ಮೂವತ್ತು ವರ್ಷದವರೆಗೆ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡದ ಮೇಲೆ ಶೇ.4;
    4) ಮೂವತ್ತು ವರ್ಷಕ್ಕೆ ಮೇಲ್ಪಟ್ಟ ಅವಧಿಗೆ ಮಾರುಕಟ್ಟೆ ಬೆಲೆಯ ಶೇ.6;

- ಸ್ಥಿರ ಅಥವಾ ಚರ ಆಸ್ತಿಯ ಮುಂಗಡ ಸಮೇತವಾದ ಲೈಸೆನ್ಸ್‌ಗೆ ವಾರ್ಷಿಕ ಲೈಸೆನ್ಸ್ ಶುಲ್ಕ ಮತ್ತು ಮುಂಗಡ ಮೊತ್ತದ ಮೇಲೆ ಮೇಲಿನಂತೆ ಶುಲ್ಕವನ್ನು ವಿಧಿಸಲಾಗುವುದು;
- ಡೆವಲಪರ್‌ಗಳಿಗೆ ನೀಡುವ ಸ್ಥಿರ ಆಸ್ತಿಯ ಮೇಲಿನ ಸಾಮಾನ್ಯ ಅಧಿಕಾರ ಪತ್ರ (General Power of Attorney) ಶೇ.1, ಇತರ ಪ್ರಕರಣಗಳಲ್ಲಿ ಸಾಮಾನ್ಯ ಅಧಿಕಾರ ಪತ್ರ (General Power of Attorney) ರೂ.200;
- ರಿಲೀಸ್ ಮೂಲಕ ಆಸ್ತಿ ವರ್ಗಾವಣೆಗೆ ಈಗಿನ ಶೇ.2.5 ಮತ್ತು 3.75ರ ಬದಲಾಗಿ ಶೇ.6ರಂತೆ;

275. ಪ್ರಸ್ತಾವಿತ ತಿದ್ದುಪಡಿಗಳ ವಿವರಗಳನ್ನು ಅನುಬಂಧ-IIರಲ್ಲಿ ನೀಡಲಾಗಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖಾ ಸೇವೆಗಳನ್ನು ಸುಗಮಗೊಳಿಸಲು ಕರ್ನಾಟಕ ಮುದ್ರಾಂಕ ಕಾಯ್ದೆ 1957 ಮತ್ತು ಅದರಡಿ ನಿಯಮಾವಳಿಯನ್ನು ಸಮಗ್ರವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಿದೆ.

**ಮೋಟಾರು ವಾಹನ ತೆರಿಗೆಗಳು**

276. 2008-09ನೇ ಸಾಲಿನ ಉತ್ತರಾರ್ಧದಲ್ಲಿ ಮೋಟಾರು ವಾಹನಗಳ ಮಾರುಕಟ್ಟೆಯಲ್ಲಿ ದೇಶದಾದ್ಯಂತ ಗಣನೀಯ ಹಿಂಜರಿತ ಕಂಡುಬಂದಿರುವುದರಿಂದ ಮೋಟಾರು ವಾಹನ ತೆರಿಗೆಗಳ ಸಂಗ್ರಹವೂ ಸಹ ಈ ಸಾಲಿನ ಗುರಿಯಾದ ರೂ.2,218 ಕೋಟಿಗಿಂತ ಕಡಿಮೆ ಅಂದರೆ ಸುಮಾರು ರೂ.1,875 ಕೋಟಿ ಸಂಗ್ರಹವಾಗುವ ನಿರೀಕ್ಷೆಯಿದೆ. ಪೆಟ್ರೋಲ್ ಹಾಗೂ ಡೀಸೆಲ್ ಇಂಧನಗಳ ಬೆಲೆಯಲ್ಲಿ ಇತ್ತೀಚೆಗೆ ಗಣನೀಯ ಪ್ರಮಾಣದ ಇಳಿಕೆಯಾಗಿರುವುದರಿಂದ ಮೋಟಾರು ವಾಹನಗಳ ಮಾರುಕಟ್ಟೆಯಲ್ಲಿ ಮುಂಬರುವ ತಿಂಗಳುಗಳಲ್ಲಿ ಸುಧಾರಣೆ ಕಂಡುಬರುವ ಸಾಧ್ಯತೆಯಿದೆ. 2009-10ರಲ್ಲಿ ಮೋಟಾರು ವಾಹನಗಳ ತೆರಿಗೆಯಿಂದ ರೂ.2,063 ಕೋಟಿ ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ.

277. ಮೇಲ್ಕಂಡ ಹಿನ್ನೆಲೆಯಲ್ಲಿ ಮೋಟಾರು ವಾಹನಗಳ ತೆರಿಗೆ ದರಗಳಲ್ಲಿ ಯಾವುದೇ ಏರಿಕೆಯನ್ನು ಪ್ರಸ್ತಾಪಿಸಿರುವುದಿಲ್ಲ. ಆದರೆ, ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ವಿದ್ಯುತ್ ಚಾಲಿತ ಮೋಟಾರು ವಾಹನಗಳಿಗೆ ಜೀವಾವಧಿ ತೆರಿಗೆಯಲ್ಲಿ ಗಣನೀಯ ರಿಯಾಯಿತಿ ನೀಡುವುದು ಸೂಕ್ತವೆಂದು ಭಾವಿಸುತ್ತೇನೆ. ವಿದ್ಯುತ್

ಚಾಲಿತ ಮೋಟಾರ್ ಕಾರ್, ವ್ಯಾನ್ ಮುಂತಾದುವುಗಳಿಗೆ ಮತ್ತು ದ್ವಿಚಕ್ರ ವಾಹನಗಳಿಗೆ ವಿಧಿಸುವ ತೆರಿಗೆಯನ್ನು ಅವುಗಳ ಮಾರಾಟ ಬೆಲೆಯ ಶೇ.8 ರಿಂದ 12ಕ್ಕೆ ಬದಲಾಗಿ ಶೇ.4ಕ್ಕೆ ಇಳಿಸಲಾಗುವುದು. ಇದರಿಂದ ರಾಜ್ಯದಲ್ಲಿ ಪರಿಸರ ಸ್ನೇಹಿ ವಾಹನ ಸಂಚಾರಕ್ಕೆ ಪ್ರಬಲವಾದ ಪ್ರೋತ್ಸಾಹ ನೀಡಿದಂತಾಗುವುದು.

## ಸಂಪನ್ಮೂಲಗಳ ಸಂಗ್ರಹಣೆ

278. ಮೇಲೆ ಪ್ರಸ್ತಾಪಿಸಿರುವ ತೆರಿಗೆ ರಿಯಾಯಿತಿ ಹಾಗೂ ಸಂಗ್ರಹಣಾ ಕ್ರಮಗಳಿಂದ ರೂ.100 ಕೋಟಿಗಳಷ್ಟು ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣವಾಗಲಿದ್ದು, ಇದಕ್ಕೆ ಪ್ರತಿಯಾಗಿ ರೂ.400 ಕೋಟಿ ರಿಯಾಯತಿಗಳನ್ನು ನೀಡಲಾಗಿರುತ್ತದೆ. 2009–10ರ ಸಾಲಿನಲ್ಲಿ ರಾಜ್ಯದ ಒಟ್ಟು ತೆರಿಗೆ ಆದಾಯವು ರೂ.32,721.25 ಕೋಟಿ ಆಗುವುದೆಂದು ಅಂದಾಜು ಮಾಡಿದೆ.

279. ಇದಲ್ಲದೆ, ಸರ್ಕಾರಿ ಸ್ವಾಮ್ಯದ ನಿಗಮ ಹಾಗೂ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಮರುಪಾವತಿ ಮಾಡುವ ಸಾಮರ್ಥ್ಯವನ್ನು ಅವಲಂಬಿಸಿ ಹಣಕಾಸಿನ ಸಂಸ್ಥೆಗಳಿಂದ ಸಾಲಗಳನ್ನು ಸಂಗ್ರಹಿಸಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಿವೆ. ಇಂತಹ ಸಂಸ್ಥೆಗಳು ಮುಂದಿನ ವರ್ಷದಲ್ಲಿ ಅವರ ಆಂತರಿಕ ಮತ್ತು ಸಾಲಗಳ ಮೂಲಗಳಿಂದ ಒಟ್ಟು ರೂ.6604.05 ಕೋಟಿಗಳನ್ನು ಸಂಗ್ರಹಿಸಬಹುದೆಂದು ಅಂದಾಜು ಮಾಡಲಾಗಿದೆ.

## ಕಾನೂನಿನ ತಿದ್ದುಪಡಿಗಳು

280. ಮೇಲ್ಕಂಡ ತೆರಿಗೆ ಪ್ರಸ್ತಾವನೆಗಳನ್ನು ಹಾಗು ಇತರೆ ಕೆಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಸಂಬಂಧಿತ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಅಲ್ಲದೆ ಭಾರತ ಸರ್ಕಾರವು ಸಲಹೆ ಮಾಡಿರುವಂತೆ 2008–09ನೆಯ ಸಾಲಿನ ವಿತ್ತೀಯ ಕೊರತೆಯ ಶಾಸನಬದ್ಧ ಮಿತಿಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.3.5ಕ್ಕೆ ಏರಿಸಲು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ 2002ಕ್ಕೆ ತಿದ್ದುಪಡಿಯನ್ನು ಮಾಡಬೇಕಾಗಿದೆ. ಅದರಂತೆ, ಅಗತ್ಯವಿರುವ ತಿದ್ದುಪಡಿಗಳನ್ನು ಸದನದ ಮುಂದೆ ಮಂಡಿಸಲಾಗುವುದು.

## ಆಯವ್ಯಯ 2008–09ರ ಪಕ್ಷಿನೋಟ

281. ನಮ್ಮ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಕಾರ್ಯತಂತ್ರಗಳ ಹಿನ್ನೆಲೆಯಲ್ಲಿ ಪರಿಷ್ಕೃತ ಆಯವ್ಯಯವು ಈ ಕೆಳಕಂಡ ಅಂಶಗಳನ್ನು ಒಳಗೊಂಡಿವೆ.

## ಪರಿಷ್ಕೃತ ಅಂದಾಜುಗಳು 2008–09

282. 2008–09ರ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು ರೂ.55,273.95 ಕೋಟಿಗಳೆಂದು ನಿರೀಕ್ಷಿಸಲಾಗಿತ್ತು. ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು ರೂ.53096.81 ಕೋಟಿಗಳಾಗಿದೆ, ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು ರೂ.55,313.41 ಕೋಟಿಗಳಾಗಿತ್ತು. ಈಗ ಪರಿಷ್ಕೃತ ಅಂದಾಜಿನ ರೀತ್ಯಾ ವೆಚ್ಚವು ರೂ.53,143.91 ಕೋಟಿಗಳಾಗಿದೆ. ಸಾರ್ವಜನಿಕ ವೆಚ್ಚದ ನಿವ್ವಳ ಲೆಕ್ಕ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು ರೂ.47.10 ಕೋಟಿಗಳಾಗುವ ನಿರೀಕ್ಷೆಯಿದೆ. 2008–09ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು ರೂ.39.47 ಕೋಟಿಗಳೆಂದು ತೋರಿಸಲಾಗಿತ್ತು.

## ಆಯವ್ಯಯ ಅಂದಾಜುಗಳು 2009–10

283. 2009–10ನೇ ಸಾಲಿನ ಒಟ್ಟು ಜಮೆ ರೂ.58,031.36 ಕೋಟಿಗಳಾಗುವ ನಿರೀಕ್ಷೆಯಿದೆ. ಇದರಲ್ಲಿ ರೂ.48,389.04 ಕೋಟಿಗಳ ರಾಜಸ್ವ ಜಮೆ ಮತ್ತು ರೂ.9,642.32 ಕೋಟಿಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು ರೂ.58,117.23 ಕೋಟಿಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ರೂ.47237.67 ಕೋಟಿಗಳು ರಾಜಸ್ವ ವೆಚ್ಚವಾಗಿದ್ದು ರೂ.10,879.57 ಕೋಟಿಗಳು ಬಂಡವಾಳ ವೆಚ್ಚವಾಗಿವೆ.

284. ಸರ್ಕಾರವು ತೆರಿಗೆ ರಾಜಸ್ವದ ಮೂಲಕ ರೂ.32,721.25 ಕೋಟಿಗಳನ್ನು ಮತ್ತು ತೆರಿಗೆಯೇತರ ರಾಜಸ್ವದ ಮೂಲಕ ರೂ.2,129.50 ಕೋಟಿಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ. ಮಾರುಕಟ್ಟೆ ಸಾಲಗಳಿಂದ ರೂ.6,061.43 ಕೋಟಿಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ನೀಡಿಕೆಗಳಿಂದ ರೂ.13,538.29 ಕೋಟಿಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ.

285. 2008–09ರ ಪರಿಷ್ಕೃತ ಅಂದಾಜುಗಳ ರೀತ್ಯಾ ರಾಜಸ್ವ ಉಳಿಕೆಯು ಮತ್ತು ವಿತ್ತೀಯ ಕೊರತೆಯು ಕ್ರಮವಾಗಿ ರೂ.767.47 ಕೋಟಿ ಮತ್ತು ರೂ.9,356.89 ಕೋಟಿಗಳೆಂದು ಅಂದಾಜು ಮಾಡಲಾಗಿದ್ದು ಇದು ಜಿಎಸ್‌ಡಿಪಿಯ ಶೇ.0.29 ಮತ್ತು ಶೇ.3.49 ಆಗಿರುತ್ತದೆ. 2009–10ರ ರಾಜಸ್ವ ಉಳಿಕೆ ಮತ್ತು ವಿತ್ತೀಯ ಕೊರತೆಯನ್ನು ಕ್ರಮವಾಗಿ ರೂ.1,151.37 ಕೋಟಿಗಳೆಂದು ಮತ್ತು ರೂ.8,493.49 ಕೋಟಿಗಳೆಂದು ಅಂದಾಜಿಸಲಾಗಿದ್ದು ಇದು ಅನುಕ್ರಮವಾಗಿ ಜಿಎಸ್‌ಡಿಪಿಯ ಶೇ.0.39

ಮತ್ತು ಶೇ.2.88 ಎಂದು ಅಂದಾಜಿಸಿಲಾಗಿದೆ. ಇದು ಈಗಾಗಲೇ ಪ್ರಸ್ತಾಪಿಸಿರುವ ತಿದ್ದುಪಡಿಯನ್ನು ಒಳಗೊಂಡಂತೆ 2002ನೇ ಇಸವಿಯ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ಅನುಗುಣವಾಗಿದೆ.

**"ನನಗಿಲ್ಲ ನಾನೊಬ್ಬನೇ ಬದುಕುವ ದಾಹ**
**ನಾಳೆ ಬೆಳೆದೀತು ಹೊಸ ಮಣ್ಣಿನಲ್ಲಿ ಬೇರೂರಿ**
**ನನ್ನಲ್ಲಿರುವ ಒಳಿತೇನಾದರೂ**
**ಕೊಂಬೆ ರೆಂಬೆಗೆ ಪುಟಿದು ಹೊಸ ಹೂವು ಚಿಗುರು"**

– *ಜಿ.ಎಸ್.ಎಸ್.*

286. ರಾಷ್ಟ್ರಕವಿ ಡಾಃ ಜಿ.ಎಸ್. ಶಿವರುದ್ರಪ್ಪ ಅವರು ಸ್ವಾರ್ಥದಿಂದ ಹೊರತಾದ ಹೊಸ ಹುಟ್ಟು ಮತ್ತು ಆಶಯಗಳ ಬಗ್ಗೆ ಹೇಳಿರುವ ಕಾವ್ಯದ ಈ ಸಾಲುಗಳು ಸಮಷ್ಠಿ ಹಿತ ರಕ್ಷಣೆಗೆ ಸ್ಫೂರ್ತಿಯಾಗಿವೆ. ನಮ್ಮ ಸರ್ಕಾರದ ಆಶಯವೂ ಸರ್ವರ ಏಳಿಗೆಯೇ ಆಗಿದೆ.

**287. "ನಮ್ಮ ಲೋಪದೋಷಗಳ ವಿಮರ್ಶೆಗೆ ಕಿವಿಗೊಡಬೇಕು; ಪ್ರಶಂಸೆಗೆಂದೂ ಅಲ್ಲ"** – ಎಂಬುದು ಮಹಾತ್ಮ ಗಾಂಧೀಜಿಯವರ ಪ್ರಸಿದ್ಧ ಹೇಳಿಕೆ. ಇದು ನಮ್ಮೆಲ್ಲರಿಗೂ ಪಾಠ. ಆದ್ದರಿಂದ ಆಡಳಿತದಲ್ಲಿ ಯಾವುದಾದರೂ ಕುಂದು ಕೊರತೆಗಳಿದ್ದರೆ ಅವುಗಳ ಬಗ್ಗೆ ಬರಬಹುದಾದ ಟೀಕೆ – ಟಿಪ್ಪಣಿಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಸರಿಪಡಿಸಿಕೊಳ್ಳುವ ಭರವಸೆಯನ್ನು ನೀಡುತ್ತೇನೆ. ನಾವೆಲ್ಲಾ ಒಂದಾಗಿ ಸಶಕ್ತ ಮತ್ತು ಸಮೃದ್ಧ ಕರ್ನಾಟಕ ನಿರ್ಮಿಸುವ ಪ್ರಕ್ರಿಯೆಯಲ್ಲಿ ಅಭಿಪ್ರಾಯ ಬೇಧ ಮರೆತು ಗಟ್ಟಿ ಹೆಜ್ಜೆಗಳನ್ನು ಇರಿಸೋಣ ಎಂಬುದು ನನ್ನ ವಿನಮ್ರ ಕೋರಿಕೆಯಾಗಿದೆ.

**ಸನ್ಮಾನ್ಯ ಸಭಾಧ್ಯಕ್ಷರೇ,**

288. ನಾನು ಈಗ 2009–10ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಾ, ಈ ಮುಂಗಡ ಪತ್ರದ ಅಂದಾಜುಗಳ ಪ್ರಕಾರ ಜುಲೈ 31, 2009 ರವರೆಗೆ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

**ಜೈ ಹಿಂದ್**

**ಜೈ ಕರ್ನಾಟಕ**

# ±uêÂÒ ÆÝâªgâÀâ°

| dâ¯. Éâª. | ÏÖ±° | ±uêÂÒ %ª{Öm° 2007¥08 | ~âîÍâ¨ ¦yâ %ª{Öm° 2008¥09 | ±uêÂÒ %ª{Öm° 2009¥10 |
|---|---|---|---|---|
| | ~Ö¦pâªÅâ ú·°¦ | 58.32 | 89.90 | 42.80 |
| | U. pÖmÉâ¦ Èêdâ¨ | | | |
| I. | mÀê° : | | | |
| | pÖm¦ yêîgê | 31875.85 | 28764.66 | 32721.25 |
| | dê©ª{â¯ yêîgêÌâ°¶ ~Ö·° | 7982.38 | 7151.82 | 7645.49 |
| | dê©ª{â¯ ÉâdÖËpâ{â %}â°{Ö}âgâÔâ° | 5450.43 | 4995.54 | 5892.80 |
| | yêîgêÌê°©yâpâ pÖmÉâ¦ | 1931.65 | 1905.82 | 2129.50 |
| | **ar°¦¥U. I** | **47240.31** | **42817.84** | **48389.04** |
| II. | Àêkâ : | | | |
| | ÉÖÀâ¦ÖÊdâ Éê©Àê | 17138.39 | 15931.81 | 18731.98 |
| | A¼Ëdâ Éê©Àê | 11816.31 | 9754.70 | 11060.42 |
| | ÉÖÀâ¦Ö}â¦ Éê©Àê | 13763.48 | 13848.18 | 14725.59 |
| | ÉâÝÖÌâ¦Ö}â°{Ö}â Àâ°yâ° %ªµâ{Ö}â | 2994.68 | 2515.68 | 2719.68 |
| | **ar°¥U. II** | **45712.86** | **42050.37** | **47237.67** |
| U. | pÖmÉâ¦ Èêdâ¨ Ýêkâ°Àâî / dê³pâyê | 1527.45 | 767.47 | 1151.37 |

}ê³©r

*(dê³©s pâ³~Ö Î°gâÔâ¶)*

| dâï. Éâª. | ÏÖ±° | ±uêÂÒ %ª{Öm° 2007¥08 | ~âî Íâ' yâ %ª{Öm° 2008¥09 | ±uêÂÒ %ª{Öm° 2009¥10 |
|---|---|---|---|---|
| | ². ±ªvâÀÖÔâ Èêdâ' | | | |
| I. | mÀê° : | | | |
| | ÅÖpâyâ ÉâdÖËpâ¬ª{â ÉÖ· | 1571.29 | 404.00 | 1040.57 |
| | ±þpâªgâ ÀâÖpâ°dâÂêÉÖ· (¾ÀâÔâ) | 3199.66 | 7845.23 | 6061.43 |
| | UÈÒYû, ApÒ²Y, ÊYû Àâ°yâ° | | | |
| | U}ÒûÚû EÀâgâùª{â ÉÖ· | 2048.76 | 815.00 | 1205.00 |
| | ÉÖ·gâÔâ° Àâ°yâ° Àâ°°ªgâvâgâÔâ | | | |
| | ÀâÉâ³¶ | 69.97 | 70.79 | 76.97 |
| | ÉÖÀâËm¾dâ Èêdâ' (¾ÀâÔâ) Eyâpê | 1143.95 | 1143.95 | 1258.35 |
| | **ar°¥². I** | **8033.63** | **10278.97** | **9642.32** |
| II. | ±rÀÖvê : | | | |
| | ±ªvâÀÖÔâ Àêkâ (¾ÀâÔâ) | 7640.06 | 9235.05 | 8712.74 |
| | dê©ª{âï ÉÖ·gâÔâ Àâ°pâ°Éâª{ÖÌâ° | 500.80 | 468.97 | 508.27 |
| | UÈÒYû, ApÒ²Y, ÊYû Àâ°yâ° | 472.60 | 429.42 | 649.47 |
| | U}ÒûÚû EyÖ¬gâùgê ÉÖ·gâÔâ | | | |
| | Àâ°pâ°Éâª{ÖÌâ° | | | |
| | ÉÖ·gâÔâ Àâ°yâ° Àâ°°ªgâvâgâÔâ | 987.09 | 960.10 | 1009.09 |
| | ±rÀÖvê | | | |
| | **ar°¥². II** | **9600.55** | **11093.54** | **10879.57** |
| ². | ±ªvâÀÖÔâ Èêdâ' ÝêkâÔâ / dê³pâyê | **-1566.92** | **-814.57** | **-1237.25** |
| û. | ÀâÍâË{â ar° ÝêkâÔâ / dê³pâyê | **-39.47** | **-47.10** | **-85.88** |
| Ú. | Àâ°°dÖÌâ° ú·°' dâÔê{Ögâ | **18.85** | **42.80** | **-43.08** |

%}â°±ª|â ¥ɪ

(~Ö pÖ 259)

2009¥2010 }ê© ÉÖ¶}â ÆÅÖgâÀÖpâ° pÖm Ìê³©m}Ö Ýâªädê

| ÆÅÖgâ | dê³©s pâ³.gâÔâ¶ | µê©dâvÖ ~âÀâÖx |
|---|---|---|
| U. A¼Ëdâ Éê©ÀêgâÔâ° | | |
| dâ¸ Àâ°yâ° Éâª±ª|â~âr Éê©Àê | 2122.13 | 7.19 |
| gÖÆ°©x %«Àâ¬ | 1502.93 | 5.09 |
| Æµê©Íâ ~â{ê©µâ Ìê³©m}ê (HKDB & MADB) | 144.19 | 0.49 |
| ¾©pÖÀâî Àâ°yâ° ~âÀÖÝâ ¾Ìâ°ªyâx | 3983.82 | 13.50 |
| µâÑ Àâ°³·gâÔâ° | 3621.11 | 12.27 |
| dêgÖîdê Àâ°yâ° Ù¾mgâÔâ° | 828.06 | 2.81 |
| ÉÖîgê | 3804.61 | 12.90 |
| ÆuÖ}â, yâªyâuÖ}â Àâ°yâ° ~âîÉâpâ | 35.63 | 0.12 |
| ÉÖÀâÖ}â A¼Ëdâ Éê©ÀêgâÔâ° | 765.86 | 2.60 |
| ². ÉâÀâÖm Éê©ÀêgâÔâ° | | |
| údâx, Ñ©vêgâÔâ°, dâÈê Àâ°yâ° Éâªɐâ » | 2297.52 | 7.79 |
| Apê³©gâ | 897.50 | 3.04 |
| ¾©pâ° Éâpâ±pÖm° Àâ°yâ° }êÀâ°Ë· | 1352.57 | 4.58 |
| ÀâÉâ» | 729.22 | 2.47 |
| }âgâpÖ«Àâ¬ | 4583.64 | 15.54 |
| ÀÖyÖË Àâ°yâ° ~âkÖpâ | 15.60 | 0.05 |
| ~âîúÍâ uÖ»/~âîúÍâ ~âªgâvâgâÔâ° Àâ°yâ° þª{â°ù{â ÀâgâËgâÔâ dâÈÖx | 2142.51 | 7.26 |
| dÖÆ°Ëdâ Àâ°yâ° I{ê³©gâ | 167.65 | 0.57 |
| û. ÉÖÀâÖ}â Éê©ÀêgâÔâ° | 505.45 | 1.71 |
| ar° | 29500.00 | 100.00 |

# ಅನುಬಂಧ-2 (ಕಂಡಿಕೆ 275)

## ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಸೂಚಿಯ ಉದ್ದೇಶಿತ ಬದಲಾವಣೆ (ತಿದ್ದುಪಡಿ)ಗಳು

| ಕ್ರ. ಸಂ 1 | ಕಂಡಿಕೆ | ಅನುಚ್ಛೇದ 3 | ಪ್ರಸ್ತುತ 4 | | ಉದ್ದೇಶಿತ 5 | |
|---|---|---|---|---|---|---|
| | | | ವಿವರಣೆ 4(ಎ) | ದರ 4(ಬಿ) | ವಿವರಣೆ 5 (ಎ) | ದರ 5 (ಬಿ) |
| 1 | ಕರಾರು ಅಥವಾ ಕರಾರು ಜ್ಞಾಪನ | 5(ಇ) (ii) | (ಇ) ಸ್ಥಿರಾಸ್ತಿಗಳ ಕ್ರಯದ ಕರಾರುಗಳಲ್ಲಿ ಕರಾರಿನ ಭಾಗಶ: ಪರಿಪಾಲನೆ ಯಾಗಿದ್ದಲ್ಲಿ:-<br>(ii) ಸ್ವತ್ತಿನ ಸ್ವಾಧೀನವನ್ನು ನೀಡದೆ ಇದ್ದಲ್ಲಿ (ಎ) ಸ್ವತ್ತಿನ ಬೆಲೆಯು<br>(i) ರೂ.5,000/-ಗಳನ್ನು ಮೀರದಿದ್ದಾಗ<br>(ii)ರೂ.5,000/-ಗಳನ್ನು ಮೀರಿದ್ದು, ರೂ.20,000/-ಗಳನ್ನು ಮೀರದಿದ್ದಾಗ<br>(iii) ರೂ.20,000/-ಗಳನ್ನು ಮೀರಿದ್ದು, ರೂ.50,000/-ಗಳನ್ನು ಮೀರದಿದ್ದಾಗ<br>(iv)ರೂ.50,000/-ಗಳನ್ನು ಮೀರಿದ್ದಾಗ | ರೂ.10/-<br>ರೂ.20/-<br>ರೂ.100/-<br>ರೂ.200/- | (ಇ) ಸ್ಥಿರಾಸ್ತಿಗಳ ಕ್ರಯದ ಕರಾರುಗಳಲ್ಲಿ ಕರಾರಿನ ಭಾಗಶ: ಪರಿಪಾಲನೆ ಯಾಗಿದ್ದಲ್ಲಿ:-<br>(ii) ಸ್ವತ್ತಿನ ಸ್ವಾಧೀನವನ್ನು ನೀಡದೆ ಇದ್ದಲ್ಲಿ | ಪ್ರತಿಫಲಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ ಶೇ 0.25 |

| | | | | | | |
|---|---|---|---|---|---|---|
| 2 | ಜಂಟಿ ಅಭಿವೃದ್ಧಿ ಕರಾರು | ೫(ಎಫ್) 1ರಿಂದ 5 | ಯಾವುದೇ ಸ್ಥಿರಾಸ್ತಿಯನ್ನು ನಿರ್ಮಾಣ, ಅಭಿವೃದ್ಧಿ, ಮಾರಾಟ ಅಥವಾ ವರ್ಗಾವಣೆ (ಬೇರೆ ಯಾವುದೇ ಹೆಸರಿನಿಂದ ಕರೆಯಲ್ಪಡಲಿ) ಉದ್ದೇಶಗಳಿಗಾಗಿ ಅಭಿವೃದ್ಧಿಗಾರರಿಗೆ ಅಧಿಕಾರ ನೀಡಿದಾಗ ಸ್ವತ್ತಿನ ಮಾರುಕಟ್ಟೆ ಮೌಲ್ಯವು<br>1)ರೂ.ಒಂದು ಕೋಟಿಯನ್ನು ಮೀರದಿದ್ದಲ್ಲಿ<br>2)ರೂ.ಒಂದು ಕೋಟಿಯನ್ನು ಮೀರಿದ್ದು, ಎರಡು ಕೋಟಿ ಮೀರದಿದ್ದಲ್ಲಿ<br>3)ರೂ.ಎರಡು ಕೋಟಿಯನ್ನು ಮೀರಿದ್ದು, ಐದು ಕೋಟಿಯನ್ನು ಮೀರದಿದ್ದಲ್ಲಿ<br>4) ರೂ. ಐದು ಕೋಟಿಯನ್ನು ಮೀರಿದ್ದು, ಹತ್ತು ಕೋಟಿಯನ್ನು ಮೀರದಿದ್ದಲ್ಲಿ<br>5) ರೂ.ಹತ್ತು ಕೋಟಿಯನ್ನು ಮೀರಿದ್ದಲ್ಲಿ<br><br>ವಿವರಣೆ: ಕಂಡಿಕೆ (ಇ)ರ ಉಪಕಂಡಿಕೆ (i) ಮತ್ತು (ii) ಮತ್ತು ಕಂಡಿಕೆ (ಹೆಚ್) ಗಳ ಉದ್ದೇಶಕ್ಕಾಗಿ ಜಂಟಿ ಅಭಿವೃದ್ಧಿ ಕಾರರುಗಳ ಅಥವಾ ದಾಖಲೆಗಳ ಅಥವಾ ಒಡಂಬಡಿಕೆಗಳ ಮುಂದುವರಿಕೆಯಾಗಿ ನಂತರ ಹಸ್ತಾಂತರ ಅಥವಾ ಅಡಮಾನ ಪತ್ರವನ್ನು ಬರೆದುಕೊಟ್ಟಲ್ಲಿ, ಜಂಟಿ ಅಭಿವೃದ್ಧಿ ಕರಾರು ಅಥವಾ ದಾಖಲೆ ಅಥವಾ ಒಡಂಬಡಿಕೆಗಳ ಮೇಲೆ ಈಗಾಗಲೇ ಪಾವತಿಸಿರುವ ಮತ್ತು ವಸೂಲಾಗಿರುವ ಮುದ್ರಾಂಕ ಶುಲ್ಕವನ್ನು ಹಸ್ತಾಂತರ ಪತ್ರ ಅಥವಾ ಅಡಮಾನ ಪತ್ರಗಳ ಮೇಲೆ ವಿಧಿಸಲಾಗುವ ಒಟ್ಟು ಮುದ್ರಾಂಕ ಶುಲ್ಕದ ಬಾಬ್ತು ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು. | <br><br><br><br><br><br>ರೂ.10,000/-<br><br>ರೂ.20,000/-<br><br>ರೂ.50,000/-<br><br>ರೂ.1,00,000.-<br>ರೂ.1,50,000/- | ಸ್ಥಿರಾಸ್ತಿಯಲ್ಲಿ ನಿರ್ಮಾಣ, ಅಭಿವೃದ್ಧಿ, ಮಾರಾಟ ಬಹು ಘಟಕ ಹೊಂದಿದ ಕಟ್ಟಡವು ಸೇರಿದಂತೆ ಸ್ವತ್ತನ್ನು ಅಭಿವೃದ್ಧಿ ಪಡಿಸಲು, ಅಭಿವೃದ್ಧಿ ಪಡಿಸಿದ ನಂತರ ಅಭಿವೃದ್ಧಿ ಪಡಿಸಿದ ಸ್ವತ್ತನ್ನು ಅಭಿವೃದ್ಧಿಕಾರರು ಮತ್ತು ಸ್ವತ್ತಿನ ಮಾಲೀಕರು ಜಂಟಿಯಾಗಿ ಹೊಂದಿರಬೇಕೆಂಬ ನಿಬಂಧನೆಯೊಂದಿಗೆ ಸ್ವತ್ತನ್ನು ಅಭಿವೃದ್ಧಿಪಡಿಸಲು ಮಾಡಿಕೊಂಡ ಕರಾರು ಪತ್ರ<br><br>ವಿವರಣೆ: I :<br>1) ಗುತ್ತಿಗೆದಾರ ಎಂಬ ಪದವು 30 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಅಥವಾ ನಿರಂತರವಾಗಿ ಅಥವಾ ಯಾವುದೇ ನಿರ್ದಿಷ್ಟ ಕಾಲಮಿತಿ ಇಲ್ಲದ ಅವಧಿಗೆ ಗುತ್ತಿಗೆ ಪಡೆದವರು ಎಂಬ ಅರ್ಥವನ್ನು ಹೊಂದಿರುತ್ತದೆ.<br>2) ಕಟ್ಟಡ ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್/ ಫ್ಲಾಟ್/ ಕಛೇರಿ ಸ್ಥಳಾವಕಾಶ ಅಥವಾ ಬಹು ಮಹಡಿ ಕಟ್ಟಡದ ಒಂದು ಭಾಗ ವನ್ನು ಹೊಂದಿರುವ ಕಟ್ಟಡ ಎಂಬ ಅರ್ಥವನ್ನು ಹೊಂದಿರುತ್ತದೆ. | ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 28ರಂತೆ ವರ್ಗಾವಣೆಯಲ್ಲಿ ಒಳಗೊಂಡಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯ ಮತ್ತು / ಅಥವಾ ಸ್ವತ್ತಿನ ಉದ್ದೇಶಿತ ಅಭಿವೃದ್ಧಿ, ನಿರ್ಮಾಣ, ಅಥವಾ ಉದ್ದೇಶಿತ ನಿರ್ಮಾಣ ಅಥವಾ ವರ್ಗಾವಣೆ ಆಗುತ್ತಿರುವ ಸ್ವತ್ತಿನ ವರ್ಗಾವಣೆಗೆ ಪಡೆದ ಪ್ರತಿಫಲ.ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಒಂದು ರೂಪಾಯಿ<br><br>ಅದೇ ಸ್ವತ್ತಿಗೆ ಸಂಬಂಧಿಸಿದಂತೆ ಅದೇ ಪಕ್ಷಕಾರರ ನಡುವೆ ಬರೆದುಕೊಡ ಲಾಗಿರುವ ಮೊಖ್ತಾರನಾಮೆಯ ಮೇಲೆ ಅನುಚ್ಛೇದ 41ರ ಕಂಡಿಕೆ (ಇ), (ಇಎ) ಮತ್ತು (ಇಬಿ) ರಂತೆ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸಲಾಗಿದ್ದಲ್ಲಿ, ಈ ಕಂಡಿಕೆಯಡಿ ಪಾವತಿಸಬೇಕಾದ ಮುದ್ರಾಂಕ ಶುಲ್ಕವು ಅನುಚ್ಛೇದ **5 (*i*)** ರಂತೆ ಇರತಕ್ಕದ್ದು. |

| | | | | | | |
|---|---|---|---|---|---|---|
| | | | | | ವಿವರಣೆ: II:<br>ಕಂಡಿಕೆ (ಇ) ರ ಉಪ ಕಂಡಿಕೆ (i) ಮತ್ತು (ii) ಮತ್ತು ಕಂಡಿಕೆ (ಹೆಚ್) ಗಳ ಉದ್ದೇಶಕ್ಕಾಗಿ ಜಂಟಿ ಅಭಿವೃದ್ಧಿ ಕರಾರುಗಳ ಅಥವಾ ದಾಖಲೆಗಳ ಅಥವಾ ಒಡಂಬಡಿಕೆಗಳ ಮುಂದುವರಿಕೆ ಯಾಗಿ ಅದೇ ಪಕ್ಷಕಾರರ ನಡುವೆ ಹಸ್ತಾಂತರ ಅಥವಾ ಅಡಮಾನ ಪತ್ರಗಳನ್ನು ಬರೆದುಕೊಟ್ಟಲ್ಲಿ, ಜಂಟಿ ಅಭಿವೃದ್ಧಿ ಕರಾರು ಅಥವಾ ದಾಖಲೆ ಅಥವಾ ಒಡಂಬಡಿಕೆಗಳ ಮೇಲೆ ಈಗಾಗಲೇ ಪಾವತಿಸಿರುವ ಮತ್ತು ವಸೂಲಾಗಿರುವ ಮುದ್ರಾಂಕ ಶುಲ್ಕ ವನ್ನು ಹಸ್ತಾಂತರ ಪತ್ರ ಅಥವಾ ಅಡಮಾನ ಪತ್ರಗಳ ಮೇಲೆ ವಿಧಿಸ ಲಾಗುವ ಒಟ್ಟು ಮುದ್ರಾಂಕ ಶುಲ್ಕದ ಬಾಬ್ತು ಹೊಂದಾಣಿಕೆ ಮಾಡಿಕೊಳ್ಳ ತಕ್ಕದ್ದು. | |
| | | 5(*i*) | ಅನುಚ್ಛೇದ 5ರ ಈ ಮೇಲಿನ ಯಾವುದೇ ರೀತಿಯ ವಿವರಣೆಗಳಿಗೆ ಹೊರತಾದ ಪತ್ರಗಳಿಗೆ | ರೂ.50/- | ಅನುಚ್ಛೇದ 5ರ ಈ ಮೇಲಿನ ಯಾವುದೇ ರೀತಿಯ ವಿವರಣೆಗಳಿಗೆ ಹೊರತಾದ ಪತ್ರಗಳಿಗೆ | ರೂ.200/- |

| | | | | | | |
|---|---|---|---|---|---|---|
| 3 | ತೀರ್ಪು (ಅವಾರ್ಡ್) | 11 | ಐತೀರ್ಪು ಎಂದರೆ ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಅಲ್ಲದೆ ಅನ್ಯಥಾ ಮಾಡಿದ ಉಲ್ಲೇಖದ ಮೇಲೆ ವಿಭಜನೆಯನ್ನು ನಿರ್ದೇಶಿಸುವ ಐತೀರ್ಪು ಆಗಿರದ ಮಧ್ಯಸ್ಥ ಅಥವಾ ನ್ಯಾಯ ನಿರ್ಣಾಯಕನು ಕೊಟ್ಟ ಬರಹದಲ್ಲಿನ ಯಾವುದೇ ತೀರ್ಮಾನ: **ಅವಾರ್ಡ್‌ನಲ್ಲಿ ಹೇಳಲಾದ ಮೊತ್ತ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಯಾವುದು ಹೆಚ್ಚಿನದೋ ಅದು.** | ಅವಾರ್ಡ್‌ನಲ್ಲಿ ಒಳಗೊಂಡಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅನುಚ್ಛೇದ 12ರಂತೆ ಬಾಂಡ್‌ಗೆ ಅನ್ವಯವಾಗುವ ದರ. | ಐತೀರ್ಪು ಎಂದರೆ ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಅಲ್ಲದೆ ಅನ್ಯಥಾ ಮಾಡಿದ ಉಲ್ಲೇಖದ ಮೇಲೆ ವಿಭಜನೆಯನ್ನು ನಿರ್ದೇಶಿಸುವ ಐತೀರ್ಪು ಆಗಿರದ ಮಧ್ಯಸ್ಥ ಅಥವಾ ನ್ಯಾಯ ನಿರ್ಣಾಯಕನು ಕೊಟ್ಟ ಬರಹದಲ್ಲಿನ ಯಾವುದೇ ತೀರ್ಮಾನ: | ಅವಾರ್ಡ್‌ನಲ್ಲಿ ಒಳಗೊಂಡಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಅವಾರ್ಡ್‌ನಲ್ಲಿ ಹೇಳಲಾದ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಮೇಲೆ ಅನುಚ್ಛೇದ 20(1)ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ. |

| | | | | | | |
|---|---|---|---|---|---|---|
| 4 | ಹಸ್ತಾಂತರಣ | ೨೦ (೧) | ಸಂ. ೫೨ರ ಮೇರೆಗೆ ವಿಧಿಸಲಾದ ಅಥವಾ ವಿನಾಯಿತಿಗೊಳಿಸಲಾದ ವರ್ಗಾವಣೆಯಾಗಿರುವ, ೨ (ಡಿ) ಪ್ರಕರಣದ ಮೂಲಕ ಪರಿಭಾಷಿಸಲಾದಂತೆ ಹಸ್ತಾಂತರಣ | ಮೌಲ್ಯದ ಶೇ. ೭.೫ ರಷ್ಟು | ಸಂ. ೫೨ರ ಮೇರೆಗೆ ವಿಧಿಸಲಾದ ಅಥವಾ ವಿನಾಯಿತಿಗೊಳಿಸಲಾದ ವರ್ಗಾವಣೆಯಾಗಿರುವ, ೨ (ಡಿ) ಪ್ರಕರಣದ ಮೂಲಕ ಪರಿಭಾಷಿಸಲಾದಂತೆ ಹಸ್ತಾಂತರಣ | ಮೌಲ್ಯದ ಶೇ. ೬ ರಷ್ಟು |
| ೫ | ಹಸ್ತಾಂತರಣ | ೨೦(೬) | (Securitization) ಭದ್ರತೀಕರಣ ಪ್ರಕ್ರಿಯೆಯಲ್ಲಿ ವಿಶೇಷ ಉದ್ದೇಶ ವಾಹನ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಡುವುದಕ್ಕೆ ಮೂಲಕರ್ತನಿಂದ ಸ್ವೀಕೃತಿಗಳನ್ನು ವಹಿಸಿಕೊಡುವುದಕ್ಕೆ ಸಂಬಂಧಿಸಿದ್ದಲ್ಲಿ | ಪ್ರತಿ ಒಂದು ನೂರು ರೂಪಾಯಿ ಅಥವಾ ಭಾಗಾಂಶಕ್ಕೆ ಒಂದು ರೂಪಾಯಿ ಗರಿಷ್ಠ ಒಂದು ಲಕ್ಷ ರೂ. ಮಿತಿಗೆ ಒಳಪಟ್ಟು | Securitization and Reconstruction of Financial Assets and Enforcement of Security Interest Act 2002" ರಡಿ (Securitization) ಭದ್ರತೀಕರಣ ಪ್ರಕ್ರಿಯೆಯಲ್ಲಿ ವಿಶೇಷ ಉದ್ದೇಶ ವಾಹನ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಡುವುದಕ್ಕೆ ಮೂಲಕರ್ತನಿಂದ ಸ್ವೀಕೃತಿಗಳನ್ನು ವಹಿಸಿಕೊಡುವುದಕ್ಕೆ ಸಂಬಂಧಿಸಿದ್ದಲ್ಲಿ | ಪ್ರತಿ ಒಂದು ನೂರು ರೂಪಾಯಿ ಅಥವಾ ಭಾಗಾಂಶಕ್ಕೆ ಒಂದು ರೂಪಾಯಿ ಗರಿಷ್ಠ ಒಂದು ಲಕ್ಷ ರೂ. ಮಿತಿಗೆ ಒಳಪಟ್ಟು |

| | | | | | | |
|---|---|---|---|---|---|---|
| ೬ | ದ್ವಿಪ್ರತಿಗೆ | ೨೨ | ಮುದ್ರಾಂಕ ಶುಲ್ಕದ ಆಕರಣೆಗೆ ಒಳಪಡುವ ಮತ್ತು ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿಸಿರುವ ಯಾವುದೇ ಪತ್ರ.<br>ಎ) ಮೂಲ ಪತ್ರದ ಮೇಲೆ ವಿಧಿಸಲಾಗುವ ಮುದ್ರಾಂಕ ಶುಲ್ಕವು ರೂ.೪.೫೦ನ್ನು ಮೀರದಿದ್ದಲ್ಲಿ<br><br>ಬಿ) ಇತರೆ ಯಾವುದೇ ಪ್ರಕರಣದಲ್ಲಿ | ಮೂಲ ಪತ್ರದ ಮೇಲೆ ಪಾವತಿರುವಷ್ಟೆ ಮುದ್ರಾಂಕ ಶುಲ್ಕ<br><br>ರೂ.೫೦/- | ಮುದ್ರಾಂಕ ಶುಲ್ಕದ ಆಕರಣೆಗೆ ಒಳಪಡುವ ಮತ್ತು ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿಸಿರುವ ಯಾವುದೇ ಪತ್ರ.<br>ಎ) ಮೂಲ ಪತ್ರದ ಮೇಲೆ ವಿಧಿಸಲಾಗುವ ಮುದ್ರಾಂಕ ಶುಲ್ಕವು ರೂ.೪.೫೦ನ್ನು ಮೀರದಿದ್ದಲ್ಲಿ<br><br>ಬಿ) ಇತರೆ ಯಾವುದೇ ಪ್ರಕರಣದಲ್ಲಿ | ಮೂಲ ಪತ್ರದ ಮೇಲೆ ಪಾವತಿರುವಷ್ಟೆ ಮುದ್ರಾಂಕ ಶುಲ್ಕ<br><br>ರೂ. ೫೦೦/- |
| ೭ | ದಾನಪತ್ರ | ೨೮ | ದಾನಕೊಡುವ ವ್ಯಕ್ತಿಗೆ ಸಂಬಂಧಿಸಿದಂತೆ ಕುಟುಂಬ ಎಂಬ ಪದವು **'ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳು'** ಇವರನ್ನು ಒಳಗೊಳ್ಳುತ್ತದೆ, | ರೂ. ೧,೦೦೦/- | ದಾನಕೊಡುವ ವ್ಯಕ್ತಿಗೆ ಸಂಬಂಧಿಸಿದಂತೆ ಕುಟುಂಬ ಎಂಬ ಪದವು **''ತಂದೆ, ತಾಯಿ,** ಗಂಡ, ಹೆಂಡತಿ, ಮಗ, ಮಗಳು, ಸೊಸೆ, **ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳು'** ಇವರನ್ನು ಒಳಗೊಳ್ಳುತ್ತದೆ, | ರೂ. ೧,೦೦೦/- |

| | | | | | | |
|---|---|---|---|---|---|---|
| ೮ | ಸ್ಥಿರಾಸ್ತಿಯ ಗುತ್ತಿಗೆ | ೩೦(1)<br>(ಎ)<br>(ಬಿ)<br>(ಸಿ) | (1) ಒಳ ಗುತ್ತಿಗೆ ಅಥವಾ ಉಪ ಗುತ್ತಿಗೆಯು ಸೇರಿದಂತೆ ಗುತ್ತಿಗೆ ಮತ್ತು ಬಾಡಿಗೆ ಅಥವಾ ಒಳಬಾಡಿಗೆಗೆ ಕೊಡಲು ಒಪ್ಪಂದ | | ೩೦) ಸ್ಥಿರ ಸ್ವತ್ತಿನ ಗುತ್ತಿಗೆ, ಒಳ ಗುತ್ತಿಗೆ ಅಥವಾ ಉಪ ಗುತ್ತಿಗೆ ಸೇರಿದಂತೆ ಬಾಡಿಗೆ ಮತ್ತು ರಖಂ / ಪ್ರೀಮಿಯಂ / ಮುಂಗಡ ಹಣ / ಭದ್ರತಾ ಠೇವಣಿ ಪಾವತಿ ಅಥವಾ ವಶಾವಣೆ ಮಾಡಿರುವಲ್ಲಿ | |
| | | | ಎ) ಅಂತಹ ಗುತ್ತಿಗೆಯ ಮೂಲಕ ಬಾಡಿಗೆಯನ್ನು ನಿಗಧಿಪಡಿಸಿರುವಲ್ಲಿ ಮತ್ತು ಯಾವುದೇ ರೀತಿಯ ಪ್ರೀಮಿಯಂ ಅನ್ನು ಸಂದಾಯ / ವಶಾವಣೆ ಮಾಡಿಲ್ಲದಿರುವಲ್ಲಿ | ಅಂತಹ ಗುತ್ತಿಗೆಯ ಮೇಲೆ ಪಾವತಿಸಬೇಕಾದ ಒಟ್ಟು ಬಾಡಿಗೆಯ ಮೇಲೆ ಅನುಬಂಧ-12ರಂತೆ ಬಾಂಡ್‌ಗೆ ಅನ್ವಯವಾಗುವ ದರ | ಅಂತಹ ಗುತ್ತಿಗೆಯ ಮೂಲಕ ಬಾಡಿಗೆಯನ್ನು ನಿಗಧಿಪಡಿಸಿರುವಲ್ಲಿ ಷಾಡಿಗೆ ಮತ್ತು ರಖಂ / ಪ್ರೀಮಿಯಂ / ಮುಂಗಡ ಹಣ / ಭದ್ರತಾ ಠೇವಣಿ ಪಾವತಿ ಅಥವಾ ವಶಾವಣೆ ಮಾಡಿರುವಲ್ಲಿ | |
| | | | i) ಗುತ್ತಿಗೆಯು ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ | ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೌಲ್ಯ ಅಥವಾ ಮೊತ್ತದ ಮೇಲೆ ಅನುಬಂಧ-12ರಂತೆ ಬಾಂಡ್‌ಗೆ ಅನ್ವಯವಾಗುವ ದರ | i) ಗುತ್ತಿಗೆಯು ಐದು ವರ್ಷಕ್ಕೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ | ಅಂತಹ ಗುತ್ತಿಗಯ ಮೇಲೆ ಪಾವತಿಸಬೇಕಾದ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ರಖಂ / ಪ್ರೀಮಿಯಂ / ಮುಂಗಡ ಹಣ / ಭದ್ರತಾ ಠೇವಣಿ (ಯಾವುದು ಅನ್ವಯವಾಗುವುದೋ) ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಒಂದು ರೂಪಾಯಿ. |
| | | | ii) ಗುತ್ತಿಗೆಯು ಒಂದು ವರ್ಷಕ್ಕೆ ಮೀರಿದ ಆದರೆ ಐದು ವರ್ಷಕ್ಕಿಂತ ಕಡಿಮೆ ಇರುವ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ | ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೊತ್ತ ಅಥವಾ ಮೌಲ್ಯದ ಎರಡರಷ್ಟು ಮೊತ್ತದ ಮೇಲೆ ಅನುಚ್ಚೇದ ೨೦ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | ii) ಗುತ್ತಿಗೆಯು ಐದು ವರ್ಷಕ್ಕೆ ಮೀರಿದ ಆದರೆ ಹತ್ತು ವರ್ಷಕ್ಕೆ ಮೀರದ ಅವಧಿಗೆ ಇರುವುದೆಂದು ತಾತ್ವರ್ಯವಾಗಿರುವಲ್ಲಿ | ಕಾಯ್ದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ರಖಂ / ಪ್ರೀಮಿಯಂ / ಮುಂಗಡ ಹಣ / ಭದ್ರತಾ ಠೇವಣಿ (ಯಾವುದು ಅನ್ವಯವಾಗುವುದೋ) ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಎರಡು ರೂಪಾಯಿಗಳು |
| | | | iii) ಗುತ್ತಿಗೆಯು ಐದು ವರ್ಷಕ್ಕೆ ಮೀರಿದ ಆದರೆ ಹತ್ತು ವರ್ಷಗಳಗಿಂತ ಕಡಿಮೆ ಇರುವ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ | ಕಾದಿರಿಸಿದ ವಾರ್ಷಕ ಸರಾಸರಿ ಬಾಡಿಗೆಯ ಮೊತ್ತ ಅಥವಾ ಮೌಲ್ಯದ ೩ರಷ್ಟು ಮೊತ್ತಕ್ಕೆ ಸಮನಾದ ಮೊಬಲಗಿನ ಮೇಲೆ ಅನುಚ್ಛೇದ ೨೦ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | | |

| | | | | | | |
|---|---|---|---|---|---|---|
| | | | iv) ಗುತ್ತಿಗೆಯು ಹತ್ತು ವರ್ಷಕ್ಕೆ ಮೀರಿದ ಆದರೆ 20ವರ್ಷಗಳಗಿಂತ ಕಡಿಮೆ ಇರುವ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ<br><br>v) ಗುತ್ತಿಗೆಯು 20ವರ್ಷಗಳಗಿಂತ ಮೀರಿದ ಆದರೆ 30 ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ<br><br>vi) ಗುತ್ತಿಗೆಯು 30ವರ್ಷಗಳಿಗೆ ಮೀರಿದ ಅಥವಾ ಶಾಶ್ವತ ಅಥವಾ ಯಾವುದೇ ನಿರ್ದಿಷ್ಟ ಅವಧಿಗೆ ನಿಗಧಿಪಡಿಸದ | ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೌಲ್ಯ ಅಥವಾ ಮೊತ್ತದ 4 ಪಟ್ಟು ಮೊತ್ತಕ್ಕೆ ಸಮನಾದ ಮೊಬಲಗಿನ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ.<br><br>ಕಾದಿರಿಸಿದ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮೊಬಲಗು ಅಥವಾ ಮೌಲ್ಯಕ್ಕಾಗಿನ ಹಸ್ತಾಂತರ (ಸಂ. 20 (1)) ರಂತೆ ಶುಲ್ಕ | iii) ಗುತ್ತಿಗೆಯು ಹತ್ತು ವರ್ಷಕ್ಕೆ ಮೀರಿದ ಆದರೆ ಮೂವತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ<br><br>iv) ಗುತ್ತಿಗೆಯು 30ವರ್ಷಗಳಿಗೆ ಮೀರಿದ ಅಥವಾ ಶಾಶ್ವತ ಅಥವಾ ಯಾವುದೇ ನಿರ್ದಿಷ್ಟ ಅವಧಿಗೆ ನಿಗಧಿಪಡಿಸದ | ಕಾಯ್ದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ರಖಂ / ಪ್ರೀಮಿಯಂ / ಮುಂಗಡ ಹಣ / ಭದ್ರತಾ ಠೇವಣಿ (ಯಾವುದು ಅನ್ವಯವಾಗುವುದೋ) ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ನಾಲ್ಕು ರೂಪಾಯಿಗಳು<br><br>ಗುತ್ತಿಗೆ ಪತ್ರದ ಕಾಯ್ದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆ ಮೇಲೆ ಪಾವತಿಸಬೇಕಾದ ಶುಲ್ಕದ ಜೊತೆಗೆ ಗುತ್ತಿಗೆ ಪತ್ರದಲ್ಲಿ ನಿಗಧಿಪಡಿಸಿರುವ ರಖಂ, ಅಥವಾ ಪ್ರೀಮಿಯಂ, ಅಥವಾ ಮುಂಗಡ; ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯಕ್ಕೆ ಸಮನಾದ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಮೇಲೆ ಅನುಚ್ಛೇಧ 20 (1) ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ |
| | | 30 (1)<br>(ಬಿ) (i) (ii) | ಹೀಗಿರುವಂತೆ | ಹೀಗಿರುವಂತೆ | ಕೈಬಿಡಲಾಗಿದೆ | ಕೈಬಿಡಲಾಗಿದೆ |
| | | 31 (1)<br>(ಸಿ) (i) (ii) | ಹೀಗಿರುವಂತೆ | ಹೀಗಿರುವಂತೆ | ಕೈಬಿಡಲಾಗಿದೆ | ಕೈಬಿಡಲಾಗಿದೆ |

| | | | | | | |
|---|---|---|---|---|---|---|
| ೯ | ಸ್ಥಿರಾಸ್ತಿ ಅಥವಾ ಚರಾಸ್ತಿಯ ಪರವಾನಗಿ | 32 A | ಸ್ಥಿರಾಸ್ತಿ ಅಥವಾ ಚರಾಸ್ತಿಯ ಪರವಾನಗಿ ಎಂದರೆ ಮಾಲೀಕರು ಅಥವಾ ಪ್ರಾಧಿಕಾರಿಯು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಪಡೆದು ಪರವಾನಗಿಯನ್ನು ನೀಡಿರುವಲ್ಲಿ<br><br>ಎ) ಪರವಾನಗಿಯನ್ನು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಪಡೆದು ಪರವಾನಗಿಯನ್ನು ನೀಡಿರುವಲ್ಲಿ | | ಸ್ಥಿರಾಸ್ತಿ ಅಥವಾ ಚರಾಸ್ತಿಯ ಪರವಾನಗಿ ಎಂದರೆ ಮಾಲೀಕರು ಅಥವಾ ಪ್ರಾಧಿಕಾರಿಯು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಮತ್ತು ಮುಂಗಡ ಹಣ / ಭದ್ರತಾ ಠೇವಣಿ ಪಡೆದು ಪರವಾನಗಿಯನ್ನು ನೀಡಿರುವಲ್ಲಿ<br><br>ಎ) ಪರವಾನಗಿಯನ್ನು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಮತ್ತು ಮುಂಗಡ ಹಣ / ಭದ್ರತಾ ಠೇವಣಿ ಪಡೆದು ಪರವಾನಗಿಯನ್ನು ನೀಡಿರುವಲ್ಲಿ | |
| | | | (i) ಪರವಾನಗಿಯು ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ಪರವಾನಗಿಯಡಿ ಪಾವತಿಸಬೇಕಾದ ಅಥವಾ ವಶಾವಣೆ ಮಾಡಬೇಕಾದ ಸಂಪೂರ್ಣ ಮೊತ್ತದ ಮೇಲೆ ಅನುಚ್ಛೇಧ 12 ರಂತೆ ಬಾಂಡ್‌ಗೆ ಅನ್ವಯವಾಗುವ ದರ | (i) ಪರವಾನಗಿಯು ಐದು ವರ್ಷಕ್ಕೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ಪರವಾನಗಿಯಡಿ ಪಾವತಿಸಬೇಕಾದ ಅಥವಾ ವಶಾವಣೆ ಮಾಡಬೇಕಾದ ಸಂಪೂರ್ಣ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡ ಹಣ / ಭದ್ರತಾ ಠೇವಣಿ ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಒಂದು ರೂಪಾಯಿ |

| | | | | | | |
|---|---|---|---|---|---|---|
| | | | (ii) ಪರವಾನಗಿಯು ಒಂದು ವರ್ಷಕ್ಕಿಂತ ಕಡಿಮೆ ಇರದ ಆದರೆ ಐದು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ವಾರ್ಷಿಕ ಸರಾಸರಿ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತ ಅಥವಾ ಮೌಲ್ಯದ ಮೇಲೆ ಅನುಚ್ಛೇಧ 12 ರಂತೆ ಬಾಂಡ್‌ಗೆ ಅನ್ವಯವಾಗುವ ದರ | | |
| | | | (iii) ಪರವಾನಗಿಯು ಐದು ವರ್ಷಕ್ಕಿಂತ ಕಡಿಮೆ ಇರದ ಆದರೆ ಹತ್ತು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ವಾರ್ಷಿಕ ಸರಾಸರಿ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತ ಅಥವಾ ಮೌಲ್ಯದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | (ii) ಪರವಾನಗಿಯು ಐದು ವರ್ಷಕ್ಕಿಂತ ಕಡಿಮೆ ಇರದ ಆದರೆ ಹತ್ತು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ಪರವಾನಗಿಯಡಿ ಪಾವತಿಸಬೇಕಾದ ಅಥವಾ ವಶಾವಣೆ ಮಾಡಬೇಕಾದ ಸಂಪೂರ್ಣ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡ ಹಣ / ಭದ್ರತಾ ಠೇವಣಿ ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಎರಡು ರೂಪಾಯಿಗಳು |
| | | | (iv) ಪರವಾನಗಿಯು ಹತ್ತು ವರ್ಷಕ್ಕಿಂತ ಕಡಿಮೆ ಇರದ ಆದರೆ ಇಪತ್ತು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ<br><br>(v) ಪರವಾನಗಿಯು ಇಪ್ಪತ್ತು ವರ್ಷಕ್ಕಿಂತ ಕಡಿಮೆ ಇರದ ಆದರೆ ಮೂವತ್ತು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ವಾರ್ಷಿಕ ಬಾಡಿಗೆಯ ಎರಡು ಪಟ್ಟು ಮೊತ್ತ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ<br>ಸರಾಸರಿ ಬಾಡಿಗೆಯ ಮೂರು ಪಟ್ಟು ಮೊತ್ತ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | (iii) ಪರವಾನಗಿಯು ಹತ್ತು ವರ್ಷಕ್ಕಿಂತ ಕಡಿಮೆ ಇರದ ಆದರೆ ಮೂವತ್ತು ವರ್ಷಗಳಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ | ಪರವಾನಗಿಯಡಿ ಪಾವತಿಸಬೇಕಾದ ಅಥವಾ ವಶಾವಣೆ ಮಾಡಬೇಕಾದ ಸಂಪೂರ್ಣ ವಾರ್ಷಿಕ ಸರಾಸರಿ ಬಾಡಿಗೆ ಮತ್ತು ಮುಂಗಡ ಹಣ / ಭದ್ರತಾ ಠೇವಣಿ ಮೊತ್ತದ ಮೇಲೆ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ನಾಲ್ಕು ರೂಪಾಯಿಗಳು |

| | | | | | | |
|---|---|---|---|---|---|---|
| | | | ಬಿ) ಪರವಾನಗಿಯನ್ನು ಯಾವುದೇ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವು ಮೊತ್ತವನ್ನು ಕಾಯ್ದಿರಿಸದೇ ಒಟ್ಟು ಮುಂಗಡ ಮೊಬಲಗಿಗೆ ನೀಡಿರುವಲ್ಲಿ | ಪರವಾನಗಿ ಪತ್ರದಲ್ಲಿ ನಿಗಧಿಪಡಿಸಿರುವ ಒಟ್ಟು ಮುಂಗಡ ಮೊಬಲಗಿನ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | ಕೈ ಬಿಡಲಾಗಿದೆ | ಕೈ ಬಿಡಲಾಗಿದೆ |
| | | | ಸಿ) ಪರವಾನಗಿಯನ್ನು ಒಟ್ಟು ಮುಂಗಡ ಮೊಬಲಗಿನ ಜೊತೆಗೆ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತವನ್ನು ಪಡೆದು ನೀಡಿರುವಲ್ಲಿ | ಒಟ್ಟು ಮುಂಗಡ ಮೊಬಲಗನ್ನು ಪಾವತಿ ಅಥವಾ ವಶಾವಣೆ ಮಾಡಿರದಿದ್ದಲ್ಲಿ ಪರವಾನಗಿಯ ಮೇಲೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದ ಜೊತೆಗೆ ಪರವಾನಗಿಯಲ್ಲಿ ನಿಗಧಿಪಡಿಸಿರುವ ಒಟ್ಟು ಮೊತ್ತದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ | ಕೈ ಬಿಡಲಾಗಿದೆ | ಕೈ ಬಿಡಲಾಗಿದೆ |

| | | | | | | |
|---|---|---|---|---|---|---|
| 10 | ಮೊಖ್ತಾರ ನಾಮ | 41(ಇ) | ಮೊಖ್ತಾರನಾಮೆಯನ್ನು ಪ್ರತಿಫಲಕ್ಕಾಗಿ ಮತ್ತು ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಅಧಿಕಾರದೊಂದಿಗೆ ನೀಡಲಾಗಿದಲ್ಲಿ. | ಪ್ರತಿಫಲದ ಮೊತ್ತಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕ | ಪ್ರತಿಪಲಕ್ಕಾಗಿ ಮತ್ತು / ಅಥವಾ ಹಿತಾಸಕ್ತಿಗಳೊಂದಿಗೆ ಮತ್ತು ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಅಧಿಕಾರದೊಂದಿಗೆ ಮೊಖ್ತಾರನಾಮೆಯನ್ನು ನೀಡಿದಲ್ಲಿ | ಪ್ರತಿಫಲ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಇವುಗಳಲ್ಲಿ ಯಾವುದು ಹೆಚ್ಚಿನದೋ ಆ ಮೊತ್ತದ ಮೇಲೆ ಹಸ್ತಾಂತರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕ ದರ |
| | ಮೊಖ್ತಾರ ನಾಮೆ | 41(ಇಎ) | ಕರ್ನಾಟಕ ರಾಜ್ಯದಲ್ಲಿನ ಯಾವುದೇ ಸ್ಥಿರಾಸ್ತಿಯನ್ನು ನಿರ್ಮಾಣ / ಅಭಿವೃದ್ಧಿ / ಮಾರಾಟ/ ವರ್ಗಾವಣೆ ಉದ್ದೇಶಕ್ಕಾಗಿ ಅಭಿವೃದ್ಧಿಕಾರರಿಗೆ ನೀಡಲಾಗಿದ್ದು, ಸ್ವತ್ತಿನ ಮಾರುಕಟ್ಟೆ ಮೌಲ್ಯವು | | ಸ್ಥಿರಾಸ್ತಿಯಲ್ಲಿ ನಿರ್ಮಾಣ, ಅಭಿವೃದ್ಧಿ, ಮಾರಾಟ ಬಹು ಘಟಕ ಹೊಂದಿದ ಕಟ್ಟಡವು ಸೇರಿದಂತೆ ಸ್ವತ್ತನ್ನು ಅಭಿವೃದ್ಧಿ ಪಡಿಸಲು, ಅಭಿವೃದ್ಧಿ ಪಡಿಸಿದ ನಂತರ ಅಭಿವೃದ್ಧಿ ಪಡಿಸಿದ ಸ್ವತ್ತನ್ನು ಅಭಿವೃದ್ಧಿಕಾರರು ಮತ್ತು ಸ್ವತ್ತಿನ ಮಾಲೀಕರು ಜಂಟಿಯಾಗಿ ಹೊಂದಿರಬೇಕೆಂಬ ನಿಬಂಧನೆಯೊಂದಿಗೆ ಸ್ವತ್ತನ್ನು ಅಭಿವೃದ್ಧಿಪಡಿಸಲು ಮಾಡಿಕೊಂಡ ಕರಾರು ಪತ್ರ<br>**ವಿವರಣೆ**<br>1) ಗುತ್ತಿಗೆ ಪಡೆದವರು ಎಂಬ ಪದವು 30 ವರ್ಷಗಳ ಅಥವಾ ನಿರಂತರವಾಗಿ ಅಥವಾ ಯಾವುದೇ ನಿರ್ದಿಷ್ಟ ಕಾಲಮಿತಿ ಇಲ್ಲದ ಅವಧಿಗೆ ಗುತ್ತಿಗೆಯನ್ನು ಹೊಂದಿದ ವ್ಯಕ್ತಿ ಎಂಬ ಅರ್ಥವನ್ನು ಹೊಂದಿರುತ್ತದೆ<br>2) ಕಟ್ಟಡ ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್ / ಫ್ಲಾಟ್ / ಕಛೇರಿ ಸ್ಥಳಾವಕಾಶ ಹೊಂದಿದ ಕಟ್ಟಡ ಅಥವಾ ಬಹುಮಹಡಿಗಳ ಕಟ್ಟಡದ ಒಂದು ಭಾಗ ಅಥವಾ ಎರಡೂ ಎಂಬುದನ್ನು ಹೊಂದಿರುತ್ತದೆ. | ಸ್ವತ್ತಿನ ಮಾರುಕಟ್ಟೆ ಮೌಲ್ಯ ಮತ್ತು / ಅಥವಾ ನಿರ್ಮಾಣದ ಅಂದಾಜು ವೆಚ್ಚ ಅಥವಾ ಉದ್ದೇಶಿತ ನಿರ್ಮಾಣ ಅಥವಾ ಅಭಿವೃದ್ಧಿಯ ಅಂದಾಜು ವೆಚ್ಚ ಅಥವಾ ಪ್ರತಿಫಲದ ಇವುಗಳಲ್ಲಿ ಯಾವುದು ಹೆಚ್ಚಿನದೋ ಅದರ ಮೌಲ್ಯದ ಪ್ರತಿ ಒಂದು ನೂರು ರೂಪಾಯಿ ಅಥವಾ ಅದರ ಭಾಗಾಂಶಕ್ಕೆ ಒಂದು ರೂಪಾಯಿ<br><br>ಅದೇ ಸ್ವತ್ತಿಗೆ ಸಂಬಂಧಿಸಿದಂತೆ ಅದೇ ಪಕ್ಷಕಾರರ ನಡುವೆ ಬರೆದುಕೊಡ ಲಾಗಿರುವ ಮೊಖ್ತಾರನಾಮೆಯ ಮೇಲೆ ಅನುಚ್ಛೇದ 5 ರ ಕಂಡಿಕೆ ಇ ಅಥವಾ ಎಫ್ ರಡಿಯಲ್ಲಿ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸಲಾಗಿದ್ದಲ್ಲಿ, ಈ ಕಂಡಿಕೆಯಡಿ ಪಾವತಿಸಬೇಕಾದ ಮುದ್ರಾಂಕ ಶುಲ್ಕವು ಅನುಚ್ಛೇದ 41(ಎಫ್)ರಂತೆ ಇರತಕ್ಕದ್ದು |
| | | | 1) ರೂ. 1 ಕೋಟಿಯನ್ನು ಮೀರದಿದ್ದಲ್ಲಿ | ರೂ. 10000/- | | |
| | | | 2) ರೂ. 1 ಕೋಟಿಯನು ಮೀರಿದ್ದು 2 ಕೋಟಿಯನ್ನು ಮೀರದಿದ್ದಲ್ಲಿ | ರೂ. 20000/- | | |
| | | | 3) 2 ಕೋಟಿಯನ್ನು ಮೀರಿದ್ದು 5 ಕೋಟಿಯನ್ನು ಮೀರದಿದ್ದಲ್ಲಿ | ರೂ. 50000/- | | |
| | | | 4) 5 ಕೋಟಿಯನ್ನು ಮೀರಿದ್ದು 10 ಕೋಟಿಯನ್ನು ಮೀರದಿದ್ದಲ್ಲಿ | ರೂ. 100000/- | | |
| | | | 5) 10 ಕೋಟಿಯನ್ನು ಮೀರಿದಲ್ಲಿ | ರೂ. 150000/- | | |

| | | | | | | |
|---|---|---|---|---|---|---|
| 11 | ಹಕ್ಕು ಬಿಡುಗಡೆ ಪತ್ರ | 45 (ಎ)<br>(i) ಮತ್ತು<br>(ii) | ಅನುಚ್ಛೇಧ 45 ಹಕ್ಕುಬಿಡುಗಡೆ ಪತ್ರವೆಂದರೆ ಯಾವುದೇ ಪತ್ರ (ಕಲಂ 24 ರಲ್ಲಿ ಅವಕಾಶ ಕಲ್ಪಿಸಿಲ್ಲದ)ದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಪರವಾಗಿ ಅಥವಾ ಯಾವುದೇ ನಿರ್ದಿಷ್ಟ ಸ್ವತ್ತಿನ ಬಗ್ಗೆ ತನ್ನ ಹಕ್ಕನ್ನು ಬಿಟ್ಟುಕೊಡುವಂತಹ ಪತ್ರ<br><br>A) ಹಕ್ಕು ಬಿಡುಗಡೆಯು ಕುಟುಂಬದ ಸದಸ್ಯರ ನಡುವೆ ಅಲ್ಲದಿದ್ದಲ್ಲಿ | | ಅನುಚ್ಛೇಧ 45 ಹಕ್ಕುಬಿಡುಗಡೆ ಪತ್ರವೆಂದರೆ ಯಾವುದೇ ಪತ್ರ (ಕಲಂ 24 ರಲ್ಲಿ ಅವಕಾಶ ಕಲ್ಪಿಸಿಲ್ಲದ) ಈ ಮೂಲಕ ಒಬ್ಬ ವ್ಯಕ್ತಿಯು / ಹಕ್ಕು ಬಿಡುಗಡೆದಾರನು ಒಂದು ಹಕ್ಕನ್ನು ಸದರಿ ಸ್ವತ್ತಿನಲ್ಲಿ ಮೊದಲೇ ಹಕ್ಕನ್ನು ಹೊಂದಿದ್ದ ಅಥವಾ ಪ್ರಸ್ತುತ ಹಕ್ಕನ್ನು ಹೊಂದಿರುವ ವ್ಯಕ್ತಿಯ ಪರವಾಗಿ ಅಥವಾ ಯಾವುದೇ ನಿರ್ದಿಷ್ಟ ಸ್ವತ್ತಿನ ಬಗ್ಗೆ ತನ್ನ ಹಕ್ಕನ್ನು ಬಿಟ್ಟುಕೊಡುವಂತಹ ಪತ್ರ | |
| | | | (i) ಹಕ್ಕು ಬಿಡುಗಡೆ ಪ್ರತಿಫಲವನ್ನು ಪಡೆಯದೇ ಮಾಡುತ್ತಿದ್ದಲ್ಲಿ | ಹಕ್ಕು ಬಿಡುಗಡೆಗೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 2.5 | (i) ಹಕ್ಕು ಬಿಡುಗಡೆಯ ಕುಟುಂಬದ ಸದಸ್ಯರ ನಡುವೆ ಅಲ್ಲದಿದ್ದ ಪಕ್ಷದಲ್ಲಿ. | ಬಿಡುಗಡೆಗೆ ಒಳಪಟ್ಟ ಹಕ್ಕು ಅಥವಾ ಭಾಗಶಃ ಹಕ್ಕಿನ ಮೊತ್ತ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಬಿಡುಗಡೆಗೆ ಪಡೆದ ಪ್ರತಿಫಲ ಈ ಮೂರರಲ್ಲಿ ಯಾವುದು ಹೆಚ್ಚಿನದೋ ಆ ಮೊತ್ತದ ಮೇಲೆ ಅನುಚ್ಛೇಧ 20 (i) ರ ಪ್ರಕಾರ ಅನ್ವಯವಾಗುವ ದರ |
| | | | (ii) ಪ್ರತಿಫಲವನ್ನು ಪಡೆದು ಹಕ್ಕು ಬಿಡುಗಡೆ ಮಾಡುತ್ತಿದ್ದಲ್ಲಿ | ಹಕ್ಕು ಬಿಡುಗಡೆಗೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಕ್ಕೆ ಅನ್ವಯ ವಾಗುವ ಮುದ್ರಾಂಕ ಶುಲ್ಕದ ಶೇ. 50 ರಷ್ಟು | | |
| | | | B) ಹಕ್ಕು ಬಿಡುಗಡೆಯು ಕುಟುಂಬದ ಸದಸ್ಯರ ನಡುವೆ ಇದ್ದಲ್ಲಿ<br>(ವಿವರಣೆ: ಕುಟುಂಬ ಪದದ ಅರ್ಥವು ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ, ಸಹೋದರಿ ಮೃತಪಟ್ಟ ಮಗನ ಹೆಂಡಿತ ಅಥವಾ ಮೃತಪಟ್ಟ ಮಗ ಅಥವಾ ಮಗಳ ಮಕ್ಕಳು ಎಂಬುದನ್ನು ಒಳಗೊಳ್ಳುತ್ತದೆ) | ರೂ. 1000/- | B) ಹಕ್ಕು ಬಿಡುಗಡೆಯು ಕುಟುಂಬದ ಸದಸ್ಯರ ನಡುವೆ ಇದ್ದಲಿ<br><br>(ವಿವರಣೆ: ಕುಟುಂಬ ಪದದ ಅರ್ಥವು ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ, ಸಹೋದರಿ ಮೃತಪಟ್ಟ ಮಗನ ಹೆಂಡಿತ ಅಥವಾ ಮೃತಪಟ್ಟ ಮಗ ಅಥವಾ ಮಗಳ ಮಕ್ಕಳು **ಮೃತ ಸಹೋದರನ ಹೆಂಡತಿ / ಮಕ್ಕಳು ಮೃತ ಸಹೋದರಿಯ ಗಂಡ / ಮಕ್ಕಳು** ಎಂಬುದನ್ನು ಒಳಗೊಳ್ಳುತ್ತದೆ) | ರೂ. 1000/- |

| | | | | | | |
|---|---|---|---|---|---|---|
| 12 | ವ್ಯವಸ್ಥಾ ಪತ್ರ | 48 | ಈ ಉಪ ಕಂಡಿಕೆಯ ಉದ್ದೇಶಕ್ಕಾಗಿ ವ್ಯವಸ್ಥಾ ಕರ್ತನಿಗೆ ಸಂಬಂಧಿಸಿದಂತೆ 'ಕುಟುಂಬ' ಪದವು **ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳ**ನ್ನು ಒಳಗೊಳ್ಳುತ್ತದೆ, | ರೂ. 1,000/- | ಈ ಉಪ ಕಂಡಿಕೆಯ ಉದ್ದೇಶಕ್ಕಾಗಿ ವ್ಯವಸ್ಥಾ ಕರ್ತನಿಗೆ ಸಂಬಂಧಿಸಿದಂತೆ 'ಕುಟುಂಬ' ಪದವು **ತಂದೆ, ತಾಯಿ, ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳ**ನ್ನು ಒಳಗೊಳ್ಳುತ್ತದೆ, | ರೂ. 1,000/- |

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರ ಪರವಾಗಿ,
ಬೆಂಗಳೂರು